**ಸಂಪುಟ:** 05 **ಸಂಚಿಕೆ:** 29 **ಪುಟಗಳು:** 08 ಭಾನುವಾರ 13 ಏಪ್ರಿಲ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನಮ್ಮ ಎಲ್ಲಾ ಹತಾಶೆ ಮತ್ತು ಅಡೆತಡೆಗಳ ಮೂಲಕ ನಮ್ಮನ್ನು ನೋಡುವ ಶಕ್ತಿಯೇ ದೃಢಸಂಕಲ್ಪ. ಇದು ಯಶಸ್ಸಿನ ಆಧಾರವಾಗಿರುವ ನಮ್ಮ ಇಚ್ಛಾಶಕ್ತಿಯನ್ನು ನಿರ್ಮಿಸಲು ಸಹಾಯ ಮಾಡುತ್ತದೆ.

## ವಿಧಾನಸೌಧಕ್ಕೆ ಮುತ್ತಿಗೆ ಯತ್ನ ನಿಖಿಲ್ ಪೊಲೀಸ್ ವಶಕ್ಕೆ

• **ಉದಯವಾಹಿನಿ, ಬೆಂಗಳೂರು**

ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಿಪಕ್ಷಗಳಾದ ಬಿಜೆಪಿ-ಜೆಡಿಎಸ್ ನಾಯಕರು ಪ್ರತ್ಯೇಕವಾಗಿ ಹೋರಾಟ ಆರಂಭಿಸಿದ್ದಾರೆ. ಒಂದೆಡೆ ಬಿಜೆಪಿ ಜನಾಕ್ರೋಶ ಯಾತ್ರೆ ಆರಂಭಿಸಿದ್ದರೆ ಮತ್ತೊಂದೆಡೆ ಜೆಡಿಎಸ್ ಪ್ರತಿಭಟನೆ, ವಿಧಾನಸೌಧಕ್ಕೆ ಮುತ್ತಿಗೆ ಯತ್ನ ನಡೆಸಿದೆ. ಸಾಕಪ್ಪಾ ಸಾಕು ಕಾಂಗ್ರೆಸ್ ಸರ್ಕಾರ ಎನ್ನುವ ಘೋಷವಾಕ್ಯದೊಂದಿಗೆ ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ರಾಜ್ಯ ಕಾಂಗ್ರೆಸ್ ಸರ್ಕಾರದ ದರ ಏರಿಕೆ ನೀತಿ ಹಾಗೂ ಭ್ರಷ್ಟಾಚಾರದ ವಿರುದ್ಧ ಜೆಡಿಎಸ್ ನಾಯಕರು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಕೇಂದ್ರ ಸಚಿವರು ಹಾಗೂ ಪಕ್ಷದ ರಾಜ್ಯಾಧ್ಯಕ್ಷರಾದ ಹೆಚ್.ಡಿ.ಕುಮಾರಸ್ವಾಮಿ ಅವರು, ಶಾಸಕಾಂಗ ಪಕ್ಷದ ನಾಯಕರಾದ ಸುರೇಶ್ ಬಾಬು, ಸಂಸದರಾದ ಮಲ್ಲೇಶ್ ಬಾಬು ಸೇರಿದಂತೆ ಪಕ್ಷದ ಎಲ್ಲಾ ಶಾಸಕರು, ವಿಧಾನ ಪರಿಷತ್ ಸದಸ್ಯರು, ಜಿಲ್ಲಾ ಅಧ್ಯಕ್ಷರು ಸೇರಿದಂತೆ ಅನೇಕ ನಾಯಕರು ಅಸಂಖ್ಯಾತ ಕಾರ್ಯಕರ್ತರು ಪಾಲ್ಗೊಂಡಿದ್ದರು. ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ನಿಖಿಲ್ ಕುಮಾರಸ್ವಾಮಿ, ರಾಜ್ಯ ಐದು ಗ್ಯಾರಂಟಿ ಕೊಟ್ಟಿದೆ ನಿಜ. ಆದರೆ, ಗ್ಯಾರಂಟಿ ಪಡೆದ ಪಾಪಕ್ಕೆ ಜನರು ದಿನನಿತ್ಯ ಬೆಲೆ ಏರಿಕೆ ಬರೆಗೆ ತುತ್ತಾಗುತ್ತಿದ್ದಾರೆ. ದಿನಕ್ಕೊಂದು ದರ ಏರಿಕೆ ಮಾಡುತ್ತಿದ್ದಾರೆ. ಕೊಟ್ಟಿದ್ದು ಅಲ್ಪ, ಜನರ ಮೇಲೆ ಬೆಟ್ಟದಷ್ಟು ಹೇರಿಕೆ ಮಾಡಿದ್ದಾರೆ. ಇದನ್ನು ಸಹಿಸುವ ಅಗತ್ಯ ಇಲ್ಲ. ಜನರು ಸರ್ಕಾರದ ವಿರುದ್ಧ ದಂಗೆ ಏಳದೇ ಬೇರೆ ದಾರಿ ಇಲ್ಲ ಎಂದು ಗುಡುಗಿದರು. ಪ್ರತಿಭಟನಾ ಸಭೆ ಬಳಿಕ ನಿಖಿಲ್ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಜೆಡಿಎಸ್ ನಾಯಕರು, ಕಾರ್ಯಕರ್ತರು ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ಪ್ರತಿಭಟನಾಕಾರರಿಗೆ ಪೊಲೀಸರು ತಡೆಯೊಡ್ಡಿದರು. ಪೊಲೀಸರು ಹಾಗೂ ಜೆಡಿಎಸ್ ನಾಯಕರ ನಡುವೆ ವಾಗ್ವಾದ ನಡೆದಿದ್ದು, ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಜೆಡಿಎಸ್ ಶಾಸಕರು, ಮುಖಂಡರನ್ನು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

## ಪಾಲಿಟೆಕ್ನಿಕ್ ಕಾಲೇಜು ಕೇಳಿದ್ರೆ ಕಾಂಗ್ರೆಸ್‌ಗೆ ಬಾ ಅಂತಾರೆ ಸಿಎಂ

• **ಉದಯವಾಹಿನಿ, ಬೆಂಗಳೂರು**


ಸಾಕಪ್ಪಾ ಸಾಕು ಕಾಂಗ್ರೆಸ್ ಸರ್ಕಾರ ಎನ್ನುವ ಘೋಷವಾಕ್ಯದೊಂದಿಗೆ ಬೀದಿಗಿಳಿದು ಹೋರಾಟ ನಡೆಸಿದ ಜೆಡಿಎಸ್ ಪಕ್ಷ ರಾಜ್ಯ ಕಾಂಗ್ರೆಸ್ ಸರ್ಕಾರದ ಸರಣಿ ದರ ಏರಿಕೆ ಹಾಗೂ ಭ್ರಷ್ಟಾಚಾರದ ವಿರುದ್ಧ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಬೃಹತ್ ಪ್ರತಿಭಟನೆ ನಡೆಸಿತು. ಹೋರಾಟದ ನಡುವೆ ಹಿರಿಯ ಶಾಸಕರೊಬ್ಬರು ಶಾಕಿಂಗ್ ನ್ಯೂಸ್ ವೊಂದನ್ನು ಹೇಳಿದ್ದಾರೆ. ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ತುರುವೇಕೆರೆ ಕ್ಷೇತ್ರದ ಶಾಸಕ ಎಂ.ಟಿ. ಕೃಷ್ಣಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರತಿಪಕ್ಷ ಶಾಸಕರಿಗೆ ಆಮಿಷ ಒಡ್ಡುತ್ತಿರುವ ಬಗ್ಗೆ ನೇರ ಆರೋಪ ಮಾಡಿದರು. ನಾನು ನನ್ನ ಕ್ಷೇತ್ರಕ್ಕೆ ಪಾಲಿಟೆಕ್ನಿಕ್ ಕಾಲೇಜು ಕೊಡಿ ಎಂದು ಕೇಳಿದರೆ ಕಾಂಗ್ರೆಸ್ ಪಕ್ಷಕ್ಕೆ ಬಾ ಎಂದು ಕರೆಯುತ್ತಾರೆ ಸಿದ್ದರಾಮಯ್ಯ. ಒಬ್ಬ ಮುಖ್ಯಮಂತ್ರಿ ಹೀಗೆ ಮಾಡಬಹುದಾ ಎಂದು ಬೇಸರ ವ್ಯಕ್ತಪಡಿಸಿದರು . ನಾವು ಎಂಎಲ್ಎಗಳಾಗಿ ಎರಡು ವರ್ಷವಾಯಿತು. ಕ್ಷೇತ್ರಗಳ ಅಭಿವೃದ್ಧಿಗೆ ಕೊನೆಪಕ್ಷ 50 ಕೋಟಿ ಕೊಟ್ಟಿಲ್ಲ. ಒಂದು ರಸ್ತೆಯ ಗುಂಡಿ ಮುಚ್ಚೋಕೆ ದುಡ್ಡು ಕೊಡುತ್ತಿಲ್ಲ. ಬರೀ ಲೂಟಿ ಬಿಟ್ಟರೆ ಏನು ಮಾಡುತ್ತಿಲ್ಲ. ಇದು ದಾರಿದ್ರ್ಯ ಸರ್ಕಾರ. ಗುಂಡಿ ಮುಚ್ಚೋಕೆ ಯೋಗ್ಯತೆ ಇಲ್ಲದವರು ಎರಡು ಸಾವಿರ ದುಡ್ಡು ಕೊಡ್ತಾರೆ. ಪಾಲಿಟೆಕ್ನಿಕ್ ಕಾಲೇಜು ಕೇಳಿದ್ರೆ ಕಾಂಗ್ರೆಸ್ ಗೆ ಬಾ ಅಂತಾರೆ ಸಿದ್ದರಾಮಯ್ಯ. ಯಾಕಪ್ಪ ಕಾಂಗ್ರೆಸ್ಸೂ.. ಕಾಂಗ್ರೆಸ್ ಮುಳುಗುತ್ತಿರುವ ಪಕ್ಷ. ನಾನು ಇನ್ನೂ ಇಪ್ಪತ್ತು ವರ್ಷಗಳಾದರೂ ಜೆಡಿಎಸ್ ನಲ್ಲಿಯೇ ಇರುತ್ತೇನೆ ಎಂದು ಅವರು ಹೇಳಿದರು.

## ಮೊಬೈಲ್, ಕಂಪ್ಯೂಟರ್‌ಗಳಿಗೆ ಸುಂಕದಿಂದ ವಿನಾಯಿತಿ: ಟ್ರಂಪ್

• **ಉದಯವಾಹಿನಿ, ಬೆಂಗಳೂರು**



ಅಮೆರಿಕದ ಕಸ್ಟಮ್ಸ್ ಮತ್ತು ಗಡಿ ರಕ್ಷಣೆ ಹೊರಡಿಸಿದ ಹೊಸ ಮಾರ್ಗಸೂಚಿಗಳ ಪ್ರಕಾರ, ಸ್ಮಾರ್ಟ್‌ಫೋನ್ ಗಳು ಮತ್ತು ಕಂಪ್ಯೂಟರ್‌ಗಳಿಗೆ ಸುಂಕಗಳಿಂದ ವಿನಾಯಿತಿ ನೀಡುವುದಾಗಿ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಟ್ರಂಪ್ ಅವರ ಶೇ. 125ರಷ್ಟು ಚೀನಾ ಸುಂಕ ಮತ್ತು ಬಹುತೇಕ ಎಲ್ಲಾ ಇತರ ದೇಶಗಳ ಮೇಲಿನ ಅವರ ಮೂಲ ಶೇ. 10ರಷ್ಟು ಜಾಗತಿಕ ಸುಂಕದಿಂದ ಉತ್ಪನ್ನಗಳನ್ನು ಹೊರಗಿಡುವ ಮೂಲಕ ಸುಂಕಗಳ ವ್ಯಾಪ್ತಿಯನ್ನು ಸಂಕುಚಿತಗೊಳಿಸುತ್ತವೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸರ್ಕಾರ ಸ್ಮಾರ್ಟ್ ಫೋನ್‌ಗಳು, ಕಂಪ್ಯೂಟರ್‌ಗಳು ಮತ್ತು ಇತರ ಎಲೆಕ್ಟ್ರಾನಿಕ್ಸ್ ಗಳನ್ನು ಅದರ ಪರಸ್ಪರ ಸುಂಕಗಳಿಂದ ವಿನಾಯಿತಿ ನೀಡಿದೆ. ಈ ನಿರ್ಧಾರ ಚೀನಾದಲ್ಲಿ ಐಫೋನ್‌ಗಳು ಹಾಗೂ ಇತರೆ ಉತ್ಪನ್ನಗಳನ್ನು ತಯಾರಿಸುವ ಆ್ಯಪಲ್‌ನಂತಹ ಟೆಕ್ ದೈತ್ಯ ಕಂಪನಿಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಹೊಸ ಮಾರ್ಗಸೂಚಿಗಳ ಪ್ರಕಾರ, ಸೆಮಿಕಂಡಕ್ಟರ್‌ಗಳು, ಸೌರ ಕೋಶಗಳು, ಫ್ಲಾಟ್ ಪ್ಯಾನಲ್ ಟಿವಿ ಡಿಸ್ಪ್ಲೇಗಳು, ಫ್ಲ್ಯಾಶ್ ಡ್ರೈವ್‌ಗಳು, ಮೆಮೊರಿ ಕಾರ್ಡ್‌ಗಳು ಮತ್ತು ಡೇಟಾವನ್ನು ಸಂಗ್ರಹಿಸಲು ಬಳಸುವ ಸಾಲಿಡ್-ಸ್ಟೇಟ್ ಡ್ರೈವ್ ಗಳು ಸೇರಿದಂತೆ ಇತರ ಎಲೆಕ್ಟ್ರಾನಿಕ್ ಸಾಧನಗಳು ಮತ್ತು ಘಟಕಗಳನ್ನು ಸಹ ಸುಂಕಗಳಿಂದ ಹೊರಗಿಡಲಾಗಿದೆ.





# ರಾಷ್ಟ್ರಪತಿಗೆ ಸುಪ್ರೀಂ ಗಡುವು

## ಗವರ್ನರ್ ನಡೆ ವಿರುದ್ಧ ಸುಪ್ರೀಂ' ಗರಂ!

**415 ಪುಟಗಳ ತೀರ್ಪು**



■ ಇತಿಹಾಸದಲ್ಲೇ ಮೊದಲ ಬಾರಿಗೆ ರಾಷ್ಟ್ರಪತಿಗಳಿಗೆ ಗಡುವು ■ ಮೂರು ತಿಂಗಳೊಳಗೆ ಮಸೂದೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು ಅವಶ್ಯಕ ■ ಮಸೂದೆಗಳನ್ನು ನಿರ್ಧರಿಸಲು ರಾಜ್ಯಪಾಲರು ■ ರಾಷ್ಟ್ರಪತಿಗಳಿಗೂ ಕಾಲಮಿತಿ ನಿಗದಿಪಡಿಸಿದ ಸುಪ್ರೀಂ ಕೋರ್ಟ್

**ತಮಿಳುನಾಡು ರಾಜ್ಯಪಾಲರನ್ನು ತರಾಟೆಗೆ ತೆಗೆದುಕೊಂಡ ಸುಪ್ರೀಂ**

ಸುಪ್ರೀಂ ಕೋರ್ಟ್ ತನ್ನ ತೀರ್ಪನ್ನು ಅಪ್ ಲೋಡ್ ಮಾಡಿದೆ. ಆ ತೀರ್ಪಿನಲ್ಲಿ ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ನವೆಂಬರ್ 2023ರಲ್ಲಿ 10 ಮಸೂದೆಗಳನ್ನು ರಾಷ್ಟ್ರಪತಿಗಳ ಪರಿಗಣನೆಗೆ ಕಾಯ್ದಿರಿಸಿದ್ದು ಕಾನೂನುಬಾಹಿರ ಮತ್ತು ತಪ್ಪಾಗಿದೆ ಎಂದು ಘೋಷಿಸಿದೆ. ಈ 10 ಮಸೂದೆಗಳನ್ನು ರಾಜ್ಯ ವಿಧಾನಸಭೆಯು ಈಗಾಗಲೇ ಮರುಪರಿಶೀಲಿಸಿ ರಾಜ್ಯಪಾಲರಿಗೆ ಮರಳಿಸಿತ್ತು.

| | |
|---|---|
| 1 | ದೇಶದಲ್ಲಿ ಮೊದಲ ಬಾರಿಗೆ ರಾಷ್ಟ್ರಪತಿಗಳು ಮಸೂದೆಗಳಿಗೆ ಒಪ್ಪಿಗೆ |
| 2 | ತಮಿಳುನಾಡು ರಾಜ್ಯಪಾಲರ ವಿರುದ್ಧದ ಪ್ರಕರಣ ರಾಜ್ಯ ಸರ್ಕಾರಕ್ಕೆ ಗೆಲುವು |
| 3 | ೩ ತಿಂಗಳೊಳಗೆ ಅಗತ್ಯ ಕ್ರಮ ಕೈಗೊಳ್ಳಲು ಕಾಲ ನಿಗದಿ |
| 4 | ನ್ಯಾಯಮೂರ್ತಿ ಜೆ.ಬಿ. ಪಾರ್ದಿವಾಲಾ ಮತ್ತು ನ್ಯಾಯಮೂರ್ತಿ ಮಹಾದೇವನ್ |
| 5 | ಸುಪ್ರೀಂ ಕೋರ್ಟ್ ತನ್ನ ೪೧೫ ಪುಟಗಳ ತೀರ್ಪು |

### ತಮಿಳುನಾಡಿನ ದಿಟ್ಟ ಹೆಜ್ಜೆ

**ಎಂ.ಕೆ. ಸ್ಟಾಲಿನ್ ನೇತೃತ್ವದ ತಮಿಳುನಾಡು ಸರ್ಕಾರ ರಾಜ್ಯಪಾಲರು ಅಥವಾ ರಾಷ್ಟ್ರಪತಿಗಳಿಂದ ಒಪ್ಪಿಗೆ ಪಡೆಯದೆ 10 ಕಾಯ್ದೆಗಳನ್ನು ಪ್ರಕಟಿಸಿದೆ. ರಾಜ್ಯ ಸರ್ಕಾರವೊಂದು ರಾಜ್ಯಪಾಲರ ಅನುಮೋದನೆಯಿಲ್ಲದೆ ಕಾಯ್ದೆಗಳನ್ನು ಪ್ರಕಟಿಸಿದ್ದು ಇದೇ ಮೊದಲು. ಇದರೊಂದಿಗೆ, ರಾಜ್ಯ ವಿಶ್ವವಿದ್ಯಾಲಯಗಳಿಗೆ ಉಪಕುಲಪತಿಗಳ ನೇಮಕದಲ್ಲಿನ ಎಲ್ಲಾ ಅಡೆತಡೆಗಳನ್ನು ಸ್ಟಾಲಿನ್ ಸರ್ಕಾರ ಬಗೆಹರಿಸಿಕೊಂಡಿದೆ.**

• **ಉದಯವಾಹಿನಿ, ನವದೆಹಲಿ**

ಸುಪ್ರೀಂ ಕೋರ್ಟ್ ಇದೇ ಮೊದಲ ಬಾರಿಗೆ, ರಾಷ್ಟ್ರಪತಿಗಳು ರಾಜ್ಯಪಾಲರಿಂದ ಪರಿಗಣನೆಗೆ ಕಾಯ್ದಿರಿಸಿದ ಮಸೂದೆಗಳ ಬಗ್ಗೆ ಉಲ್ಲೇಖವನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಇತ್ಯರ್ಥಪಡಿಸಬೇಕೆಂದು ಸೂಚಿಸಿದೆ. ತಮಿಳುನಾಡು ರಾಜ್ಯಪಾಲ ಆರ್ ಎನ್ ರವಿ ರಾಷ್ಟ್ರಪತಿಗಳ ಪರಿಗಣನೆಗೆ ಕಾಯ್ದಿರಿಸಿದ 10 ಮಸೂದೆಗಳನ್ನು ಸುಪ್ರೀಂಕೋರ್ಟ್ ತೆರವುಗೊಳಿಸಿದ ನಾಲ್ಕು ದಿನಗಳ ನಂತರ ಮತ್ತು ರಾಜ್ಯ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳ ಮೇಲೆ ಎಲ್ಲಾ ರಾಜ್ಯಪಾಲರು ಕಾರ್ಯನಿರ್ವಹಿಸಲು ಒಂದು ಸಮಯವನ್ನು ನಿಗದಿಪಡಿಸಿದ ನಂತರ, 415 ಪುಟಗಳ ತೀರ್ಪನ್ನು ಶುಕ್ರವಾರ ರಾತ್ರಿ 10.54ಕ್ಕೆ ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಅಪ್ ಲೋಡ್ ಮಾಡಲಾಗಿದೆ.

ಗೃಹ ಸಚಿವಾಲಯ ನಿಗದಿಪಡಿಸಿದ ಕಾಲಮಿತಿಯನ್ನು ಅಳವಡಿಸಿಕೊಳ್ಳುವುದು ಸೂಕ್ತವೆಂದು ನಾವು ಪರಿಗಣಿಸುತ್ತೇವೆ ಮತ್ತು ಉಲ್ಲೇಖವನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ರಾಷ್ಟ್ರಪತಿಗಳು ರಾಜ್ಯಪಾಲರು ತಮ್ಮ ಪರಿಗಣನೆಗೆ ಕಾಯ್ದಿರಿಸಿದ ಮಸೂದೆಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇವೆ. ಈ ಅವಧಿಯನ್ನು ಮೀರಿ ಯಾವುದೇ ವಿಳಂಬವಾದರೆ, ಸೂಕ್ತ ಕಾರಣಗಳನ್ನು ದಾಖಲಿಸಿ ಸಂಬಂಧಪಟ್ಟ ರಾಜ್ಯಕ್ಕೆ ತಿಳಿಸಬೇಕು. ರಾಜ್ಯಗಳು ಸಹ ಸಹಕರಿಸಬೇಕು ಮತ್ತು ಎದುರಾಗಬಹುದಾದ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸುವ ಮೂಲಕ ಸಹಕಾರವನ್ನು ವಿಸ್ತರಿಸಬೇಕು, ಕೇಂದ್ರ ಸರ್ಕಾರ ಮಾಡಿದ ಸಲಹೆಗಳನ್ನು ತ್ವರಿತವಾಗಿ ಪರಿಗಣಿಸಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ.

ಎಪ್ರಿಲ್ 8ರಂದು ನ್ಯಾಯಮೂರ್ತಿಗಳಾದ ಜೆಬಿ ಪರ್ದಿವಾಲಾ ಮತ್ತು ಆರ್ ಮಹದೇವನ್ ಅವರ ಪೀಠವು 10 ಮಸೂದೆಗಳನ್ನು ಎರಡನೇ ಸುತ್ತಿನಲ್ಲಿ ರಾಷ್ಟ್ರಪತಿಗಳ ಪರಿಗಣನೆಗೆ ಕಾಯ್ದಿರಿಸಿದ್ದು ಕಾನೂನುಬಾಹಿರ, ಕಾನೂನಿನಲ್ಲಿ ತಪ್ಪಾಗಿದೆ ಎಂದು ಪರಿಗಣಿಸಿತು.

ರಾಜ್ಯಪಾಲರು ಮಸೂದೆಯನ್ನು ರಾಷ್ಟ್ರಪತಿಗಳ ಪರಿಗಣನೆಗೆ ಕಾಯ್ದಿರಿಸಿದರೆ ಮತ್ತು ರಾಷ್ಟ್ರಪತಿಗಳು ಅದಕ್ಕೆ ಒಪ್ಪಿಗೆಯನ್ನು ತಡೆಹಿಡಿದರೆ, ಈ ನ್ಯಾಯಾಲಯದ ಮುಂದೆ ಅಂತಹ ಕ್ರಮವನ್ನು ಪ್ರಶ್ನಿಸಲು ರಾಜ್ಯ ಸರ್ಕಾರ ಮುಕ್ತವಾಗಿರುತ್ತದೆ ಎಂದು ನ್ಯಾಯಾಲಯ ಇದೇ ವೇಳೆ ಹೇಳಿದೆ. ಸಂವಿಧಾನದ 201ನೇ ವಿಧಿಯು ರಾಜ್ಯಪಾಲರಿಗೆ ಮಂಡಿಸಲಾದ ಮಸೂದೆಗಳಿಗೆ ಒಪ್ಪಿಗೆ ನೀಡಲು, ಒಪ್ಪಿಗೆಯನ್ನು ತಡೆಹಿಡಿಯಲು ಅಥವಾ ರಾಷ್ಟ್ರಪತಿಗಳ ಪರಿಗಣನೆಗೆ ಕಾಯ್ದಿರಿಸಲು ಅಧಿಕಾರ ನೀಡುತ್ತದೆ. ರಾಜ್ಯಪಾಲರು ಸಚಿವ ಸಂಪುಟ ನೀಡುವ ನೆರವು ಮತ್ತು ಸಲಹೆಯನ್ನು ಪಾಲಿಸುವುದು ಕಡ್ಡಾಯವಾಗಿದೆ ಎಂದು ಗಮನಿಸಿದ ಸುಪ್ರೀಂ ಕೋರ್ಟ್, ರಾಜ್ಯಪಾಲರು ಮಸೂದೆಯನ್ನು ರಾಷ್ಟ್ರಪತಿಗಳಿಗೆ ಎರಡನೇ ಸುತ್ತಿನಲ್ಲಿ ಮಂಡಿಸಿದ ನಂತರ ಅದನ್ನು ಅವರ ಪರಿಗಣನೆಗೆ ಕಾಯ್ದಿರಿಸಲು ಮುಕ್ತವಾಗಿಲ್ಲ ಎಂದು ಹೇಳಿದೆ. ವಿಧಾನಸಭೆ ಅಂಗೀಕರಿಸಿದ ಮಸೂದೆಗಳಿಗೆ ಒಪ್ಪಿಗೆ ನೀಡುವಲ್ಲಿ ವಿಳಂಬದ ಕುರಿತು ತಮಿಳುನಾಡು ಸರ್ಕಾರ ಮತ್ತು ರಾಜ್ಯಪಾಲರ ನಡುವಿನ ವಿವಾದದಲ್ಲಿ ಉತ್ತರಿಸಲು ಸುಪ್ರೀಂಕೋರ್ಟ್ ಈ ಹಿಂದೆ ಪ್ರಶ್ನೆಗಳನ್ನು ರೂಪಿಸಿತ್ತು.ರಾಜ್ಯಪಾಲರು ಒಪ್ಪಿಗೆ ನೀಡುವಲ್ಲಿ ವಿಳಂಬ ಮಾಡಿದ್ದರಿಂದ, 2020ರ ಒಂದು ಮಸೂದೆ ಸೇರಿದಂತೆ 12 ಮಸೂದೆಗಳು ತಮ್ಮ ಬಳಿ ಬಾಕಿ ಇವೆ ಎಂದು ಹೇಳಿಕೊಂಡು ತಮಿಳುನಾಡು ರಾಜ್ಯ ಸರ್ಕಾರ 2023ರಲ್ಲಿ ಸುಪ್ರೀಂಕೋರ್ಟ್ ಮೆಟ್ಟಿಲೇರಿತು.

### ಅಗತ್ಯಬಿದ್ದರೆ ನ್ಯಾಯಾಲಯಗಳ ಪ್ರವೇಶ

**ಕೋರ್ಟ್ ತನ್ನ ತೀರ್ಪಿನಲ್ಲಿ ಈ ವಿಚಾರವನ್ನು ಉಲ್ಲೇಖಿಸಿದೆ. ರಾಷ್ಟ್ರಪತಿಯವರು ಮಸೂದೆಗಳನ್ನು ಪರಿಗಣಿಸಲು ಕಾಲಮಿತಿ ಇಲ್ಲದಿದ್ದರೂ, ಅನಿರ್ದಿಷ್ಟವಾಗಿ ವಿಳಂಬ ಮಾಡುವುದನ್ನು ಸುಪ್ರೀಂಕೋರ್ಟ್ ಒಪ್ಪುವುದಿಲ್ಲ. ಮೂರು ತಿಂಗಳೊಳಗೆ ನಿರ್ಧಾರ ತೆಗೆದುಕೊಳ್ಳಬೇಕು, ಮತ್ತು ವಿಳಂಬವಾದರೆ ಸಮಂಜಸವಾದ ಕಾರಣಗಳನ್ನು ನೀಡಬೇಕು. ಹಾಗೆಯೇ, ಅಗತ್ಯಬಿದ್ದರೆ ನ್ಯಾಯಾಲಯಗಳು ಮಧ್ಯಪ್ರವೇಶಿಸಬಲ್ಲವು ಎಂದು ಇದೇ ವೇಳೆ ತನ್ನ ತೀರ್ಪಿನಲ್ಲಿ ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿದೆ.**

### ಸುಪ್ರೀಂಕೋರ್ಟ್ ಹೇಳಿದ್ದೇನು...

**ಈ ಅವಧಿಯನ್ನು ಮೀರಿ ವಿಳಂಬವಾದರೆ ಸೂಕ್ತ ಕಾರಣಗಳನ್ನು ದಾಖಲಿಸುವ ಮೂಲಕ ಸಂಬಂಧಪಟ್ಟ ರಾಜ್ಯಕ್ಕೆ ತಿಳಿಸಬೇಕಾಗುತ್ತದೆ ಎಂದು ಸುಪ್ರೀಂಕೋರ್ಟ್ ತನ್ನ ತೀರ್ಪಿನಲ್ಲಿ ತಿಳಿಸಿದೆ. ರಾಜ್ಯಗಳು ಸಹ ಸಹಕಾರಿಯಾಗಿರಬೇಕು ಮತ್ತು ಎತ್ತಲಾಗುವ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಮತ್ತು ಕೇಂದ್ರ ಸರ್ಕಾರ ನೀಡುವ ಸಲಹೆಗಳನ್ನು ತ್ವರಿತವಾಗಿ ಪರಿಗಣಿಸುವ ಮೂಲಕ ಸಹಕರಿಸಬೇಕು. ಏಪ್ರಿಲ್ 8ರಂದು ನ್ಯಾಯಮೂರ್ತಿಗಳಾದ ಜೆಬಿ ಪಾರ್ದಿವಾಲಾ ಮತ್ತು ಆರ್ ಮಹಾದೇವನ್ ಅವರ ಪೀಠವು ರಾಷ್ಟ್ರಪತಿಗಳ ಪರಿಗಣನೆಗೆ ಎರಡನೇ ಸುತ್ತಿನಲ್ಲಿ 10 ಮಸೂದೆಗಳನ್ನು ಕಾಯ್ದಿರಿಸುವ ನಿರ್ಧಾರವನ್ನು ರದ್ದುಗೊಳಿಸಿತು. ಇದು ಕಾನೂನು ಬಾಹಿರ ಮತ್ತು ಕಾನೂನಿನಲ್ಲಿ ದೋಷಪೂರಿತವಾಗಿದೆ ಎಂದು ಹೇಳಿದೆ. ರಾಜ್ಯಪಾಲರು ಮಸೂದೆಯನ್ನು ರಾಷ್ಟ್ರಪತಿಗಳ ಪರಿಗಣನೆಗೆ ಕಾಯ್ದಿರಿಸಿದರೆ ಮತ್ತು ರಾಷ್ಟ್ರಪತಿಗಳು ಅದಕ್ಕೆ ತಮ್ಮ ಒಪ್ಪಿಗೆ ನೀಡದಿದ್ದರೆ ಈ ನ್ಯಾಯಾಲಯದ ಮುಂದೆ ಅಂತಹ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರ ಮುಕ್ತವಾಗಿರುತ್ತದೆ ಎಂದು ನ್ಯಾಯಾಲಯವು ತನ್ನ ಸರಳ ಮಾತುಗಳಲ್ಲಿ ಹೇಳಿದೆ.**



**ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಮತ್ತು ಆರ್. ಮಹಾದೇವನ್ ಅವರ ಪೀಠವು, ಯಾವುದೇ ಮಸೂದೆಯ ಮೇಲೆ 'ಸಂಪೂರ್ಣ ವೀಟೋ' ಅಧಿಕಾರವನ್ನು ಚಲಾಯಿಸುವ ಅಧಿಕಾರ ರಾಜ್ಯಪಾಲರಿಗೆ ಇಲ್ಲವೆಂದು ಹೇಳಿದೆ. ಅದೇ ಮಾನದಂಡವು ಆರ್ಟಿಕಲ್ 201ರ ಅಡಿ ರಾಷ್ಟ್ರಪತಿಗಳಿಗೂ ಅನ್ವಯಿಸುವುದಿಲ್ಲ ಎಂಬುದಕ್ಕೆ ಯಾವುದೇ ಕಾರಣವಿಲ್ಲ. ರಾಷ್ಟ್ರಪತಿಗಳೂ ಈ ನಿಯಮಕ್ಕೆ ಹೊರತಲ್ಲ. ನಮ್ಮ ಸಂವಿಧಾನದಾದ್ಯಂತ ವ್ಯಾಪಿಸಿರುವ ಈ ನಿಯಮಕ್ಕೆ ರಾಷ್ಟ್ರಪತಿಗಳು ಕೂಡಾ ಹೊರತಲ್ಲ. ಇಂತಹ ಅನಿಯಂತ್ರಿತ ಅಧಿಕಾರವು ಈ ಎರಡೂ ಸಾಂವಿಧಾನಿಕ ಹುದ್ದೆಗಳಲ್ಲಿ ಉಳಿಯಲು ಸಾಧ್ಯವಿಲ್ಲ ಎಂದು 415 ಪುಟಗಳ ತೀರ್ಪಿನಲ್ಲಿ ಪೀಠ ಸ್ಪಷ್ಟವಾಗಿ ಹೇಳಿದೆ.**

**ಈ ನಿಯಮಕ್ಕೆ ರಾಷ್ಟ್ರಪತಿಗಳೂ ಹೊರತಲ್ಲ**

## ಬಿಪಿಎಲ್ ಪಡಿತರದ ಜೊತೆಗೆ ದಿನಬಳಕೆ ವಸ್ತುಗಳನ್ನು ನೀಡಲು ಒತ್ತಾಯ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ಬಿಪಿಎಲ್ ಕಾರ್ಡುದಾರರಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ವಿತರಣೆ ಮಾಡುತ್ತಿರುವ ತಲಾ 5 ಕೆಜಿ ಅಕ್ಕಿಯ ಜೊತೆ ದಿನಬಳಕೆ ವಸ್ತುಗಳಾದ ಬೇಳೆ, ಉಪ್ಪು, ಸಕ್ಕರೆ ಮತ್ತು ಅಡುಗೆ ಎಣ್ಣೆ ಸೇರಿದಂತೆ ದಿನಬಳಕೆ ವಸ್ತುಗಳನ್ನು ರಿಯಾಯಿತಿ ದರದಲ್ಲಿ ರಾಜ್ಯದ ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ಮೂಲಕ ರಿಯಾಯಿತಿ ದರದಲ್ಲಿ ವಿತರಣೆ ಮಾಡಿಸಲು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಆಹಾರ ಸಚಿವರಾದ ಕೆಎಚ್ ಮುನಿಯಪ್ಪ ರವರು ಕ್ರಮ ಕೈಗೊಳ್ಳಬೇಕು. ಇದರಿಂದ ಪಡಿತರ ಕಾರ್ಡುದಾರರು ಸತತ ಬೆಲೆ ಏರಿಕೆಯಿಂದ ತತ್ತರಿಸಿ ಹೋಗುತ್ತಿದ್ದು, ಬಡವರ್ಗದ ಜನರ ಕುಟುಂಬ ನಿರ್ವಹಣೆಗೆ ಅನುಕೂಲವಾಗಲಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಉತ್ತಮ ಹೆಸರು ಬರಲಿದೆ ಎಂದು ರಾಜ್ಯ ಸರ್ಕಾರಿ ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಮತ್ತು ರಾಷ್ಟ್ರೀಯ ಕಾರ್ಯಾಧ್ಯಕ್ಷ ಕೃಷ್ಣಪ್ಪ ಒತ್ತಾಯಿಸಿದ್ದಾರೆ.



ಈ ಹಿಂದೆ ರಾಜ್ಯ ಸರ್ಕಾರ 2013ನೇ ಸಾಲಿನಲ್ಲಿ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಅಂದಿನ ಮುಖ್ಯಮಂತ್ರಿಗಳಾಗಿದ್ದು ಅಂದಿನ ದಿನಗಳಲ್ಲಿ ಪಡಿತರ ವಸ್ತುಗಳ ಜೊತೆಗೆ ನ್ಯಾಯಬೆಲೆ ಅಂಗಡಿಗಳ ಮೂಲಕ ಮುಖ್ಯಮಂತ್ರಿಗಳು ಮತ್ತು ಆಹಾರ ಸಚಿವರು ಹಾಗೂ ಸರ್ಕಾರದ ಲಾಂಛನವಿರುವ ಚಿತ್ರದ ಪ್ಯಾಕೆಟ್ ಗಳ ಮುಖಾಂತರ ದಿನ ಬಳಕೆ ವಸ್ತುಗಳನ್ನು ನೀಡಲಾಗುತ್ತಿತ್ತು. ಅದೇ ರೀತಿಯಾಗಿ ಸರ್ಕಾರ ದಿನ ಬಳಕೆ ವಸ್ತುಗಳ ವಿತರಣೆಗೆ ಅವಕಾಶ ಕಲ್ಪಿಸಬೇಕೆಂದು ರಾಜ್ಯ ಸರ್ಕಾರಿ ಪಡಿತರ ವಿತರಕರ ಸಂಘ ಒತ್ತಾಯಿಸಿದೆ.




**ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಲಿ**

**ರಾಜ್ಯ ಸರ್ಕಾರ ರಾಜ್ಯದ ಸಗಟು ಮಳಿಗೆಗಳಿಗೆ ಎಲೆಕ್ಟ್ರಾನಿಕ್ಸ್ ಸ್ಕೇಲ್, ಸಿಸಿಟಿವಿ ಕ್ಯಾಮೆರಾ ಹಾಗೂ ಸಾಗಾಣಿಕೆ ಮಾಡುವ ಲಾರಿಗಳಿಗೆ ಜಿಪಿಎಸ್ ಅಳವಡಿಸಲು ಎರಡನೇ ಬಾರಿ ಬಜೆಟ್ ಅಧಿವೇಶನದಲ್ಲಿ 33 ಕೋಟಿ ರೂ. ಹಣವನ್ನು ಬಿಡುಗಡೆ ಮಾಡಿದ್ದರು. ಇಲ್ಲಿಯವರೆಗೆ ಅಳವಡಿಸದೆ ತೂಕದಲ್ಲಿ ವ್ಯತ್ಯಾಸ ಮಾಡುತ್ತಿದ್ದು ಕಂಡು ಬರುತ್ತಿದೆ. ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕಾಗಿದೆ ಎಂದು ರಾಜ್ಯ ಪಡಿತರ ವಿತರಕರ ಸಂಘದ ಅಧ್ಯಕ್ಷ ಕೃಷ್ಣಪ್ಪ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮತ್ತು ಆಹಾರ ಸಚಿವರಾದ ಕೆಎಚ್ ಮುನಿಯಪ್ಪರವರಿಗೆ ಒತ್ತಾಯಿಸಿದ್ದಾರೆ.**

# ಕರ್ನಾಟಕ ಜಾತಿ ಗಣತಿಯ ಪ್ರವರ್ಗವಾರು ಲೆಕ್ಕಾಚಾರ

■ ಪ್ರವರ್ಗವಾರು ಜನಸಂಖ್ಯೆಯ ಪಟ್ಟಿ ಲಭ್ಯ ■ ಒಟ್ಟು ಪ್ರವರ್ಗಗಳ ಜನಸಂಖ್ಯೆ 4 ಕೋಟಿ 16 ಲಕ್ಷದ ಮೂವತ್ತು ಸಾವಿರದ ನೂರಾ ಐವತ್ತ ಮೂರು

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ -2015 (ಜಾತಿ ಗಣತಿ) ವರದಿಯಲ್ಲಿರುವ ಮತ್ತಷ್ಟು ಅಂಶಗಳು ಬೆಳಕಿಗೆ ಬಂದಿವೆ. ಅದರಂತೆ, ಪ್ರವರ್ಗವಾರು ಜನಸಂಖ್ಯೆ ಎಷ್ಟಿದೆ ಎಂಬುದರ ಸಂಪೂರ್ಣ ವಿವರ ಲಭ್ಯವಾಗಿದೆ.

ವರದಿಯ ಪ್ರಕಾರ, ಎಲ್ಲಾ ಪ್ರವರ್ಗಗಳಡಿ ಒಟ್ಟು ಜನಸಂಖ್ಯೆ ನಾಲ್ಕು ಕೋಟಿ ಹದಿನಾರು ಲಕ್ಷದ ಮೂವತ್ತು ಸಾವಿರದಷ್ಟು (4,16,36,153) ಇದೆ. ಇವುಗಳಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ಒಂದು ಕೋಟಿ ಒಂಭತ್ತು ಲಕ್ಷದ ಇಪ್ಪತ್ತೊಂಭತ್ತು ಸಾವಿರದ ಮುನ್ನೂರ ನಲವತ್ತೇಳು (9,29,347) ಇದೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ನಲವತ್ತೆರಡು ಲಕ್ಷದ ಎಂಭತ್ತೊಂದು ಸಾವಿರದ ಇನ್ನೂರ ಎಂಭತ್ತೊಂಭತ್ತು (42,81,289) ಇದೆ. ಇನ್ನು, ಸಾಮಾನ್ಯ ವರ್ಗದ ಜನಸಂಖ್ಯೆ ಇಪ್ಪತ್ತೊಂಭತ್ತು ಲಕ್ಷದ ಎಪ್ಪತ್ತನಾಲ್ಕು ಸಾವಿರದ ನೂರಾ ಐವತ್ತ ಮೂರು (29,74,153) ಇದೆ.



**ಪ್ರವರ್ಗವಾರು ಜನಸಂಖ್ಯೆ**

| ಪರಿಶಿಷ್ಟರು | ಜನಸಂಖ್ಯೆ |
|---|---|
| ಪರಿಶಿಷ್ಟ ಜಾತಿ | 9,29,347 |
| ಪರಿಶಿಷ್ಟ ಪಂಗಡ | 42,81,289 |
| ಸಾಮಾನ್ಯ ವರ್ಗ | 29,74,153 |
| ಒಟ್ಟು ಜನಸಂಖ್ಯೆ | 4,16,36,153 |

ಇನ್ನು ಪ್ರವರ್ಗ 1ಎ ಅಡಿಯಲ್ಲಿನ ಜನಸಂಖ್ಯೆ 34 ಲಕ್ಷದ 96 ಸಾವಿರದ 638 ಇದ್ದರೆ, ಪ್ರವರ್ಗ 1 ಬಿ ಜನಸಂಖ್ಯೆ 73 ಲಕ್ಷದ 92 ಸಾವಿರದ 313 ಇದೆ. ಅತ್ತ, ಪ್ರವರ್ಗ 2ಎ ಜನಸಂಖ್ಯೆ 77 ಲಕ್ಷದ 78 ಸಾವಿರದ ಇನ್ನೂರ ಒಂಭತ್ತು ಇದ್ದರೆ, ಪ್ರವರ್ಗ 2ಬಿ ಜನಸಂಖ್ಯೆ 75 ಲಕ್ಷದ 25 ಸಾವಿರದ 809 (75,25,880) ಇದೆ.

ಪ್ರವರ್ಗ 3 ಎ ಜನಸಂಖ್ಯೆಯು ಎಪ್ಪತ್ತೆರಡು ಲಕ್ಷದ ತೊಂಭತ್ತೊಂಭತ್ತು ಸಾವಿರದ ಐದು ನೂರಾ ಎಪ್ಪತ್ತೇಳು (72,99,577) ಇದ್ದರೆ, ಪ್ರವರ್ಗ 3 ಬಿ ಜನಸಂಖ್ಯೆಯು ಎಂಬತ್ತೊಂದು ಲಕ್ಷದ ಮೂವತ್ತೇಳು ಸಾವಿರದ ಐದು ನೂರಾ ಮೂವತ್ತಾರು (81,37,536) ಇದೆ.

**ಪ್ರವರ್ಗವಾರು ಜನಸಂಖ್ಯಾ ಪಟ್ಟಿ**

| ಪ್ರವರ್ಗಗಳು | ಜನಸಂಖ್ಯೆ |
|---|---|
| ಪ್ರವರ್ಗ 1ಎ | 34,96,638 |
| ಪ್ರವರ್ಗ 1ಬಿ | 73,92,313 |
| ಪ್ರವರ್ಗ 2ಎ | 77,78,209 |
| ಪ್ರವರ್ಗ 2ಬಿ | 75,25,880 |
| ಪ್ರವರ್ಗ 3ಎ | 72,99,577 |
| ಪ್ರವರ್ಗ 3ಬಿ | 81,37,536 |

**ಮುಸ್ಲಿಮರು, ಲಿಂಗಾಯತರು, ಒಕ್ಕಲಿಗರು ಹಾಗೂ ಇತರರ ಜನಸಂಖ್ಯೆ**

| ಸಮುದಾಯದ ಹೆಸರು | ಅಂದಾಜು ಜನಸಂಖ್ಯೆ |
|---|---|
| ಮುಸ್ಲಿಂ | 70 ಲಕ್ಷ |
| ಲಿಂಗಾಯತರು | 65 ಲಕ್ಷ |
| ಒಕ್ಕಲಿಗರು | 60 ಲಕ್ಷ |
| ಕುರುಬರು | 45 ಲಕ್ಷ |
| ಈಡಿಗರು | 15 ಲಕ್ಷ |
| ಪರಿಶಿಷ್ಟ ಪಂಗಡ | 40.45 ಲಕ್ಷ |
| ವಿಶ್ವಕರ್ಮ | 15 ಲಕ್ಷ |
| ಬೆಸ್ತರು | 15 ಲಕ್ಷ |
| ಬ್ರಾಹ್ಮಣ | 14 ಲಕ್ಷ |
| ಗೊಲ್ಲ | 10 ಲಕ್ಷ |
| ಮಡಿವಾಳ | 6 ಲಕ್ಷ |
| ಕುಂಬಾರ | 5 ಲಕ್ಷ |
| ಸವಿತಾ ಸಮಾಜ | 5 ಲಕ್ಷ |

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.99 ₹/L ಬಂಗಾರ: ₹9,567/Gram24ct ₹8,770/Gram22ct ಬೆಳ್ಳಿ: ₹100.00/Gram

# ಬೆಸ್ಕಾಂ ಅಲರ್ಟ್: ವಾರಾಂತ್ಯ ಈ ಪ್ರಮುಖ ಪ್ರದೇಶಗಳಲ್ಲಿ ಕರೆಂಟ್ ಕಟ್

• ಉದಯವಾಹಿನಿ, ಬೆಂಗಳೂರು

ಬೆಸ್ಕಾಂ ತುರ್ತು ಕಾಮಗಾರಿ ಹಿನ್ನೆಲೆ ಬೆಂಗಳೂರಿನಲ್ಲಿ ಏಪ್ರಿಲ್ 13ರ ಭಾನುವಾರ ಹಲವು ಪ್ರದೇಶಗಳಲ್ಲಿ ವಿದ್ಯುತ್ ಕಡಿತವಾಗಲಿದೆ. ಈ ಬಗ್ಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. 66/11ಕೆ.ವಿ 'ಸಿ' ಸ್ಟೇಷನ್'' ನಲ್ಲಿ ತುರ್ತು ನಿರ್ವಹಣಾ ಕೆಲಸಗಳನ್ನು ನಿರ್ವಹಿಸುವುದರಿಂದ ಏಪ್ರಿಲ್ 13ರ ಭಾನುವಾರ ಬೆಳಿಗ್ಗೆ 11:00 ಗಂಟೆಯಿಂದ ಮಧ್ಯಾಹ್ನ ಮೂರು ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗುವುದು ಎಂದು ಬೆಸ್ಕಾಂ ಪ್ರಕಟಣೆ ಹೊರಡಿಸಿದೆ.

**ಯಾವೆಲ್ಲಾ ಪ್ರದೇಶಗಳಲ್ಲಿ ಕರೆಂಟ್ ಕಟ್:** ವಿಧಾನಸೌಧ, ಗಣೇಶ ದೇವಸ್ಥಾನ ಆರ್.ಎಂ.ಯು., ಮಿಲ್ಲರ್ ರಸ್ತೆ., ಜಯಮಹಲ್, ಎಂ.ಕೆ. ಬೀದಿ., ಕನ್ನಿಂಗ್ಹ್ಯಾಮ್ ರಸ್ತೆ, ಕೆಂಪ್ ರಸ್ತೆ, ಬೆನ್ಸನ್ ಟೌನ್, ಸ್ಪೆನ್ಸರ್ ರಸ್ತೆ, ಎಸ್.ಜಿ. ರಸ್ತೆ, ಆರ್.ಎಂ.ಝುಡ್. ಮಿಲೇನಿಯಾ, ಬಿ ಎಲ್ಲಿ ಆಸ್ಪತ್ರೆ, ಚಿಕ್ಕಬಜಾರ್ ರಸ್ತೆ, ಜೇನಿವಾ ಹೌಸ್, ತಿಮ್ಮಯ್ಯ ರಸ್ತೆ, ಟಾಸ್ಕರ್ ಪಟ್ಟಣ, ಪಿ.ಜಿ. ಹಳ್ಳಿ, ಹೈನ್ಸ್ ರಸ್ತೆ, ಚಂದ್ರಯ್ಯ, ಮುನೇಶ್ವರ ನಗರ, ಶಿವಾಜಿನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳುಲ್ಲಿ ವಿದ್ಯುತ್ ವ್ಯತ್ಯವಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



**ಬೆಸ್ಕಾಂ ವ್ಯಾಪ್ತಿಯ ವಿದ್ಯುತ್ ಅವಘಡ; 6 ತಿಂಗಳಲ್ಲಿ 118 ಸಾವು:** ಕಳೆದ ಆರು ತಿಂಗಳಲ್ಲಿ ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ ವಿದ್ಯುತ್ ಅವಘಡಗಳಿಂದ 118 ಜನರು ಸಾವನ್ನಪ್ಪಿದ್ದಾರೆ. ಇದು ಹಿಂದಿನ ದಶಕದ ಸರಾಸರಿ ವಾರ್ಷಿಕ ಸಾವಿನ ಸಂಖ್ಯೆಗಿಂತ ಹೆಚ್ಚಾಗಿದೆ. ಬೆಸ್ಕಾಂನ ಈ ಆತಂಕಕಾರಿ ಅಂಕಿ ಅಂಶವನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಸಲ್ಲಿಸಿದೆ.

ವಿದ್ಯುತ್ ದರ ಪರಿಷ್ಕರಣೆ ಪ್ರಸ್ತಾವನೆಯಲ್ಲಿ ಈ ಮಾಹಿತಿಯನ್ನು ನೀಡಲಾಗಿದೆ. 2024-25ನೇ ಸಾಲಿನ ಅಂತಿಮ ಅಂಕಿಅಂ ಶಗಳು ಇನ್ನೂ ಬಿಡುಗಡೆಯಾಗಿಲ್ಲ. ಆದರೆ, ಫೆಬ್ರವರಿ ವೇಳೆಗೆ ಒಟ್ಟು ಸಾವಿನ ಸಂಖ್ಯೆ 150 ದಾಟಿದೆ ಎಂದು ಬೆಸ್ಕಾಂ ಮೂಲಗಳು ತಿಳಿಸಿವೆ. 2018-2019ರಲ್ಲಿ 136 ಸಾವುಗಳು ಸಂಭವಿಸಿದ್ದವು. ಇದುವರೆಗಿನ ದಾಖಲೆ ಯಲ್ಲಿ ಇದೇ ಅತಿ ಹೆಚ್ಚು ಎಂದು ಬೆಸ್ಕಾಂ ಹೇಳಿದೆ. ಪಾದಚಾರಿ ಮಾರ್ಗಗಳಲ್ಲಿ ತಂತಿಗಳು ತುಂಡಾಗಿ ನೇತಾಡುವುದು, ಬಿದ್ದಿರುವುದು ಸಾಮಾನ್ಯ. ಇಂಥ ಕಡೆ ಗಳಲ್ಲಿ ನಡೆಯಲು ಭಯವಾಗುತ್ತದೆ. ಒಂದು ಹೆಜ್ಜೆ ಇಟ್ಟರೆ ಮಾರಕವಾಗಬಹುದು. ಮಳೆ ಗಾಲದಲ್ಲಿ ಇನ್ನೂ ಸಂಕಷ್ಟ. 2023ರಲ್ಲಿ ಎಸ್‌ಜಿ ಪಾಳ್ಯ ಮುಖ್ಯ ರಸ್ತೆಯಲ್ಲಿರುವ ವಿದ್ಯುತ್ ಕಂಬವೊಂದರಲ್ಲಿ ನೇತಾಡುತ್ತಿದ್ದ ಆಪ್ಟಿಕಲ್ ಫೈಬರ್ ಕೇಬಲ್ ಚಲಿಸುವ ನೀರಿನ ಟ್ಯಾಂಕರ್‌ಗೆ ತಗುಲಿ ಕುಸಿದು ಬಿದ್ದಿತ್ತು. ಶಾಲೆಗೆ ವಿದ್ಯಾರ್ಥಿಯೊಬ್ಬ ಕೇಬಲ್ ತಗುಲಿ ತೀವ್ರ ಸುಟ್ಟ ಗಾಯಗಳಿಗೆ ಒಳಗಾಗಿದ್ದ ಘಟನೆ ದಾಖಲಾಗಿತ್ತು ಎಂದು ಸ್ಥಳೀಯ ನಿವಾಸಿಯೊಬ್ಬರು ಹೇಳಿದರು.

**ಸಾರ್ವಜನಿಕರ ನಿರ್ಲಕ್ಷ್ಯವೇ ಅವಘಡಕ್ಕೆ ಕಾರಣ**

**ಸಾರ್ವಜನಿಕರ ನಿರ್ಲಕ್ಷ್ಯವೇ ಇದಕ್ಕೆ ಕಾರಣ ಎಂದು ಅವರು ದೂರಿದ್ದಾರೆ. 2024ರ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಈ ದುರ್ಘಟನೆಗಳು ಸಂಭವಿಸಿವೆ. ಬೆಂಗಳೂರು ನಗರ, ಗ್ರಾಮಾಂತರ, ದಾವಣಗೆರೆ, ತುಮಕೂರು, ರಾಮನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಲ್ಲಿ ಈ ಅವಘಡಗಳು ಸಂಭವಿಸಿವೆ. ಇದೇ ಅವಧಿಯಲ್ಲಿ 61 ಪ್ರಾಣಿಗಳು ವಿದ್ಯುತ್ ಅವಘಡಗಳಿಂದ ಸಾವನ್ನಪ್ಪಿವೆ ಎಂದು ಬೆಸ್ಕಾಂ ಅಂಕಿ ಅಂಶ ಬಿಡುಗಡೆ ಮಾಡಿದೆ.**

## ಜಾತಿಗಣತಿ ವರದಿ: ಸಚಿವರ ಸಮರ್ಥನೆ

• ಉದಯವಾಹಿನಿ, ಬೆಂಗಳೂರು

ಜಾತಿ ಜನಗಣತಿಯ ವರದಿ ಸಂಪುಟದಲ್ಲಿ ಮಂಡನೆಯಾಗುತ್ತಿದ್ದಂತೆ ಸಂಪುಟದ ಸಚಿವರು ಅದನ್ನು ಬಲವಾಗಿ ಸಮರ್ಥಿಸಿಕೊಳ್ಳಲು ಮುಂದಾಗಿದ್ದಾರೆ.

ಹಿಂದುಳಿದ ವರ್ಗಗಳ ಅಭಿವೃದ್ಧಿ ಸಚಿವ ಶಿವರಾಜ್ ತಂಗಡಗಿ ಆಯೋಗದಿಂದ ನಡೆಸಲಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ವರದಿ ವೈಜ್ಞಾನಿಕವಾಗಿದೆ ಎಂದು ಹೇಳಿದ್ದಾರೆ. ಬಿಜೆಪಿಯವರು ರಾಜಕೀಯ ಕಾರಣಕ್ಕಾಗಿ ವಿರೋಧ ಮಾಡುತ್ತಿದ್ದಾರೆ. 1.65 ಲಕ್ಷ ಜನ ಸಮೀಕ್ಷೆಯಲ್ಲಿ ಭಾಗವಹಿಸಿದ್ದರು. ವೈಜ್ಞಾನಿಕವಾಗಿ ಮಾಹಿತಿಗಳನ್ನು ಕಲೆ ಹಾಕಿದ್ದಾರೆ. ವರದಿಯಲ್ಲಿ ದತ್ತಾಂಶಗಳನ್ನು ಬದಲಾವಣೆ ಮಾಡಲಾಗಿದೆ ಎಂಬುದು ಸಂಪೂರ್ಣ ಆಧಾರರಹಿತ ಎಂದರು. ಎಸ್‌ಸಿ, ಎಸ್‌ಟಿ, ಓಬಿಸಿ ಅಲ್ಪಸಂಖ್ಯಾತರು, ಲಿಂಗಾಯತರು, ಒಕ್ಕಲಿಗರು ಎಲ್ಲಾ ಜಾತಿಗಳನ್ನೂ ಸಮೀಕ್ಷೆಗೆ ಬಳಸಿಕೊಳ್ಳಲಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಅಂಕಿ ಅಂಶಗಳು ಸಂಪೂರ್ಣ ಸುಳ್ಳು ಎಂದು ಸ್ಪಷ್ಟಪಡಿಸಿದರು. ಇದೇ 17ರಂದು ಸಚಿವ ಸಂಪುಟ ಸಭೆಯಲ್ಲಿ ಈ ವರದಿಯನ್ನು ಮಂಡಿಸಲಾಗುತ್ತದೆ. ಅನಂತರ ಅದರಲ್ಲಿರುವ ಅಂಕಿ ಅಂಶಗಳು ಹಾಗೂ ಮಾಹಿತಿಗಳ ಬಗ್ಗೆ ಚರ್ಚೆ ನಡೆಸಲಾಗುತ್ತದೆ. ಈಗಾಗಲೇ ಎಲ್ಲಾ ಸಚಿವರಿಗೂ ವರದಿಯನ್ನು ನೀಡುವ ಕೆಲಸವಾಗುತ್ತಿದೆ ಎಂದು ಹೇಳಿದರು.

## ಬೋಧನಾ ತರಗತಿ: ಸ್ಪಷ್ಟನೆಗೆ ಆಗ್ರಹ

• ಉದಯವಾಹಿನಿ, ಬೆಂಗಳೂರು

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗಾಗಿ ವಿಶೇಷ ಪರಿಹಾರ ಬೋಧನಾ ತರಗತಿಗಳು ನಡೆಸಬೇಕೆಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಹೊರಡಿಸಿದ ಆದೇಶದಲ್ಲಿ ಕಳೆದ ಶೈಕ್ಷಣಿಕ ವರ್ಷ ಸೇವೆ ಸಲ್ಲಿಸಿರುವ ಅತಿಥಿ ಉಪನ್ಯಾಸಕರ ಬಗ್ಗೆ ಸ್ಪಷ್ಟನೆ ನೀಡಿಲ್ಲ ಎಂದು ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆ ತಿಳಿಸಿದೆ. ರಾಜ್ಯದಲ್ಲಿ 4,000ಕ್ಕಿಂತ ಹೆಚ್ಚು ಅತಿಥಿ ಉಪನ್ಯಾಸಕರು ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿದ್ದು, ಹಲವಾರು ಕಾಲೇಜುಗಳಲ್ಲಿ ಪ್ರಾಂಶುಪಾಲರನ್ನು ಬಿಟ್ಟರೆ ಉಳಿದ ಎಲ್ಲರೂ ಅತಿಥಿ ಉಪನ್ಯಾಸಕರುಗಳೇ ಆಗಿದ್ದಾರೆ. ಆದ್ದರಿಂದ ತರಗತಿಗಳಿಗೆ ಅತಿಥಿ ಉಪನ್ಯಾಸಕರ ಅವಶ್ಯಕತೆ ಬಗ್ಗೆ ಪದವಿ ಪೂರ್ವ ಇಲಾಖೆ ಸ್ಪಷ್ಟನೆ ನೀಡಬೇಕು ಎಂದು ಸಂಘಟನೆ ಅಧ್ಯಕ್ಷ ಪದ್ಮಪ್ರಭ ಇಂದ್ರ, ಆಗ್ರಹಿಸಿದ್ದಾರೆ.

ಅವಶ್ಯಕತೆ ಇರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಗುಣಮಟ್ಟದ ಶಿಕ್ಷಣಕ್ಕಾಗಿ ಅತಿಥಿ ಉಪನ್ಯಾಸಕರು ಬೋಧನಾ ತರಗತಿಗಳನ್ನು ನಡೆಸಿಕೊಡಲು ಸಿದ್ದ. ಆದರೆ, ಸರ್ಕಾರ, ಪದವಿ ಪೂರ್ವ ಇಲಾಖೆ ಸೂಕ್ತ ಗೌರವಧನ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಮಾರ್ಚ್‌ನಲ್ಲಿ ನಡೆದ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಮಾರ್ಚ್ ತಿಂಗಳ ಗೌರವಧನ ನೀಡಿಲ್ಲ. ಕೂಡಲೇ ಪದವಿ ಪೂರ್ವ ಶಿಕ್ಷಣ ಇಲಾಖೆ ಅತಿಥಿ ಉಪನ್ಯಾಸಕರಿಗೆ ಮಾರ್ಚ್ ತಿಂಗಳ ಗೌರವಧನ ನೀಡಬೇಕು ಎಂದು ಕಾರ್ಯದರ್ಶಿ ರಾಜೇಶ್ ಭಟ್ ಒತ್ತಾಯಿಸಿದ್ದಾರೆ.

## 27 ವಾರ್ಡ್‌ಗಳಲ್ಲಿ ಮಳೆ ಅಬ್ಬರ, ಮುಂದಿನ 48 ಗಂಟೆ ವ್ಯಾಪಕ ಮಳೆ

• ಉದಯವಾಹಿನಿ, ಬೆಂಗಳೂರು

ಉದ್ಯಾನ ನಗರಿ ಬೆಂಗಳೂರಿನಲ್ಲಿ ಪೂರ್ವ ಮುಂಗಾರು ಮಳೆ ಸದ್ದು ಜೋರಾಗಿದೆ. ಮೂರು ದಿನಗಳಿಂದ ನಗರ ವಿವಿಧೆಡೆ ಜೋರು ಮಳೆ ಆಗುತ್ತಿದೆ. ಏಪ್ರಿಲ್ 13ರವರೆಗೆ ನಗರಾದ್ಯಂತ ಮಳೆ ಅಬ್ಬರ ಕಂಡು ಬರಲಿದೆ. ಕೆಲವೆಡೆ ಹುಗುರ ಮಳೆ ಸುರಿದರೆ, ಇನ್ನೂ ಕೆಲವು ಬಡಾವಣೆಗಳಲ್ಲಿ ಗುಡುಗು ಮಿಂಚು ಸಹಿತ ವ್ಯಾಪಕ ಮಳೆ ನಿರೀಕ್ಷೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ನಗರದಲ್ಲಿ 27 ವಾರ್ಡ್‌ಗಳಲ್ಲಿ ಜೋರು ಮಳೆ ಆಗಿದೆ. ಮಲ್ಲಸಂದ್ರ, ಪೀಣ್ಯ ಇಂಡಸ್ಟ್ರಿಯಲ್ ಏರಿಯಾ, ರಾಜಗೋಪಾಲ ನಗರ, ಹಂಪಿನಗರ, ಕೋಣನಕುಂಟೆ, ಜ್ಞಾನಭಾರತಿ, ರಾಜರಾಜೇಶ್ವರಿ ನಗರ, ಕೆಂಗೇರಿ, ದೊಡ್ಡನಾಕ್ಕುಂದಿ, ಬೆಳ್ಳಂದೂರು, ಎಲೆಕ್ಟ್ರಿಕ್ ಸಿಟಿ, ಉಳ್ಳಾಲು, ಬಾಗಲಗುಂಟೆ, ಜಕ್ಕೂರು, ಕುವೆಂಪು ನಗರ, ಶೆಟ್ಟಿಹಳ್ಳಿ, ಹನುಮಂತನಗರ, ಕೊಟ್ಟಿಗೆಪಾಳ್ಯ, ಚೊಕ್ಕಸಂದ್ರ ಸೇರಿದಂತೆ ಅನೇಕ ಕಡೆಗಳಲ್ಲಿ ಗುಡುಗು ಸಹಿತ ಜೋರು ಮಳೆ ಆಗಿದೆ. ಬೆಂಗಳೂರಿನಲ್ಲಿ ನಿರಂತರವಾಗಿ ಬಿಸಿಲು ಇದೆ.

ಈ ನಡುವೆ ಅಧಿಕ ತಾಪಮಾನ ಮಧ್ಯೆ ಗುಡುಗು ಸಹಿತ ಮಳೆ ಆಗುತ್ತಿದೆ. ಏಪ್ರಿಲ್ 13ರವರೆಗೆ ನಗರಾದ್ಯಂತ ಅಲ್ಲಲ್ಲಿ ಮಳೆ ಅಬ್ಬರಿಸಲಿದೆ. ಈ ವೇಳೆ ನಗರದಲ್ಲಿ ಸೆಕೆ ಜೊತೆಗೆ ಸಂಜೆ ಬೆಳಗ್ಗೆ ತಂಪು ಗಾಳಿ, ಮಬ್ಬು ವಾತಾವರಣ ಕಂಡು ಬರಲಿದೆ. ತಾಪಮಾನದಲ್ಲಿ ಇಳಿಕೆ ಆಗಲಿದೆ ಎಂದು ಹವಾಮಾನ ಮುನ್ಸೂಚನೆ ತಿಳಿಸಿದೆ. ಬೆಂಗಳೂರಿನಲ್ಲಿ ಮುಂದಿನ ಒಂದು ವಾರಗಳ ಕಾಲ ಗರಿಷ್ಠ ತಾಪಮಾನ 33 ಕನಿಷ್ಠ, ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಅವರು ತಿಳಿಸಿದರು. ಬೆಂಗಳೂರಿನಲ್ಲಿ ಮಳೆ ಬರಲು ತಮಿಳುನಾಡು ಭಾಗದಲ್ಲಿ ಕರಾವಳಿಯ ಬಂಗಾಳಕೊಲ್ಲಿ ಭಾಗದಲ್ಲಿ ಚಂಡಮಾರುತ ಪರಿಚಲನೆ ಉಂಟಾಗಿದೆ. ತಮಿಳುನಾಡು ಭಾಗದಲ್ಲಿ ಗಾಳಿಯ ವೇಗವು ಹೆಚ್ಚಾಗಿದೆ. ಇದರಿಂದ ತಮಿಳುನಾಡು, ಕರ್ನಾಟಕ ಭಾಗದಲ್ಲಿ ಹೆಚ್ಚಿನ ಮಳೆ ಮುನ್ಸೂಚನೆ ಮಾಡಿಕೊಂಡಿದೆ. ಬೆಂಗಳೂರಿನಲ್ಲಿ ಮುಂದಿನ ಎರಡು ದಿನ ಮಳೆ ಬರಲಿದ್ದು, ಇದರ ಜೊತೆಗೆ ದಕ್ಷಿಣ ಒಳನಾಡಿನ ವಿವಿಧ ಜಿಲ್ಲೆಗಳು, ಉತ್ತರ ಕರ್ನಾಟಕ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರೀ ಮಳೆ ಆಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬೆಂಗಳೂರಿನಲ್ಲಿ ಶುಕ್ರವಾರ ಬಂದ ಗಾಳಿ ಸಹಿತ ಮಳೆಗೆ ಕೆಲವೆಡೆ ಮರಗಳ ಕೊಂಬೆಗಳು ಧರೆ ಉರುಳಿವೆ.

ಕೆಲವೆಡೆ ಸಂಚಾರ ಅಸ್ತವ್ಯಸ್ತವಾಗಿದೆ. ಐಐಎಸ್ಸಿ ಮುಖ್ಯ ಗೇಟ್‌ನಲ್ಲಿ ಮರಬಿದ್ದಿರುವುದರಿಂದ ಮಾರಮ್ಮ ವೃತ್ತದ ಕಡೆಗೆ ನಿಧಾನಗತಿಯ ಸಂಚಾರವಿರುತ್ತದೆ, ಸರ್ವೀಸ್ ರಸ್ತೆಯನ್ನು ಮುಚ್ಚಲಾಗಿದೆ.ಸಾರ್ವಜನಿಕರು ಯಶವಂತಪುರ ವೃತ್ತದಿಂದ ಸಿ ವಿ ರಾಮನ್ ರಸ್ತೆ ಮೂಲಕ ಪರ್ಯಾಯ ಮಾರ್ಗವನ್ನು ಬಳಸುವಂತೆ ಬೆಂಗಳೂರು ನಗರ ಸಂಚಾರಿ ಪೊಲೀಸರು ಮನವಿ ಮಾಡಿಕೊಂಡಿದ್ದಾರೆ.

## ಮತೀಯ ಗೂಂಡಾಗಿರಿ: ಐವರು ಆರೋಪಿಗಳ ಬಂಧನ

• ಉದಯವಾಹಿನಿ, ಬೆಂಗಳೂರು

ಇಲ್ಲಿನ ಸುವರ್ಣ ಲೇಔಟ್‌ನ ಉದ್ಯಾನದ ಬಳಿ ಮತೀಯ ಗೂಂಡಾಗಿರಿ ನಡೆಸಿದ್ದ ಆರೋಪದ ಅಡಿ ಬಾಲಕ ಸೇರಿದಂತೆ ಐವರನ್ನು ಚಂದ್ರಾಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಗುಜರಿ ವ್ಯಾಪಾರಿ ಮಹೀಮ್, ಟೈಲರ್ ಮನ್ಸೂರ್. ವೆಲ್ಡಿಂಗ್ ಕೆಲಸ ಗಾರರಾದ ಅಫ್ರೀದಿ ಪಾಷಾ, ವಸೀಂ ಖಾನ್, ಮತ್ತೊಬ್ಬ ಬಾಲಕನನ್ನು ಪೊಲೀ ಸರು ಬಂಧಿಸಿದ್ದಾರೆ. ನಾಲ್ವರು ಆರೋಪಿಗಳಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ. ಬಾಲಕನನ್ನು ಮಕ್ಕಳ ಕಲ್ಯಾಣ ಸಮಿತಿ ಎದುರು ಹಾಜರು ಪಡಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಯುವತಿಯ ಮಾತಿನಿಂದ ಸಿಟ್ಟಿಗೆದ್ದಿದ್ದ ಆರೋಪಿಗಳು ಇಬ್ಬರ ಮೇಲೂ ಹಲ್ಲೆ ನಡೆಸಿದ್ದರು. ಅಲ್ಲದೇ ಬೈಕ್‌ನಲ್ಲಿ ಕುಳಿತಿದ್ದ ಯುವಕ-ಯುವತಿ ಮಾತನಾಡುತ್ತಿರುವ ದೃಶ್ಯವನ್ನು ಸೆರೆ ಹಿಡಿದು, ಸಾಮಾಜಿಕ ಮಾಧ್ಯಮಗಳಲ್ಲಿ ಹಾಕಿದ್ದರು ಎಂದು ಪೊಲೀಸರು ಹೇಳಿದರು. ಯುವತಿ ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಸ್ಕೂಟರ್‌ನಲ್ಲಿ ಕುಳಿತಿದ್ದವರನ್ನು ಪ್ರಶ್ನಿಸಿ ಆರೋಪಿಗಳು ಹಲ್ಲೆ ನಡೆಸಿದ್ದಾರೆ. ಜತೆಗೆ, ಇಲ್ಲಿಗೆ ಯಾಕೆ ಬಂದಿದ್ದೀಯಾ? ಮನೆಯಲ್ಲಿ ಹೇಳಿದ್ದೀಯಾ? ಎಂದೆಲ್ಲಾ ಆರೋಪಿಗಳು ಯುವತಿಯನ್ನು ಪ್ರಶ್ನಿಸಿದ್ದರು' ಎಂದು ಪಶ್ಚಿಮ ವಿಭಾಗದ ಡಿಸಿಪಿ ಗಿರೀಶ್ ತಿಳಿಸಿದರು.


### ಬೆಂಗಳೂರು ಐಟಿ ಕಾರಿಡಾರ್‌ನ ಬಹುನಿರೀಕ್ಷಿತ ನಮ್ಮ ಮೆಟ್ರೋ ನೀಲಿ ಮಾರ್ಗ ಆರಂಭದ ಮುಹೂರ್ತ ಫಿಕ್ಸ್

# 2026 ಜೂನ್‌ನಿಂದ ಸೆಪ್ಟೆಂಬರ್ ಒಳಗೆ ಈ ಮಾರ್ಗವನ್ನು ತೆರೆಯುವ ವಿಶ್ವಾಸ

• ಉದಯವಾಹಿನಿ, ಬೆಂಗಳೂರು

ಐಟಿ ಕಾರಿಡಾರ್ ನ ಪ್ರಮುಖ ಸಂಚಾರದಟ್ಟಣೆ ರಸ್ತೆಯಲ್ಲಿ ನೀಲಿ ಮಾರ್ಗದ ಮೆಟ್ರೋ ಕಾಮಗಾರಿ ನಡೆಯುತ್ತಿದೆ. ಈ ಮೆಟ್ರೋ ಆರಂಭಕ್ಕೆ ಇದೀಗ ಮುಹೂರ್ತ ಫಿಕ್ಸ್ ಆಗಿದೆ.

ಹೌದು ಬಿಎಂಆರ್‌ಸಿಎಲ್ ಸಂಸ್ಥೆಯು ನಮ್ಮ ಮೆಟ್ರೋದ ಬ್ಲೂ ಲೈನ್‌ನ ಮೊದಲ ಹಂತದ ಬಗ್ಗೆ ಮಾಹಿತಿ ನೀಡಿದೆ.



ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆ.ಆರ್. ಪುರಕ್ಕೆ ಸಂಪರ್ಕ ಕಲ್ಪಿಸುವ ಈ ಮಾರ್ಗವು 2026ರ ಮಧ್ಯಭಾಗದಲ್ಲಿ ಕಾರ್ಯಾರಂಭ ಮಾಡಲಿದೆ. 18 ಕಿ.ಮೀ ಉದ್ದದ ಈ ಮಾರ್ಗವು ಹೊರ ವರ್ತುಲ ರಸ್ತೆಯ ಮೂಲಕ ಹಾದು ಹೋಗುತ್ತದೆ. ಇದು ನಗರದ ಪ್ರಮುಖ ಐಟಿ ಕಾರಿಡಾರ್ ಆಗಿದೆ.

**ಸಾರ್ವಜನಿಕ ಸಾರಿಗೆ ಬಳಕೆಯನ್ನು ಉತ್ತೇಜಿಸಲು 'ಸ್ಟಾಂಪ್:** ನಡ್ಜಿಂಗ್ ಕಮ್ಯೂಟರ್ ಬಿಹೇವಿಯರ್' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಬಿಎಂಆರ್ ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ್ ರಾವ್ ಅವರು ಈ ಮಾಹಿತಿಯನ್ನು ನೀಡಿದ್ದಾರೆ. ಜೂನ್‌ನಿಂದ ಸೆಪ್ಟೆಂಬರ್ ಒಳಗೆ ಈ ಮಾರ್ಗವನ್ನು ತೆರೆಯುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ. ಇದರ ಜೊತೆಗೆ, ಎಲೆಕ್ಟ್ರಾನಿಕ್ಸ್ ಸಿಟಿಗೆ ಸಂಪರ್ಕ ಕಲ್ಪಿಸುವ ಹಳದಿ ಮಾರ್ಗದ ಸೇವೆಯು ಮೇ ಅಂತ್ಯದ ವೇಳೆಗೆ ಪ್ರಾರಂಭವಾಗುವ ನಿರೀಕ್ಷೆಯಿದೆ ಎಂದು ತಿಳಿಸಿದ್ದಾರೆ. ಈ ಯೋಜನೆಯಿಂದ ಪ್ರಯಾಣಿಕರಿಗೆ ಅನುಕೂಲವಾಗಲಿದ್ದು, ರಸ್ತೆಗಳ ಮೇಲಿನ ವಾಹನಗಳ ದಟ್ಟಣೆ ಕಡಿಮೆಯಾಗಲಿದೆ. ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ್ ರಾವ್ ಅವರು ಈ ಬಗ್ಗೆ ಮಾತನಾಡಿದ್ದಾರೆ. ನಾವು ಜೂನ್ ವೇಳೆಗೆ




ಸೇವೆಯನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ. ನೋಡೋಣ. ಇದು 2-3 ತಿಂಗಳು ವಿಳಂಬವಾಗಬಹುದು. ರೈಲುಗಳು ಬರುತ್ತವೆ. ಕಾರ್ಮಿಕರ ಲಭ್ಯತೆಯ ಆಧಾರದ ಮೇಲೆ ನಾವು ಕೆಲಸವನ್ನು ವೇಗಗೊಳಿಸುತ್ತೇವೆ. ಜೂನ್-ಸೆಪ್ಟೆಂಬರ್ ಒಳಗೆ ಮಾರ್ಗವನ್ನು ತೆರೆಯುವ ಭರವಸೆ ಇದೆ ಎಂದು ಹೇಳಿದ್ದಾರೆ. ಎಲೆಕ್ಟ್ರಾನಿಕ್ಸ್ ಸಿಟಿ ಇಂಡಸ್ಟ್ರೀಸ್ ಅಸೋಸಿಯೇಷನ್, ಟೊಯೋಟಾ ಮೊಬಿಲಿಟಿ ಫೌಂಡೇಶನ್, ಡಬ್ಲ್ಯುಆರ್ ಐ ಇಂಡಿಯಾ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಾರ್ವಜನಿಕ ಸಾರಿಗೆಯನ್ನು ಬಳಸುವಂತೆ ಜನರನ್ನು ಪ್ರೇರೇಪಿಸುವುದು ಇದರ ಮುಖ್ಯ ಉದ್ದೇಶವಾಗಿತ್ತು. ಹಳದಿ ಮಾರ್ಗದಲ್ಲಿ ಆರಂಭದಲ್ಲಿ ಗಂಟೆಗೆ 5,400 ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯವಿರುತ್ತದೆ. ಇದರಿಂದ 2,000 ವಾಹನಗಳು ರಸ್ತೆಯಿಂದ ಕಡಿಮೆಯಾಗುತ್ತವೆ. ಮೂರು ರೈಲುಗಳೊಂದಿಗೆ ಕಾರ್ಯನಿರ್ವಹಿಸುವಾಗ, ಕೇವಲ ಐದು ನಿಲ್ದಾಣಗಳಲ್ಲಿ ಮಾತ್ರ ಸೇವೆ ಲಭ್ಯವಿರುತ್ತದೆ. ಮುಂದಿನ ಒಂದೂವರೆ ವರ್ಷಗಳಲ್ಲಿ, 15 ರೈಲುಗಳನ್ನು ನಿಯೋಜಿಸಲಾಗುವುದು. ಆಗ ಎಲ್ಲಾ ಮೆಟ್ರೋ ನಿಲ್ದಾಣಗಳಲ್ಲಿ 5-6 ನಿಮಿಷಗಳ ಆವರ್ತನದಲ್ಲಿ ರೈಲುಗಳು ಲಭ್ಯವಿರುತ್ತವೆ. ನಮ್ಮ ಮೆಟ್ರೋ ಮುಖ್ಯಸ್ಥರು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಉತ್ತೇಜಿಸಲು ಕಂಪನಿಗಳಿಂದ ಸಹಾಯವನ್ನು ಕೋರಿದ್ದಾರೆ. ಹಳದಿ ಮಾರ್ಗ ಕಾರ್ಯಾರಂಭ ಮಾಡಿದ ನಂತರ ಯಶವಂತಪುರ, ಆರ್.ವಿ. ರಸ್ತೆ ಕಡೆಯಿಂದ ಹೆಚ್ಚು ಜನರು ಬರುತ್ತಾರೆ ಎಂದು ನಾವು ನಿರೀಕ್ಷಿಸುತ್ತಿದ್ದೇವೆ ಎಂದು ಅವರು ಹೇಳಿದರು. ಇತ್ತೀಚಿನ ಮೆಟ್ರೋ ದರ ಏರಿಕೆ ತೊಂದರೆಯಾಗಿದೆ ಎಂದು ಒಪ್ಪಿಕೊಂಡ ಅಧಿಕಾರಿಗಳು, ಈಗ ಮೊದಲ ಮತ್ತು ಕೊನೆಯ ಮೈಲಿ ಸಂಪರ್ಕವನ್ನು ಕೊಡುವ ಬಗ್ಗೆ ಬಿಎಂಆರ್‌ಸಿಎಲ್ ಕೆಲಸ ಮಾಡುತ್ತಿದೆ ಎಂದು ರಾವ್ ತಿಳಿಸಿದ್ದಾರೆ. ಪ್ರಾರಂಭವಾದ ಸ್ಟೇಷನ್ ಆಕ್ಸೆಸ್ ಅಂಡ್ ಮೊಬಿಲಿಟಿ ಪ್ರೋಗ್ರಾಂ ಇನ್ನೋವೇಶನ್ ಚಾಲೆಂಜ್, ಎಲೆಕ್ಟ್ರಾನಿಕ್ಸ್ ಸಿಟಿಯಲ್ಲಿ ಮೆಟ್ರೋ ರೈಡರ್‌ಶಿಪ್ ಅನ್ನು ಹೆಚ್ಚಿಸಲು ಪರಿಹಾರಗಳನ್ನು ಹುಡುಕುವ ಒಂದು ಸ್ಪರ್ಧೆಯಾಗಿದೆ. ಈ ಸ್ಪರ್ಧೆಯು ಜಾಗತಿಕವಾಗಿ ಎಲ್ಲರಿಗೂ ಮುಕ್ತವಾಗಿದೆ. ಆದರೆ ಅವರು ಭಾರತೀಯ ಸಂಸ್ಥೆಯೊಂದಿಗೆ ಪಾಲುದಾರಿಕೆ ಹೊಂದಿರಬೇಕು. ಸಾರ್ವಜನಿಕ ಸಾರಿಗೆ ಅನುಭವಗಳನ್ನು ಸುಧಾರಿಸಲು ವರ್ತನೆಯ ವಿಜ್ಞಾನ ತತ್ವಗಳನ್ನು ಬಳಸುವುದು ಇದರ ಮುಖ್ಯ ಗುರಿಯಾಗಿದೆ. ಈ ಸ್ಪರ್ಧೆಯು ಏಪ್ರಿಲ್‌ನಿಂದ ಜೂನ್ ವರೆಗೆ ನಡೆಯಲಿದೆ.

ಆಯ್ಕೆಯಾದ ಸ್ಪರ್ಧಿಗಳು ಪರಿಹಾರ ಅಭಿವೃದ್ಧಿ ಮತ್ತು ಪರೀಕ್ಷೆಗಾಗಿ 100,000 ಯುಎಸ್‌ಡಿ ಅನುದಾನವನ್ನು ಹಂಚಿಕೊಳ್ಳುತ್ತಾರೆ. ಹೆಚ್ಚುವರಿಯಾಗಿ, ಭಾಗವಹಿಸುವವರು ಅಶೋಕ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಸೋಶಿಯಲ್ ಅಂಡ್ ಬಿಹೇವಿಯರ್ ಚೇಂಜ್‌ನಲ್ಲಿ ವರ್ತನೆಯ ವಿಜ್ಞಾನದ ಪರಿಣತಿಯನ್ನು ಪಡೆಯಲು ಬೂಟ್ ಕ್ಯಾಂಪ್‌ಗೆ ಹಾಜರಾಗುತ್ತಾರೆ.

ಈ ಸ್ಪರ್ಧೆಯನ್ನು ELCIA, WRI ಇಂಡಿಯಾ ಆಯೋಜಿಸಿವೆ. ಎಲೆಕ್ಟ್ರಾನಿಕ್ಸ್ ಸಿಟಿಯಲ್ಲಿ 200+ ಸದಸ್ಯ ಕಂಪ ನಿಗಳಿವೆ (200,000+ ಉದ್ಯೋಗಿಗಳೊಂದಿಗೆ). ಟಿಎಂಎಫ್ ಬೆಂಬಲದೊಂದಿಗೆ ಬಿಎಂಆರ್‌ಸಿಎಲ್, ಬಿಎಂಟಿಸಿ ಸಹ ಈ ಕಾರ್ಯಕ್ರಮದಲ್ಲಿ ಕೈಜೋಡಿಸಿವೆ. ಇನ್ಫೋಸಿಸ್, ಬಯೋಕಾನ್, ವಿಪ್ರೋ, ಟಾಟಾ ಪವರ್, ಟೈಟಾನ್, ಅನೇಕ ಕಂಪನಿಗಳ ಹಿರಿಯ ಪ್ರತಿನಿಧಿಗಳು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು. ಸಾರ್ವಜನಿಕ ಸಾರಿಗೆಯನ್ನು ಹೆಚ್ಚಾಗಿ ಬಳಸುವುದನ್ನು ಬೆಂಬಲಿಸುವುದಾಗಿ ತಿಳಿಸಿದ್ದಾರೆ.

ಜೂನ್ ವೇಳೆಗೆ ಬ್ಲೂ ಲೈನ್ ಮೆಟ್ರೋ ಸೇವೆಯನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ, ಇದು 2-3 ತಿಂಗಳು ವಿಳಂಬವಾಗಬಹುದು. ರೈಲುಗಳು ಬರುತ್ತವೆ. ಕಾರ್ಮಿಕರ ಲಭ್ಯತೆಯ ಆಧಾರದ ಮೇಲೆ ನಾವು ಕೆಲಸವನ್ನು ವೇಗಗೊಳಿಸುತ್ತೇವೆ. 2026 ರ ಜೂನ್-ಸೆಪ್ಟೆಂಬರ್ ಒಳಗೆ ಮಾರ್ಗವನ್ನು ತೆರೆಯುವ ಭರವಸೆ ಇದೆ ಎಂದು ಬಿಎಂಆರ್‌ಸಿಎಲ್ ಎಂಡಿ ಮಹೇಶ್ವರ್ ರಾವ್ ಹೇಳಿದ್ದಾರೆ. ಅವರ ಈ ಮಾತಿನಿಂದಾಗಿ, ಬ್ಲೂ ಲೈನ್‌ನ ನಿರೀಕ್ಷೆಯಲ್ಲಿರುವ ಪ್ರಯಾಣಿಕರಲ್ಲಿ ಭರವಸೆ ಮೂಡಿದೆ.

**ಹಳದಿ ಮಾರ್ಗ ಮೇ ಅಂತ್ಯದಲ್ಲಿ ಆರಂಭ**

**ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಹಿಂದೆ ಹೇಳಿದಂತೆ, ಹಳದಿ ಮಾರ್ಗದ ಸೇವೆಯನ್ನು 2025 ಮೇ ಅಂತ್ಯದ ವೇಳೆಗೆ ಪ್ರಾರಂಭಿಸಲು ಬಿಎಂಆರ್‌ಸಿಎಲ್ ಸಿದ್ಧತೆ ಮಾಡಿಕೊಂಡಿದೆ. ಎಲೆಕ್ಟ್ರಾನಿಕ್ ಸಿಟಿಗೆ ಇದು ಸಂಪರ್ಕ ಕಲ್ಪಿಸುತ್ತದೆ. ನಮ್ಮಲ್ಲಿ ಈಗಾಗಲೇ ಎರಡು ರೈಲುಗಳಿವೆ. ಹೆಚ್ಚಿನ ಪರೀಕ್ಷೆಗಳು ಮುಗಿದಿವೆ. ಮೆಟ್ರೋ ರೈಲ್ವೆ ಸುರಕ್ಷತಾ ಆಯುಕ್ತರಿಂದ ಮೇ ಮೊದಲ ವಾರದಲ್ಲಿ ಅನುಮೋದನೆ ಪಡೆಯುತ್ತೇವೆ ಎಂದು ನಾನು ಭಾವಿಸುತ್ತೇನೆ. ಆದರೆ ಕನಿಷ್ಠ ಮೂರು ರೈಲುಗಳು ಬೇಕಾಗುತ್ತವೆ ಎಂದು ರಾವ್ ಹೇಳಿದ್ದಾರೆ.**

## ಇಂದು ಡಾ. ರಾಜ್ ಪುಣ್ಯಸ್ಮರಣೆಗೆ ಬಂದ ಅಭಿಮಾನಿ ಸಾಗರ

• ಉದಯವಾಹಿನಿ, ಬೆಂಗಳೂರು

ಶನಿವಾರ ಕನ್ನಡ ಕಂಠೀರವ ಡಾ. ರಾಜಕುಮಾರ್ ಅವರ ಪುಣ್ಯಸ್ಮರಣೆ ದಿನ. ನಮ್ಮನ್ನು ಅಗಲಿ ಇಂದಿಗೆ 19 ವರ್ಷಗಳು ಕಳೆದು ಹೋದವು. ಭಾರತೀಯ ಚಿತ್ರರಂಗ ಇರುವವರೆಗೂಅವರ ಹೆಸರು ಅಜರಾಮರವಾಗಿ ಇರುವಂತೆ ಗಟ್ಟಿಯಾದ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿದ್ದಾರೆ.

ಅವರು ಬಣ್ಣ ಹಚ್ಚಿದ ಅಷ್ಟೂ ಚಿತ್ರಗಳು ಒಂದೊಂದು ಮುತ್ತಿನಂತೆ ಅಮೂಲ್ಯವಾದವು. ಅವರ ಅಭಿನಯದ ಸಿನಿಮಾ ಕಥೆಗಳ ತಿರುಳು ಬರಿ ರಂಜನೆಗಷ್ಟೇ ಇರಲಿಲ್ಲ.

ಸಮಾಜವನ್ನು ಬದಲಿಸುವ ಶಕ್ತಿ ಹೊಂದಿದ್ದವು, ಬದಲಾವಣೆ ಮಾಡಿದ್ದವೂ ಕೂಡ. ಇದಕ್ಕೆ ಉದಾ ಹರಣೆ ಸುಮಾರು ಕಥೆಗಳಿವೆ. ಒಂದು ಉದಾಹರಣೆ ಕೊಡುವುದಾದರೆ ಬಂಗಾರದ ಮನುಷ್ಯ ಚಿತ್ರ ಕೃಷಿ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯನ್ನೇ ಮಾಡಿತು. ನಗರದಿಂದ ಹೋಗಿ ವಿದ್ಯಾವಂತರು



ಕೃಷಿ ಕ್ಷೇತ್ರದಲ್ಲಿ ತೊಡಗುವಂತೆ ಆಯಿತು.

ಮನೆಗೆ ಯಾರೇ ಬಂದರೂ ಪ್ರೀತಿಯಿಂದ ಕರೆದು ಊಟ ಹಾಕುವ ಅಪ್ಯಾಯತೆ ಮನೋಭಾವ, ಸರಳವಾಗಿ ಜೀವಿಸಿದ ಸರಳ ಜೀವಿ.

ಅವರಿಗೆ ಅವರೇ ಸಾಟಿ. ಕಂಠ, ಅಭಿನಯ ಎರಡರಲ್ಲೂ ಉತ್ತುಂಗಕ್ಕೆ ಹೋಗಿ ನಮ್ಮ ಚಿತ್ರರಂಗದಲ್ಲಿ ಯಾರೂ ಮಾಡದ ಸಾಧನೆಯನ್ನು ಮಾಡಿದ್ದಾರೆ.

ಅವರನ್ನು ಮೀರಿಸಿದ ಮತ್ತು ಮೀರಿಸುವ ನಟ ಇನ್ನೂ ಹುಟ್ಟಿಲ್ಲ, ಮುಂದೆ ಹುಟ್ಟುವುದಿಲ್ಲ ಎನಿಸುತ್ತದೆ. ಕನ್ನಡ ನೆಲ, ಜಲ, ಭಾಷೆ ವಿಚಾರ ಬಂದಾಗ ಮೊದಲು ಧ್ವನಿ ಎತ್ತುತ್ತಿದ್ದದ್ದು ಡಾ.ರಾಜಕುಮಾರ್. ಎಲ್ಲಾ ಭಾಷೆಗಳ ಮೇಲೂ ಪ್ರೀತಿಯಿದ್ದರೂ, ಅಲ್ಲಿ ತಮ್ಮ ಪ್ರಾಣ ಸ್ನೇಹಿತರಿದ್ದರೂ ಭಾಷೆಗೆ ಅಪಮಾನವಾಗಿದೆ ಎಂದರೆ ಎಂದಿಗೂ ಅದನ್ನು ಸಹಿಸುತ್ತಿರಲಿಲ್ಲ. ಕೂಡಲೇ ಅದಕ್ಕೆ ಪ್ರತಿರೋಧ ವ್ಯಕ್ತಪಡಿಸುತ್ತಿದ್ದರು. ಗೋಕಾಕ್ ಚಳವಳಿ ಇದಕ್ಕೆ ಉತ್ತಮ ಉದಾಹರಣೆ ಜಾತಿ, ಮತಗಳ ಹಂಗಿಲ್ಲದೆ ಬದುಕಿದವರು. ಕುವೆಂಪು ತತ್ವಗಳನ್ನು ಅಪಾರವಾಗಿ ಗೌರವಿಸಿ ನಂಬಿದ್ದ ಇವರ ಪ್ರತಿಯೊಂದು ನಡವಳಿಕೆಯಲ್ಲೂ ಅದು ಎದ್ದು ಕಾಣುತ್ತಿತ್ತು.

ಡಾ. ರಾಜ್ ಅಗಲಿಕೆಯನ್ನು ಇಂದಿಗೂ ಕನ್ನಡಿಗರು ಅರಗಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ, ಅವರು ನಮ್ಮೊಂದಿಗೆ ಇಂದಿಗೂ ಇರಬೇಕಾಗಿತ್ತು ಎನ್ನುತ್ತಾರೆ. ಈ ಪುಣ್ಯ ಸ್ಮರಣೆಯ ದಿನವನ್ನು ಅಭಿಮಾನಿಗಳು ವಿವಿಧ ರೀತಿಯ ಸಮಾಜ ಕಾರ್ಯಗಳ ಮೂಲಕ ನೆನಪಿಸಿಕೊಳ್ಳುತ್ತಾರೆ. ಪೂಜಿಸುತ್ತಾರೆ. ಇಂದು ಕಂಠೀರವ ಸ್ಟುಡಿಯೋದಲ್ಲಿರುವ ಅವರ ಸಮಾಧಿಗೆ ಸಾವಿರಾರು ಭಕ್ತರು ಆಗಮಿಸಿ ನಮಿಸಿದ್ದಾರೆ.

## ಪಿಯುಸಿ ಫಲಿತಾಂಶ ಉತ್ತಮಗೊಳಿಸಲು ಎರಡು ಅವಕಾಶ

• ಉದಯವಾಹಿನಿ, ಬೆಂಗಳೂರು

ದ್ವಿತೀಯ ಪಿಯುಸಿಯ ಮೊದಲನೇ ಪರೀಕ್ಷೆಯಲ್ಲಿ ನಿಗದಿತ ಅರ್ಹತೆ ಗಳಿಸದ, ಅನುತ್ತೀರ್ಣರಾಗಿರುವ ಅಭ್ಯರ್ಥಿಗಳು 2 ಮತ್ತು 3ನೇ ಪರೀಕ್ಷೆಯಲ್ಲಿ ಅರ್ಹತೆ ಪಡೆಯಲು ಅವಕಾಶ ಇರುವ ಕಾರಣ, ಯಾರೆಲ್ಲ ಶುಲ್ಕ ಕಟ್ಟಿ ಅರ್ಜಿ ಸಲ್ಲಿಸಿದ್ದೀರೊ ಅವರೆಲ್ಲರೂ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಿ ಪರೀಕ್ಷೆ ಬರೆಯಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಸಲಹೆ ನೀಡಿದ್ದಾರೆ.

ಹೊರನಾಡು ಕನ್ನಡಿಗರಿಗೆ ಏ.15ರಂದು ಕನ್ನಡ ಹಾಗೂ 16 ಮತ್ತು 17ರಂದು ವಿಜ್ಞಾನ ವಿಷಯಗಳಿಗೆ ಸಿಇಟಿ ನಡೆಯುಲಿದ್ದು, ಪ್ರಾಧಿಕಾರ ಸಕಲ ರೀತಿಯ ತಯಾರಿ ನಡೆಸಿದೆ. ದ್ವಿತೀಯ ಪಿಯುಸಿಯ ಮೊದಲನೇ ಪರೀಕ್ಷೆಯಲ್ಲಿ ಅಂಕ ಕಡಿಮೆ ಬಂದಿದೆ ಎಂದು ಸಿಇಟಿ ಪರೀಕ್ಷೆ ಬರೆಯದೆ ಕೈಚೆಲ್ಲವುದು ಸರಿಯಲ್ಲ.

ದ್ವಿತೀಯ ಪಿಯುಸಿಯ ಎರಡನೇ, ಮೂರನೇ ಪರೀಕ್ಷೆ ಬರೆಯುವುದಕ್ಕೂ ಅವಕಾಶ ಇದ್ದು, ಅಲ್ಲಿ ತಮ್ಮ ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಬಹುದು.

ಸಿಇಟಿ ಬರೆದಿದ್ದರೆ ಮಾತ್ರ ಪಿಯುಸಿಯ 3ನೇ ಪರೀಕ್ಷೆಯಲ್ಲಿ ಅರ್ಹರಾದವರಿಗೂ ಸಿಇಟಿ ರ್‍ಯಾಂಕ್ ಕೊಟ್ಟು, ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅವಕಾಶ ಮಾಡಬಹುದು. ಆದರೆ ಸಿಇಟಿಯೇ ಬರೆಯದಿದ್ದರೆ ರ್‍ಯಾಂಕ್ ಗೆ ಪರಿಗಣಿಸಲು ಆ ಸಂದರ್ಭದಲ್ಲಿ ಸಾಧ್ಯ ಇರುವುದಿಲ್ಲ ಎಂದು ಅವರು ಎಚ್ಚರಿಸಿದ್ದಾರೆ.

ಕಳೆದ ವರ್ಷ ಕೂಡ 3ನೇ ಪರೀಕ್ಷೆಯಲ್ಲಿ ಅರ್ಹತೆಯಾದ ಅನೇಕರಿಗೆ ರಾಂಕ್ ಕೊಟ್ಟು, ಪ್ರವೇಶಕ್ಕೆ ವ್ಯವಸ್ಥೆ ಮಾಡಲಾಗಿದೆ. ಹೀಗಾಗಿ ಸಿಇಟಿ ಪರೀಕ್ಷೆಯನ್ನು ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳಬೇಡಿ. ಸಿಇಟಿ ಪರೀಕ್ಷೆ ಒಮ್ಮೆ ಮಾತ್ರ ನಡೆಸುವುದರಿಂದ ಅದನ್ನು ತಪ್ಪದೇ ಬರೆಯಬೇಕು ಎಂದು ಅವರು ಸಲಹೆ ನೀಡಿದ್ದಾರೆ. ಈ ವರ್ಷ 3.3 ಲಕ್ಷ ಅಭ್ಯರ್ಥಿಗಳು ಸಿಇಟಿ ಬರೆಯಲು ಶುಲ್ಕ ಪಾವತಿಸಿದ್ದು, ಅವರಲ್ಲಿ ಇದುವರೆಗೂ 2.85 ಲಕ್ಷ ಮಂದಿ ತಮ್ಮ ಪ್ರವೇಶ ಪತ್ರಗಳನ್ನು ಡೌನ್ ಲೋಡ್ ಮಾಡಿಕೊಂಡಿದ್ದಾರೆ. ಇನ್ನೂ ಸುಮಾರು 45 ಸಾವಿರ ಮಂದಿ ಡೌನ್ ಲೋಡ್ ಮಾಡಿಕೊಳ್ಳಬೇಕಾಗಿದೆ ಎಂದು ಅವರು ತಿಳಿಸಿದ್ದಾರೆ.

## ಎರ್ನಾಕುಲಂ, ಬೆಳಗಾವಿಗೆ ವಿಶೇಷ ರೈಲು

• ಉದಯವಾಹಿನಿ, ಬೆಂಗಳೂರು

ಬೆಳಗಾವಿ-ಬೆಂಗಳೂರು, ಬೆಂಗಳೂರು-ಎರ್ನಾಕುಲಂ ನಡುವೆ ಬೇಸಿಗೆ ವಿಶೇಷ ರೈಲುಗಳ ಟ್ರಿಪ್ ನಡೆಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ ಬೇಸಿಗೆ ರಜೆಯ ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡಲು ಕ್ರಮ ತೆಗೆದು ಕೊಳ್ಳಲಾಗಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ. ಏಪ್ರಿಲ್ 12ರಂದು ಬೆಳಿಗ್ಗೆ 4ಕ್ಕೆ ಬೆಳಗಾವಿಯಿಂದ ಹೊರಡುವ ರೈಲು ಮಧ್ಯಾಹ್ನ 3.30ಕ್ಕೆ ಎಸ್‌ಎಂವಿಟಿ ಬೆಂಗಳೂರು ತಲುಪಲಿದೆ.

ಲೋಂಡಾ, ಅಳ್ನಾವರ, ಧಾರವಾಡ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಎಸ್‌ಎಂಎಂ ಹಾವೇರಿ, ದಾವಣಗೆರೆ, ಬೀರೂರು, ಅರಸೀಕೆರೆ, ತುಮಕೂರು, ಚಿಕ್ಕಬಾಣಾವರ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿದೆ. ಎಸ್‌ಎಂವಿಟಿಯಿಂದ ಎರ್ನಾ ಕುಲಂಗೆ ವಿಶೇಷ ಟ್ರಿಪ್ ಇರಲಿದೆ. ಏ.12ರಂದು ಸಂಜೆ 4.35ಕ್ಕೆ ಹೊರಡುವ ರೈಲು ಮರುದಿನ ಮುಂಜಾನೆ 3ಕ್ಕೆ ಎರ್ನಾಕುಲಂ ತಲುಪಲಿದೆ. ಏ.14ರಂದು ರಾತ್ರಿ 10ಕ್ಕೆ ಹೊರಟು ಮರುದಿನ ಬೆಳಿಗ್ಗೆ 10.55ಕ್ಕೆ ಬೆಂಗಳೂರು ತಲುಪಲಿದೆ. ಕೃಷ್ಣರಾಜಪುರ, ಬಂಗಾರಪೇಟೆ, ಸೇಲಂ, ಈರೋಡ್, ತಿರುಪೂರು, ಪೊದನೂರು, ಪಾಲಕ್ಕಾಡ್, ತ್ರಿಶೂರ್, ಅಲುವಾಗಳಲ್ಲಿ ನಿಲುಗಡೆ ಹೊಂದಿದೆ.

## ಐಪಿಎಲ್ ಬೆಟ್ಟಿಂಗ್ ವಿರುದ್ಧ ಪೊಲೀಸರ ಕಾರ್ಯಾಚರಣೆ

• ಉದಯವಾಹಿನಿ, ಬೆಂಗಳೂರು

**1.15 ಕೋಟಿ ರೂ. ಸೀಜ್**

ಒಂದೆಡೆ ಐಪಿಎಲ್ ಟಿಕೆಟ್ ಬ್ಲ್ಯಾಕ್‌ನಲ್ಲಿ ಮಾರಾಟ ಮಾಡುತ್ತಿರುವವರ ವಿರುದ್ಧ ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದರೆ ಮತ್ತೊಂದೆಡೆ, ಬೆಟ್ಟಿಂಗ್ ವಿರುದ್ಧವೂ ಕಾರ್ಯಾಚರಣೆ ತೀವ್ರಗೊಂಡಿದೆ. ವಾರದ ಅವಧಿಯಲ್ಲಿ ಬೆಂಗಳೂರಿನಲ್ಲಿ ಐದು ಪ್ರತ್ಯೇಕ ಪ್ರಕರಣಗಳಲ್ಲಿ ಪೊಲೀಸರು 1.15 ಕೋಟಿ ರೂ. ವಶಪಡಿಸಿಕೊಂಡಿದ್ದಾರೆ. ಈ ಪೈಕಿ ಗುರುವಾರ ಒಂದೇ ದಿನ 86 ಲಕ್ಷ ರೂ. ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆ ವೇಳೆ ಪಾರ್ಕರ್, ರಿಲೆಕ್ಸ್, ದುಬೈ ಎಕ್ಸ್‌ಚೇಂಜ್, ಲೋಟಸ್, ಬಿಗ್‌ಬುಲ್ 24x7 ಹಲವಾರು ಸಂಶಯಾಸ್ಪದ ನಕಲಿ ವೆಬ್‌ಸೈಟ್‌ಗಳು, ಮೊಬೈಲ್ ಫೋನ್ ಅಪ್ಲಿಕೇಶನ್‌ಗಳನ್ನೂ ಪತ್ತೆ ಮಾಡಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪ್ರಸಿದ್ಧ ಬ್ರ್ಯಾಂಡ್‌ಗಳ ಹೆಸರಿನಲ್ಲಿ ಈ ಆ್ಯಪ್‌ಗಳು, ವೆಬ್‌ಸೈಟ್‌ಗಳನ್ನು ತೆರಯಲಾಗುತ್ತಿದೆ. ಸಾವಿರಾರು ಜನರು ಈ ಅಪ್ಲಿಕೇಶನ್‌ಗಳಿಗೆ ಲಾಗಿನ್ ಆಗುತ್ತಾರೆ. ಟಾಸ್‌ನಿಂದ ಹಿಡಿದು ಇಡೀ ಪಂದ್ಯದವರೆಗೆ ವಿವಿಧ ಅಂಶಗಳ ಮೇಲೆ ಬೆಟ್ಟಿಂಗ್‌ಗೆ ಅಪ್ಲಿಕೇಶನ್‌ಗಳು ಬಳಕೆದಾರರಿಗೆ ಅವಕಾಶ ಮಾಡಿಕೊಟ್ಟಿವೆ ಎಂದು ಪೊಲೀಸರು ತಿಳಿಸಿರುವುದಾಗಿ ಡೆಕ್ಕನ್ ಹೆರಾಲ್ಡ್ ವರದಿ ಮಾಡಿದೆ. ಪಂಟರ್‌ಗಳು ಟಾಸ್ ಯಾರು ಗೆಲ್ಲುತ್ತಾರೆ, ಮ್ಯಾಚ್ ರಿಸಲ್ಟ್ ಏನಾಗುತ್ತದೆ ಇತ್ಯಾದಿಗಳ ಮೇಲೆ ಬೆಟ್ ಮಾಡಬಹುದಾಗಿದೆ. ಅಪ್ಲಿಕೇಶನ್‌ನಲ್ಲಿ ಲಭ್ಯವಿರುವ ಆಯ್ಕೆಗಳಲ್ಲಿ ಬೆಟ್ಟಿಂಗ್ ಮಾಡಲು ಪಂಟರ್‌ಗಳು ಡಿಜಿಟಲ್ ನಾಣ್ಯಗಳನ್ನು ಬಳಸುತ್ತಾರೆ. ಇದನ್ನು ಅವರು 'ಚಿಪ್ಸ್' ಎಂದು ಕರೆ ಯುತ್ತಾರೆ.

ಅಪ್ಲಿಕೇಶನ್‌ಗಳು ಪ್ರೀಮಿಯಂ, ಸಾಮಾನ್ಯ ಮಟ್ಟದ ಬೆಟ್ಟಿಂಗ್ ಅನ್ನು ಸಹ ನೀಡುತ್ತವೆ. ಹಲವಾರು ಮಧ್ಯವರ್ತಿಗಳು ಪಂಟರ್‌ಗಳಿಗೆ ಪ್ರೀಮಿಯಂ ಖಾತೆಗಳನ್ನು ನೀಡುತ್ತಾರೆ ಎಂದು ಪೊಲೀಸರು ತಿಳಿಸಿರುವುದನ್ನು ವರದಿ ಉಲ್ಲೇಖಿಸಿದೆ. ವೃತ್ತಿಯಲ್ಲಿ ಅಡುಗೆಯವನಾದ ರಾಮಕೃಷ್ಣ ಎನ್ ಎಂಬ ಮಧ್ಯವರ್ತಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಈತ ಬೆಟ್ಟಿಂಗ್ ಅಪ್ಲಿಕೇಶನ್‌ಗಳು ಚಿಪ್‌ಗಳಿಗಾಗಿ ಪ್ರೀಮಿಯಂ ಖಾತೆಗಳ ವಿತರಣೆಯ ಮೇಲ್ವಿಚಾರಣೆ ಮಾಡಿದ್ದ ಎಂದು ಪೊಲೀಸರು ಹೇಳಿದ್ದಾರೆ. ಪೊಲೀಸರ ಪ್ರಕಾರ, ರಾಮಕೃಷ್ಣ ಪಂಟರ್‌ಗಳನ್ನು ನಿರ್ವಹಿಸುತ್ತಿದ್ದ.

ಅವರು ಹಣ ಪಾವತಿಸಿ ಬೆಟ್ಟಿಂಗ್ ಪ್ಲಾಟ್‌ಫಾರ್ಮ್‌ಗಳಿಗೆ ಲಾಗಿನ್ ಕ್ರೆಡೆನ್ಶಿಯಲ್‌ಗಳನ್ನು ಪಡೆಯುತ್ತಿದ್ದರು. ಬೆಟ್ಟಿಂಗ್ ದಂಧೆಕೋರರು ಕೆಲವೇ ನಿಮಿಷಗಳಿಗಾಗಿ ಖಾತೆಗಳನ್ನು ಖರೀದಿಸುತ್ತಿದ್ದರು ಎಂಬುದು ತನಿಖೆಯಲ್ಲಿ ಬಹಿರಂಗವಾಗಿದೆ ಎಂದು ವರದಿ ಉಲ್ಲೇಖಿಸಿದೆ.

# ಬೆಂಗಳೂರು ಕರಗ: ಸರ್ಕಾರದಿಂದ ಹಣ ಬಿಡುಗಡೆ ವಿಚಾರದಲ್ಲಿ ಗೊಂದಲ

### ಪಿ. ಆರ್.ರಮೇಶ್ ಅವರ ಪಿತೂರಿಯಿಂದಲೇ ಹಣ ಬಿಡುಗಡೆಯಾಗಿಲ್ಲ. 40 ಲಕ್ಷ ರೂ. ಯಾರ ಅಕೌಂಟ್‌ಗೆ ಹೋಯಿತು?

• ಉದಯವಾಹಿನಿ, ಬೆಂಗಳೂರು

ವಿಶ್ವವಿಖ್ಯಾತ ಬೆಂಗಳೂರು ಕರಗ ಈ ವರ್ಷ ಅನುದಾನದ ವಿಚಾರದಲ್ಲಿ ಚರ್ಚೆಗೆ ಗ್ರಾಸವಾಗುವಂತೆ ಆಗಿದೆ. ಒಂದೆಡೆ, ಅದ್ದೂರಿಯಾಗಿ ಕರಗ ಮಹೋತ್ಸವ ನಡೆಯುತ್ತಿದ್ದರೆ, ಮತ್ತೊಂದೆಡೆ ಕರಗ ಅರ್ಚಕ ಜ್ಞಾನೇಂದ್ರ ಇದೇ ಮೊದಲ ಬಾರಿಗೆ ಮಾಧ್ಯಮಗಳ ಮುಂದೆ ಬಹಿರಂಗವಾಗಿ ಅಳಲು ತೋಡಿಕೊಂಡಿದ್ದಾರೆ. ಸರ್ಕಾರದಿಂದ ಒಂದು ರೂಪಾಯಿ ಬಂದಿಲ್ಲ.

ದೇವಸ್ಥಾನದ ಚರಿತ್ರೆಯಲ್ಲಿ ಇದೇ ಮೊದಲ ಬಾರಿಗೆ ಅರ್ಚಕರು ಹಣ ಹಾಕಿ ಕರಗ ಮಾಡುತ್ತಿದ್ದೇವೆ ಎಂದು ಅವರು ಅಲವತ್ತುಕೊಂಡಿದ್ದಾರೆ. ನಾವು ಕೈಯಿಂದ ಹಣ ಹಾಕಿ ಅಲಂಕಾರ ಮಾಡುತ್ತಿದ್ದೇವೆ. ನಾನು 20 ಲಕ್ಷ ರೂ. ಹಣ ಹಾಕಿದ್ದೇನೆ. ಬಿಬಿಎಂಪಿ ಕಚೇರಿ ಇರುವುದು ಕರಗ ಸಮಿತಿ ಜಾಗದಲ್ಲಿ. ಸೇವೆಯ ರೂಪದಲ್ಲಿ ಬಿಬಿಎಂಪಿ ಸೇವೆ ಮಾಡಿಕೊಂಡು ಬರುತ್ತಿದೆ. ಇಓ ತಪ್ಪಿಸಿಕೊಂಡು ತಿರುಗಿದ್ದಾರೆ.



**40 ಲಕ್ಷ ರೂ. ಯಾರ ಅಕೌಂಟ್‌ಗೆ ಹೋಯಿತು?**

ಕಾಣದ ಕೈಗಳು ಕರಗಕ್ಕೆ ಕೆಟ್ಟ ಹೆಸರು ತರಲು ಹೀಗೆ ಮಾಡುತ್ತಿವೆ. ಇದರಿಂದ ತುಂಬಾ ಬೇಸರವಾಗಿದೆ. ಡಿಸಿ ಈ ತನಕ ದೇವಸ್ಥಾನಕ್ಕೆ ಬಂದಿಲ್ಲ. ಡಿಸಿ ಸ್ಥಳ ಪರಿಶೀಲನೆ ಮಾಡಿಲ್ಲ. ಡಿಸಿ ಇಲ್ಲಿ ತನಕ ತಾಯಿ ದರ್ಶನ ಮಾಡಿಲ್ಲ' ಎಂದು ಪೂಜಾರಿ ಎ.ಜ್ಞಾನೇಂದ್ರ ಸ್ವಾಮಿ ಆರೋಪಿಸಿದ್ದಾರೆ.

**ಸರ್ಕಾರದ ವಿರುದ್ಧ ಕರಗ ಸಮಿತಿ ಅಧ್ಯಕ್ಷ ಆಕ್ರೋಶ:** ಕರಗಕ್ಕೆ ಹಣ ಬಿಡುಗಡೆ ಆಗಿದೆ ಎಂಬುದನ್ನು ಕರಗ ಸಮಿತಿ ಅಧ್ಯಕ್ಷ ಸತೀಶ್ ನಿರಾಕರಿಸಿದ್ದು, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸತತವಾಗಿ 6 ವರ್ಷಗಳಿಂದ ಕರಗ ಮಾಡಿಸುತ್ತಿದ್ದೇನೆ. ಈ ಬಾರಿ ಕರಗ ಶುರುವಾಗಿ 8 ದಿನಗಳು ಆಗಿವೆ. ಪಿ. ಆರ್.ರಮೇಶ್ ಅವರ ಪಿತೂರಿಯಿಂದಲೇ ಹಣ ಬಿಡುಗಡೆಯಾಗಿಲ್ಲ. 40 ಲಕ್ಷ ರೂ. ಯಾರ ಅಕೌಂಟ್‌ಗೆ ಹೋಯಿತು? ಒಂದು ರೂ.ನ್ನೂ ಕರಗ ಮಾಡಲು ಕೊಟ್ಟಿಲ್ಲ. ನಿಮಗೆ ಕೊಡಲು ಸಾಧ್ಯವಿಲ್ಲ ಅಂದರೆ, ಆಗಲ್ಲ ಎನ್ನಿ. ನಾವೇ ದುಡ್ಡು ಹಾಕಿ ಕರಗ ಮಾಡಿಕೊಳ್ಳುತ್ತೇವೆ. ಈಗಾಗಲೇ ಕರಗಕ್ಕೆ 60 ಲಕ್ಷ ರೂ. ಖರ್ಚು ಮಾಡಿದ್ದೇವೆ.

ಕರಗ ಪೂಜಾರಿ 20 ಲಕ್ಷ ರೂ. ಕೊಟ್ಟಿದ್ದಾರೆ. ನಾನು 20 ಲಕ್ಷ ರೂಪಾಯಿ ಹಾಕಿದ್ದೇನೆ. ಬಾಲಕೃಷ್ಣ 20 ಲಕ್ಷ ರೂಪಾಯಿ ಹಾಕಿ ಇಲ್ಲಿಯವರೆಗೆ ಖರ್ಚು ಮಾಡಿದ್ದೇವೆ. ಇವರು ಗುತ್ತಿಗೆ ಮಾಡಿರುವುದು ನಾಮಕಾವಸ್ತೆಗೆ. ಗುತ್ತಿಗೆದಾರನಿಗೆ ಫೋನ್ ಮಾಡಿದ್ರೆ ಬೆಳಗಾವಿಯಲ್ಲಿ ಇದ್ದೇನೆ ಎನ್ನುತ್ತಾರೆ. ರಾಜು ಎನ್ನುವವರು ಗುತ್ತಿಗೆ ತೆಗೆದು ಕೊಂಡಿದ್ದಾರೆ.


ಅವರಿಗೆ ಒಂದು ರೂಪಾಯಿ ಹಣ ರಿಲೀಸ್ ಮಾಡಿಲ್ಲ. ಇಓ ಅಕೌಂಟ್‌ಗೆ ದುಡ್ಡು ಹಾಕಬೇಕಿತ್ತು. ಆದರೆ ಡಿಸಿ ಅಕೌಂಟ್‌ಗೆ ದುಡ್ಡು ಹಾಕಿದ್ದಾರೆ.

ಇದು ಕೂಡ ನ್ಯಾಯಾಲಯದ ಪ್ರಕಾರ ತಪ್ಪು ಎಂದು ಸತೀಶ್ ಹೇಳಿದ್ದಾರೆ.

**ಕೋರ್ಟ್ ಆದೇಶದ ಪ್ರಕಾರ ದೇವಸ್ಥಾನದ ಇಓ ಹಾಗೂ ಸಮಿತಿ ನಡೆಸಬೇಕು. ಕರಗ ನಡೆಸಲು ಯೋಗ್ಯತೆ ಇಲ್ಲ ಅಂದರೆ ಬಿಟ್ಟು ಬಿಡಿ. ಮುಜರಾಯಿ ಇಲಾಖೆಯಿಂದ ತೆಗೆದು ನಮ್ಮ ಕೈಗೆ ದೇವಸ್ಥಾನವನ್ನು ಕೊಟ್ಟುಬಿಡಿ. ನಿಮಗೆ ದೇವಾಲಯ ಹುಂಡಿ ದುಡ್ಡು ಬೇಕು. ದೇವಸ್ಥಾನದ ಆಸ್ತಿ ಬೇಕು, ಆದ್ರೆ ಕರಗಕ್ಕೆ ದುಡ್ಡು ಕೊಡಲು ಆಗಲ್ಲ. ನಮ್ಮ 10 ಮನೆಯವರು ದುಡ್ಡು ಹಾಕಿ ಕರಗ ಮಾಡುತ್ತೇವೆ**

**-ಸತೀಶ್, ಕರಗ ಸಮಿತಿ ಅಧ್ಯಕ್ಷ**

**ಆರೋಪ ಅಲ್ಲಗಳೆದ ರಾಮಲಿಂಗಾ ರೆಡ್ಡಿ**



**ಆದರೆ, ಕರಗಕ್ಕೆ ಹಣ ಬಿಡುಗಡೆಯಾಗಿಲ್ಲ ಎಂಬ ಆರೋಪವನ್ನು ಮುಜರಾಯಿ ಇಲಾಖೆ ಸಚಿವ ರಾಮಲಿಂಗಾ ರೆಡ್ಡಿ ಅಲ್ಲಗಳೆದಿದ್ದಾರೆ. ಬೆಳಗ್ಗೆಯೇ 11 ಗಂಟೆಗೆ ಎಡಿಸಿ ಖಾತೆಗೆ ಹಣ ಹೋಗಿದೆ. ಅವರೇ ಜವಾಬ್ದಾರಿ ತೆಗೆದುಕೊಂಡು ಖರ್ಚು ವೆಚ್ಚ ನೋಡುತ್ತಾರೆ. ಪ್ರತಿ ವರ್ಷ ಮಹಾನಗರ ಪಾಲಿಕೆ ಹಣ ಬಿಡುಗಡೆ ಮಾಡುತ್ತದೆ. ಅನುದಾನದ ವಿಚಾರದಲ್ಲಿ ಯಾವುದೇ ಗೊಂದಲ ಇಲ್ಲ. ಹೆಚ್ಚುವರಿ ಹಣ ಖರ್ಚು ಮಾಡಿದರೂ ಸಹ ಬಿಡುಗಡೆ ಮಾಡುತ್ತೇವೆ ಎಂದು ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.**

# ಕ್ಯಾಂಟರ್‌ಗೆ ಬಸ್ ಡಿಕ್ಕಿ; 20ಕ್ಕೂ ಹೆಚ್ಚು ಮಂದಿಗೆ ಗಾಯ

• ಉದಯವಾಹಿನಿ, ಕುದೂರು



ಉದಯವಾಹಿನಿ ಚಿತ್ರ

ಇಲ್ಲಿನ ರಾಷ್ಟ್ರೀಯ ಹೆದ್ದಾರಿ-75ರಲ್ಲಿ ಪಂಚರ್ ಆಗಿ ನಿಂತಿದ್ದ ಕ್ಯಾಂಟರ್‌ಗೆ ಹಿಂಬದಿಯಿಂದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಬಸ್ ಚಾಲಕ ಸೇರಿ ಸುಮಾರು 20ಕ್ಕೂ ಹೆಚ್ಚು ಪ್ರಮಾಣಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬಸ್ ಸಂಪೂರ್ಣ ನುಜ್ಜುಗುಜ್ಜಾಗಿದೆ. ಸೋಲೂರು ಬಳಿ ಪಂಚರ್ ಆಗಿ ನಿಂತಿದ್ದ ಕ್ಯಾಂಟರ್‌ಗೆ ಹಿಂಬಾಗಕ್ಕೆ ಚಿಕ್ಕಮಂಗಳೂರು ಕಡೆಯಿಂದ ಬೆಂಗಳೂರಿಗೆ ಹೊರಟಿದ್ದ ಅಶ್ವಮೇಧ ಬಸ್ ರಭಸದಿಂದ ಗುದ್ದಿದೆ. ಬಸ್ ಮುಂಭಾಗ ಸಂಪೂರ್ಣ ಜಖಂ ಆಗಿದ್ದರಿಂದ ಚಾಲಕನ ರಕ್ಷಣೆ ಕಷ್ಟವಾಗಿತು. ಬಳಿಕ ಬೃಹತ್ ನಿರ್ಮಾಣ ಯಂತ್ರದ ಮೂಲಕ ಬಸ್ ಬೇರ್ಪಡಿಸಿ ಬಸ್ ಚಾಲಕನನ್ನು ರಕ್ಷಣೆ ಮಾಡಲಾಯಿತು.

ಹಾಸನದ ವಡ್ಡರಹಳ್ಳಿ ಸೋಮಶೇಖರ್ ಹಾಗೂ ಬೆಂಗಳೂರಿನ ಎಂ.ಎಸ್. ಪಾಳ್ಯದ ಶಶಿಕಲಾ ಎಂಬುವರನ್ನು ನೆಲಮಂಗಲ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದ ಗಾಯಾಳುಗಳನ್ನು ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ರಸ್ತೆ ಬದಿ ಕ್ಯಾಂಟರ್ ನಿಲ್ಲಿಸಿದ್ದ ಚಾಲಕ ಈ ಬಗ್ಗೆ ಯಾವುದೇ ಸೂಚನೆ ನೀಡದೆ ಇರುವುದು ಅಪಘಾತಕ್ಕೆ ಕಾರಣ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ಕುದೂರು ಪಿಎಸ್‌ಐ ನವೀನ್, ಸಿಬ್ಬಂದಿ ಭೇಟಿ ನೀಡಿ ಗಾಯಗೊಂಡವರನ್ನು ನೆಲಮಂಗಲ, ಬೆಂಗಳೂರಿಗೆ ಆಸ್ಪತ್ರೆಗೆ ಆಂಬುಲೆನ್ಸ್ ಮೂಲಕ ಕಳುಹಿಸಿದರು. ಕುದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಾನವ ಹಕ್ಕು ರಕ್ಷಣೆ, ಮುಂಜಾಗ್ರತೆಯೇ ಮದ್ದು

## ಎಸ್‌ಬಿಆರ್‌ಆರ್ ಮಹಾಜನ ಕಾನೂನು ಕಾಲೇಜಿನಲ್ಲಿ ರಾಷ್ಟ್ರಮಟ್ಟದ ಕಾರ್ಯಾಗಾರ

• ಉದಯವಾಹಿನಿ, ಮೈಸೂರು

ಮಾನವ ಹಕ್ಕುಗಳಿಗೆ ಹಾನಿಯಾಗದಂತೆ ನೋಡಿಕೊಳ್ಳುವುದು ಇಂದಿನ ತುರ್ತು. ಹಕ್ಕುಗಳ ಜಾರಿಗೆ ಕೇವಲ ಕಾನೂನುಗಳನ್ನು ರಚಿಸಿ ರಕ್ಷಣೆಯ ಕ್ರಮಕ್ಕೆ ಮುಂದಾಗದಿದ್ದರೆ ಯಾವುದೇ ಪ್ರಯೋಜನವಿಲ್ಲ ಎಂದು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಗಳ ಚೇರ್ಮನ್ ನ್ಯಾ. ಬಿ.ಎ.ಪಾಟೀಲ್ ಹೇಳಿದರು. ಇಲ್ಲಿನ ಎಸ್‌ಬಿಆರ್‌ಆರ್ ಮಹಾಜನ ಕಾನೂನು ಕಾಲೇಜಿನಲ್ಲಿ ಶನಿವಾರ ನಡೆದ ಸಮಕಾಲೀನ ಯುಗದಲ್ಲಿ ಮಾನವ ಹಕ್ಕುಗಳ ಪ್ರಸ್ತುತ ಹೊಸ ಸವಾಲುಗಳು ಕುರಿತ ಒಂದು ದಿನ ರಾಷ್ಟ್ರಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

**ರಕ್ಷಣೆಗೆ ತ್ವರಿತ ಕ್ರಮ**

ಮಹಿಳೆಯರ ರಕ್ಷಣೆಗೆ ತ್ವರಿತ ಕ್ರಮಗಳನ್ನು ಕೈಗೊಳ್ಳುವುದು. ದೌರ್ಜನ್ಯ ನಡೆಯದಂತೆ ನಿಯಂತ್ರಣ ಯೋಜನೆಗಳನ್ನು ರೂಪಿಸುವುದು. ಹಕ್ಕುಗಳನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ದೇಶದಲ್ಲಿ ಬಹಳಷ್ಟು ಜನ ಬಡತನದಲ್ಲಿದ್ದು, ಶಿಕ್ಷಣದ ಕೊರತೆ ಇದಕ್ಕೆ ಕಾರಣ. ಉತ್ತಮ ಶಿಕ್ಷಣ ನೀಡುವ ಮೂಲಕವೂ ಹಕ್ಕುಗಳ ರಕ್ಷಣೆ ಸಾಧ್ಯ ಎಂದರು. ಎರಡನೇ ವಿಶ್ವ ಮಹಾಯುದ್ಧದ ಬಳಿಕ ಮಾನವ ಹಕ್ಕುಗಳ ಬಗ್ಗೆ ಗಂಭಿರ ಚರ್ಚೆ ನಡೆಯಿತು. ವಿಶ್ವಸಂಸ್ಥೆಯಿಂದ ಹಕ್ಕುಗಳ ಜಾರಿಗೆ



ಉದಯವಾಹಿನಿ ಚಿತ್ರ

> ಮಾನವ ಹಕ್ಕುಗಳ ಉಲ್ಲೇಖವು ವೇದ, ಪುರಾಣಗಳಲ್ಲೂ ಇವೆ. ಮನುಷ್ಯನ ಅಸ್ತಿತ್ವದ ಉಳಿವು ಮತ್ತು ವ್ಯಕ್ತಿತ್ವ ಬೆಳವಣಿಗೆಗೆ ಮಾನವ ಹಕ್ಕುಗಳು ಅಗತ್ಯ
> 
> -ಪ್ರೊ.ಸಿ.ಬಸವರಾಜು

1948ರಂದು ನಿರ್ಧಾರ ಕೈಗೊಳ್ಳಲಾಯಿತು.

ಭಾರತದ ಸಂವಿಧಾನವೂ ಮಾನವ ಹಕ್ಕುಗಳನ್ನು ನೈಸರ್ಗಿಕ ಹಕ್ಕುಗಳಾಗಿ ಗುರುತಿಸಿದ್ದು, ತುರ್ತು ಪರಿಸ್ಥಿತಿಯಲ್ಲೂ ಇವನ್ನು ಮೊಟಕುಗೊಳಿಸಲಾಗದು ಎಂದು ವಿವರಿಸಿದರು.

ನ್ಯಾಯ ಪಡೆಯಲು ಮೊದಲು ಸಂಪರ್ಕಿಸಬೇಕಾದ

**ಭಯೋತ್ಪಾದನೆ ಸವಾಲು**

**ಇಂದು ಮಾನವ ಹಕ್ಕುಗಳ ರಕ್ಷಣೆಯಲ್ಲಿ ಭಯೋತ್ಪಾದನೆ ದೊಡ್ಡ ಸವಾಲಾಗಿದೆ. ನಕ್ಸಲಿಸಂ ಅಲ್ಲಿ ತೊಡಗಿದ್ದ ಅನೇಕರು ಉತ್ತಮ ಶೈಕ್ಷಣಿಕ ಸಾಧನೆ ತೋರಿದವರು. ಆದರೆ, ಸಮಾಜದಲ್ಲಿ ಸೂಕ್ತ ಉದ್ಯೋಗ, ಸೌಲಭ್ಯ ದೊರೆಯದ ಕಾರಣ ಅವರು ಮತ್ತೊಂದು ಹಾದಿಯತ್ತ ಸಾಗುತ್ತಾರೆ. ಇದರ ಹಿಂದಿನ ಸಮಸ್ಯೆಗಳನ್ನು ಅರಿತು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.**

ಪೊಲೀಸ್ ಠಾಣೆಯಲ್ಲಿಯೇ ಮಾನವ ಹಕ್ಕುಗಳ ಉಲ್ಲಂಘನೆ ಹೆಚ್ಚುತ್ತಿದೆ. ಕಾರಾಗೃಹಗಳಲ್ಲೂ ಇದೇ ಪರಿಸ್ಥಿತಿಯಿದೆ.

ಕೇವಲ ಪ್ರಾಣಿಯಂತೆ ಬದುಕದೇ ಸರ್ವತೋಮುಖ ಅಭಿವೃದ್ಧಿ ಹೊಂದಲು ಸಹಕರಿಸುವುದೇ ಮಾನವ ಹಕ್ಕುಗಳ ಉದ್ದೇಶ ಎಂದರು.


ಕಾರ್ಯಕ್ರಮದಲ್ಲಿ ಮಹಾಜನ ಶಿಕ್ಷಣ ಸೊಸೈಟಿ ಕಾರ್ಯದರ್ಶಿ ಟಿ.ವಿಜಯಲಕ್ಷ್ಮಿ ಮುರಳೀಧರ್, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಪ್ರಾಂಶುಪಾಲೆ ಕೆ.ಸೌಮ್ಯಾ ಹಾಜರಿದ್ದರು.

# ಹೂವಳ್ಳಿ ಪ್ರಕಾಶ್ ಹೇಳಿಕೆ ಖಂಡಿಸಿದ ದಲಿತಪರ ಸಂಘಟನೆ

• ಉದಯವಾಹಿನಿ, ಮುಳಬಾಗಿಲು

ಸೋಮವಾರ ಕೋಲಾರದಲ್ಲಿ ನಡೆಯಲಿರುವ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಕೊತ್ತೂರು ಮಂಜುನಾಥ್ ವೇದಿಕೆ ಹತ್ತಬಾರದು ಎಂದು ಮುಖಂಡ ಹೂವಳ್ಳಿ ಪ್ರಕಾಶ್ ಪತ್ರಿಕಾ ಹೇಳಿಕೆ ನೀಡಿರುವುದು ಖಂಡನೀಯ ಎಂದು ಮುಳಬಾಗಿಲು ದಲಿತಪರ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದವು. ಮುಳಬಾಗಿಲು ನಗರದ ಪ್ರವಾಸಿ ಮಂದಿರದಲ್ಲಿ ದಲಿತಪರ ಸಂಘಟನೆಗಳಿಂದ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ತಾಲ್ಲೂಕು ಪಂಚಾಯತಿ ಮಾಜಿ ಅಧ್ಯಕ್ಷ ವೆಂಕಟರಮಣಪ್ಪ ಮಾತನಾಡಿದರು. ದಲಿತ ಸಿಂಹ ಸೇನೆ ಸಂಸ್ಥಾಪಕ ಅಧ್ಯಕ್ಷ ಹೂವಳ್ಳಿ ನಾಗರಾಜ್ ಎಂಬುವವರು ಕೋಲಾರದಲ್ಲಿ ಪತ್ರಿಕಾ ಹೇಳಿಕೆ ನೀಡಿ ಅಂಬೇಡ್ಕರ್ ಜಯಂತಿಯಲ್ಲಿ ಕೊತ್ತೂರು ಮಂಜುನಾಥ್ ವೇದಿಕೆ ಹತ್ತಿದರೆ ಪ್ರತಿಭಟನೆ ಮಾಡುವುದಾಗಿ ತಿಳಿಸಿದ್ದಾರೆ.

ಕೊತ್ತೂರು ಮಂಜುನಾಥ್ ಅವರನ್ನು



ಉದಯವಾಹಿನಿ ಚಿತ್ರ

ಬೆದರಿಸಿ ಹಣ ವಸೂಲಿ ಮಾಡುವ ತಂತ್ರ ಇದರಲ್ಲಿ ಅಡಗಿದೆ ಎಂದು ಅವರು ಆರೋಪಿಸಿದರು.

ಅಂಬೇಡ್ಕರ್ ಜಯಂತಿ ಸರ್ಕಾರದ ಕಾರ್ಯಕ್ರಮವಾಗಿದ್ದು, ಪ್ರೋಟೋಕಲ್ ಪ್ರಕಾರ ಶಾಸಕರು ಕಾರ್ಯಕ್ರಮದಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆ. ಇಂತಹ ಕಾರ್ಯಕ್ರಮದಲ್ಲಿ ಕೊತ್ತೂರು ವೇದಿಕೆ ಹತ್ತಬಾರದು ಎಂದು ಹೇಳಲು ಹೂವಳ್ಳಿ ಪ್ರಕಾಶ್ ಯಾರು? ಅದನ್ನು ನಿರ್ಧರಿಸಲು ಅವರಿಗೆ ಯಾವ ಹಕ್ಕಿದೆ ಎಂದು ಅವರು ಪ್ರಶ್ನಿಸಿದರು.

ಕೊತ್ತೂರು ಮಂಜುನಾಥ್ ಅವರ ಜಾತಿ ಪ್ರಮಾಣ ಪತ್ರದ ವಿಚಾರ ಮುಳಬಾಗಿಲು ಕ್ಷೇತ್ರಕ್ಕೆ ಸಂಭಂದಿಸಿದ್ದು, ಆ ಕುರಿತು ನ್ಯಾಯಾಲಯ ಯಾವ ತೀರ್ಪು ನೀಡುತ್ತದೆಯೋ ಅದಕ್ಕೆ ತಲೆ ಬಾಗಬೇಕಾಗುತ್ತದೆ. ಆದರೆ ನ್ಯಾಯಾಲಯದ

> ಹೂವಳ್ಳಿ ಪ್ರಕಾಶ್ ಕೊತ್ತೂರು ಬಗ್ಗೆ ಎರಡು ವರ್ಷ ಗಳಿಂದಲೂ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತ ಬಂದಿದ್ದಾರೆ. ಇನ್ನು ಮುಂದೆ ಇದನ್ನು ನಿಲ್ಲಿಸದಿದ್ದರೆ ಎದುರಿಸಬೇಕಾಗುತ್ತದೆ
> 
> -ಗೊಲ್ಲಹಳ್ಳಿ ವೆಂಕಟೇಶ್

ತೀರ್ಪಿಗಿಂತ ಮೊದಲೇ ಹೂವಳ್ಳಿ ಪ್ರಕಾಶ್ ತೀರ್ಪು ನೀಡುವುದು ಎಷ್ಟು ಸರಿ.

ಈ ರೀತಿ ಅವರ ಮಾನಕ್ಕೆ ಧಕ್ಕೆಯಾಗುವ ಹೇಳಿಕೆಗಳನ್ನು ನೀಡಿದರೆ ತಾಲ್ಲೂಕು ದಲಿತಪರ ಸಂಘಟನೆಗಳಿಂದ ಹೂವಳ್ಳಿ ಪ್ರಕಾಶ್ ಮತ್ತು ತಂಡದ ವಿರುದ್ಧ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ದೇವರಾಯ ಸಮುದ್ರ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಜಮ್ಮನಹಳ್ಳಿ ಕೃಷ್ಣಪ್ಪ, ವೆಂಕಟರಮಣಪ್ಪ, ಗೊಲ್ಲಹಳ್ಳಿ ವೆಂಕಟೇಶ್, ಮೆಕಾನಿಕ್ ಶ್ರೀನಿವಾಸ್, ಕಾರ್ ಶ್ರೀನಿವಾಸ್, ಜಮ್ಮನಹಳ್ಳಿ ಕೃಷ್ಣಪ್ಪ ಮತ್ತಿತರರು ಇದ್ದರು.

# ರಕ್ತದಾನ ಪುಣ್ಯದ ಕೆಲಸ: ವೈದ್ಯ ಬಸವರಾಜು

• ಉದಯವಾಹಿನಿ, ಕೊಳ್ಳೇಗಾಲ

ದಾನಗಳಲ್ಲಿ ರಕ್ತದಾನ ಮಹಾದಾನ. ಜನರ ಜೀವ ರಕ್ಷಣೆಗೆ ರಕ್ತ ಅತ್ಯವಶ್ಯಕ, ರಕ್ತದ ಅವಶ್ಯಕತೆ ಇರುವ ವ್ಯಕ್ತಿಗಳಿಗೆ ರಕ್ತದಾನ ಮಾಡುವುದರ ಮೂಲಕ ಎಲ್ಲರು ಜನರ ಅಮೂಲ್ಯ ಜೀವ ರಕ್ಷಣೆಗೆ ಮುಂದಾಗಬೇಕು' ಎಂದು ನಗರದ ಸರ್ಕಾರಿ ಉಪ ವಿಭಾಗ ಆಸ್ಪತ್ರೆಯ ವೈದ್ಯ ಡಾ.ಬಸವರಾಜು ಹೇಳಿದರು. ನಗರದಲ್ಲಿ ಶನಿವಾರ ಡಾ.ಬಿ.ಆರ್ ಅಂಬೇಡ್ಕರ್ ಅವರ 134 ನೇ ಜಯಂತಿ ಅಂಗವಾಗಿ ಭೀಮ ನಗರದ ವೈದ್ಯರ ಬಳಗದಿಂದ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಹಾಗೂ ರಕ್ತದಾನ ಶಿಬಿರದ ಕಾರ್ಯಕ್ರಮ ಉದ್ಘಾಟನೆ ಮಾಡಿ ನಂತರ ಮಾತನಾಡಿದರು.

ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳು ಹೆಚ್ಚಾಗಿ ನಡೆಯಬೇಕು. ಕೃತಕವಾಗಿ ಎಲ್ಲವನ್ನು ಸಷ್ಟಿ ಮಾಡಬಹುದು. ಆದರೆ, ರಕ್ತವನ್ನು ಸೃಷ್ಟಿ ಮಾಡಲು ಸಾಧ್ಯವಿಲ್ಲ. ಹಾಗಾಗಿ ರಕ್ತದಾನ ಪುಣ್ಯದ ಕೆಲಸವಾಗಿದೆ. ಪ್ರತಿಯೊಬ್ಬರೂ ರಕ್ತದಾನ ಮಾಡಬೇಕು. ಇದರಿಂದ ಆರೋಗ್ಯದಲ್ಲಿ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ.

ಮನುಷ್ಯರಿಗೆ ಕಾಯಿಲೆಗಳು ಹತ್ತಿರ ಸುಳಿಯುವುದಿಲ್ಲ.



ಉದಯವಾಹಿನಿ ಚಿತ್ರ

ಮುಖ್ಯವಾಗಿ ಕೊಲೆಸ್ಟ್ರಾಲ್ ಕಡಿಮೆಯಾಗುತ್ತದೆ. ಇತ್ತೀಚಿನ ದಿನದಲ್ಲಿ ರಕ್ತಕ್ಕೆ ಬಹಳ ಬೇಡಿಕೆ ಇದ್ದು, ತುರ್ತು ಪರಿಸ್ಥಿತಿಯಲ್ಲಿ ಒಬ್ಬರ ಜೀವ ಉಳಿಸಿದಂತಾಗುತ್ತದೆ ಎಂದರು.

ಒಂದು ಪ್ರದೇಶದ ಜನರ ಸರ್ವಾಂಗೀಣ ಅಭಿವೃದ್ಧಿಗೆ ಆರೋಗ್ಯ ಅತ್ಯಂತ ಅವಶ್ಯಕವಾಗಿದೆ. ಪ್ರತಿಯೊಬ್ಬರು ಆರೋಗ್ಯ ಬಗ್ಗೆ ಸೂಕ್ತ ಕಾಳಜಿ ವಹಿಸಬೇಕು.

ಹಲವು ರೋಗಗಳನ್ನು ಪ್ರಾರಂಭದಲ್ಲಿಯೇ ಗುರುತಿಸಿದರೆ ಅವುಗಳನ್ನು ಗುಣಪಡಿಸಬಹುದು.

ಜನರು, ವಿದ್ಯಾರ್ಥಿಗಳು ಆರೋಗ್ಯದ ಬಗ್ಗೆ ಸದಾ ಜಾಗತರಾಗಿರಬೇಕು ಎಂದರು. ಆರೋಗ್ಯ ತಪಾಸಣಾ ಶಿಬಿರದಲ್ಲಿ 15ಕ್ಕೂ ಹೆಚ್ಚು ನುರಿತ ತಜ್ಞರು ಇದ್ದು ಸುಮಾರು 1570 ಕ್ಕೂ ಹೆಚ್ಚು ಮಂದಿ ಆರೋಗ್ಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡರು. ರಕ್ತದಾನ ಶಿಬಿರದಲ್ಲಿ 103 ಮಂದಿ ರಕ್ತದಾನ ಮಾಡಿದರು.

# ಗಿರಿಜನರ ಜಮೀನು ದಾರಿ ಒತ್ತುವರಿ ಆರೋಪ

• ಉದಯವಾಹಿನಿ, ಹುಣಸೂರು

ತಾಲ್ಲೂಕಿನ ಹಮ್ಮಿಗೆ ಹಾಡಿಯಲ್ಲಿ ಅರಣ್ಯ, ಜಮೀನಿಗೆ ಹೋಗಲು ಇದ್ದ ಪಾರಂಪರಿಕೆ ರಸ್ತೆ ಒತ್ತುವರಿಯಾಗಿದ್ದು, ತೆರವುಗೊಳಿಸಲು ಮನವಿ ನೀಡಿದರೂ ಕಂದಾಯ ಇಲಾಖೆ ಕ್ರಮ ಕೈಗೊಂಡಿಲ್ಲ ಎಂದು ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಕೊಳವಿಗೆ ಜಯಪ್ಪ ಆರೋಪಿಸಿದರು. ಹಮ್ಮಿಗೆ ಹಾಡಿಯಲ್ಲಿ ಆಯೋಜಿಸಿದ್ದ ಬುಡಕಟ್ಟು ಕೃಷಿಕರ ಸಂಘದ ಮಾಸಿಕ ಸಭೆಯಲ್ಲಿ ಮಾತನಾಡಿ, ಗ್ರಾಮದ ಕೆಲ ಮುಖಂಡರು ಗಿರಿಜನರ ಹೊಲ ಮತ್ತು ಅರಣ್ಯಕ್ಕೆ ಹೋಗಿ ಬರುವ ದಾರಿ ಒತ್ತುವರಿ ಮಾಡಿಕೊಂಡು ಸಮುದಾಯದವರಿಗೆ ತೊಂದರೆ ನೀಡುತ್ತಿದ್ದಾರೆ. ಈ ಸಂಬಂಧ ಕಂದಾಯ ಇಲಾಖೆಗೆ ಹಲವು ಬಾರಿ ದೂರು ನೀಡಿದರೂ ಸಮಸ್ಯೆ ಬಗೆಹರಿಸಿಲ್ಲ. ಗಿರಿಜನರ ಸಮಸ್ಯೆಗೆ ಸ್ಪಂದಿಸದ ತಾಲ್ಲೂಕು ಕಂದಾಯ ಇಲಾಖೆ ವಿರುದ್ಧ ಧರಣಿ ನಡೆಸಲಿದ್ದೇವೆ ಎಂದು ಎಚ್ಚರಿಕೆ ನೀಡಿದರು.

**ವಿದ್ಯುತ್ ಸಂಪರ್ಕ ಕಡಿತ:** 30ಕ್ಕೂ ಹೆಚ್ಚು ಮನೆಗಳಿಗೆ ವಿದ್ಯುತ್ ಸಂಪರ್ಕ ಕಡಿತ ಮಾಡಲಾಗಿದ್ದು, ಈ ಸಂಬಂಧ ಈಗಾಗಲೇ ಸೆಸ್‌ಗೆ ಸರ್ಕಾರ ವಿದ್ಯುತ್ ಬಿಲ್ ಭರಿಸುವ ಭರವಸೆ ನೀಡಿದ್ದರೂ ಗಿರಿಜನರ ಮನೆಗೆ ವಿದ್ಯುತ್ ಕಡಿತಗೊಳಿಸಿದ್ದಾರೆ. ರಾಜ್ಯದಲ್ಲಿ ಸರ್ಕಾರ ಗ್ಯಾರಂಟಿ ಘೋಷಿಸಿ ಎಲ್ಲಾ ನಾಗರಿಕರಿಗೂ ಉಚಿತ ವಿದ್ಯುತ್ ಸೌಲಭ್ಯ ನೀಡಿದ್ದರೂ ಗಿರಿಜನರಿಗೆ ಆ ಭಾಗ್ಯ ಇಲ್ಲವಾಗಿದೆ. ಗಿರಿಜನ ಕಲ್ಯಾಣ ಇಲಾಖೆಗೆ



ಉದಯವಾಹಿನಿ ಚಿತ್ರ

ತಾಲ್ಲೂಕಿನ ಹಾಡಿಗಳ ನಿವಾಸಿಗಳ ಮನೆ ವಿದ್ಯುತ್ ಬಿಲ್ ಪಾವತಿಸುವಂತೆ ಸೂಚನೆ ಇದ್ದರೂ ಈವರೆಗೂ ಕ್ರಮವಹಿಸದೆ ಕತ್ತಲಲ್ಲಿ ಬದುಕು ನಡೆಸುತ್ತಿದ್ದೇವೆ ಎಂದರು. ಡೀಡ್ ಸಂಸ್ಥೆಯ ನಿರ್ದೇಸಕ ಶ್ರೀಕಾಂತ್ ಮಾತನಾಡಿ, ಬಿಲ್ಲೇನಹೊಸಹಳ್ಳಿ ಹಾಡಿಯಲ್ಲಿ ಮೈಸೂರಿನ ಎನ್.ಐ.ಇ. ಕಾಲೇಜು ವತಿಯಿಂದ ಕಳೆದ ವರ್ಷ ಸೋಲಾರ್ ಮೈಕ್ರೋಗ್ರಿಡ್ ಸ್ಥಾಪಿಸಿ 70 ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ. ಇದೇ ರೀತಿ ಹಮ್ಮಿಗೆ ಹಾಡಿಯಲ್ಲೂ ಮೈಕ್ರೋ ಗ್ರಿಡ್ ಸ್ಥಾಪಿಸುವಂತೆ ಮನವಿ ಬಂದಿದ್ದು ಈ ಸಂಬಂಧ ಡೀಡ್ ಚಿಂತನೆ ನಡೆಸಿದೆ ಎಂದರು.

ಮೈಸೂರು ವಿವಿ ಒಳಗೊಳ್ಳುವಿಕೆ ಸಂಶೋಧನಾ ಕೇಂದ್ರದ ಸಹಕಾರದಿಂದ ತಾಲ್ಲೂಕಿನ ಕೊಳವಿಗೆ ಹಾಡಿಯಲ್ಲಿ ಏ.23 ರಂದು ಸರ್ಕಾರಿ ಯೋಜನೆಗಳ ಪರಿಚಯ ಹಾಗೂ ಅದೇ ದಿನ ಸಂಶೋಧನಾ ಕೇಂದ್ರದಲ್ಲಿ ಸಂಶೋಧಕರೊಂದಿಗೆ ಡಾ.ನಂಜುಂಡ ಮುಖಂಡತ್ವದಲ್ಲಿ ಆದಿವಾಸಿ ಮುಖಂಡರ ಚರ್ಚೆ ಏರ್ಪಡಿಸಲಾಗಿದೆ ಎಂದರು. ಸಭೆಯಲ್ಲಿ ಆದಿವಾಸಿ ಹಿರಿಯ ಮುಖಂಡ ವಿಠಲ್ ನಾಣಚ್ಚಿ, ಹರ್ಷ, ಶಿವಣ್ಣ, ಮುನಿರಾಮಯ್ಯ, ದೊಡ್ಡಮಾರಯ್ಯ,ರಂಗಮ ಇದ್ದರು.

# ಗೋಪಾಲಸ್ವಾಮಿ ಬೆಟ್ಟದಲ್ಲಿ ಚಿತ್ರೀಕರಣ: ಕಂದಾಯ-ಅರಣ್ಯ ಇಲಾಖೆ ಮಧ್ಯೆ ತಿಕ್ಕಾಟ

# ಚಿತ್ರೀಕರಣ ನಡೆದಿರುವ ವಿಚಾರವೂ ಗಮನಕ್ಕೆ ಬರಲಿಲ್ಲ

• ಉದಯವಾಹಿನಿ, ಗುಂಡ್ಲುಪೇಟೆ

ಬಂಡೀಪುರ ಪರಿಸರ ಸೂಕ್ಷ್ಮ ವಲಯ ವ್ಯಾಪ್ತಿಯಲ್ಲಿರುವ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಈಚೆಗೆ ಮಲಯಾಳಂ ಸಾಕ್ಷ್ಯಚಿತ್ರದ ಚಿತ್ರೀಕರಣಕ್ಕೆ ಅನುಮತಿ ನೀಡಿರುವ ವಿಚಾರದಲ್ಲಿ ಕಂದಾಯ, ಅರಣ್ಯ ಇಲಾಖೆ ನಡುವೆ ತಿಕ್ಕಾಟ ಶುರುವಾಗಿದೆ.

ಹಿಮವದ್ ಗೋಪಾಲಸ್ವಾಮಿ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದ್ದು, ಚಿತ್ರತಂಡ ತಾಲ್ಲೂಕು ಆಡಳಿತದಿಂದ ಪೂರ್ವಾನುಮತಿ ಪಡೆದಿಲ್ಲ ಎಂದು ತಹಶೀಲ್ದಾರ್ ರಮೇಶ್ ಬಾಬು ಸ್ಪಷ್ಟಪಡಿಸಿದ್ದಾರೆ. ಇಲಾಖೆಯ ನಿಯಮಗಳ ಪ್ರಕಾರ ಚಿತ್ರೀಕರಣಕ್ಕೆ ಅನುಮತಿ ಕೋರಿ ಮನವಿ ಸಲ್ಲಿಸಬೇಕು. ಆದರೆ, ಚಿತ್ರತಂಡ ಸಂಪರ್ಕ ಮಾಡಿಲ್ಲ. ಚಿತ್ರೀಕರಣ ನಡೆದಿರುವ ವಿಚಾರವೂ ಗಮನಕ್ಕೆ ಬರಲಿಲ್ಲ ಎಂದು ತಿಳಿಸಿದ್ದಾರೆ.

**ಪರಿಸರವಾದಿಗಳ ವಿರೋಧ:** ದೇವಸ್ಥಾನದ ಬಳಿ ತೆರಳಲು ಸಾರ್ವಜನಿಕರ ವಾಹನಗಳಿಗೆ ಅನುಮತಿ ಇಲ್ಲದಿರುವಾಗ ಚಿತ್ರತಂಡದ ವಾಹನಗಳು ತೆರಳಲು ಅನುಮತಿ ನೀಡಿರುವುದಕ್ಕೆ ಪರಿಸರವಾದಿಗಳು, ಸ್ಥಳೀಯರು, ರೈತ ಸಂಘಗಳು ಹಾಗೂ ಕನ್ನಡಪರ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಜಿಲ್ಲೆಯಾದ್ಯಂತ ಸರಣಿ ಪ್ರತಿಭಟನೆಗಳು ನಡೆಯುತ್ತಿವೆ.



ಉದಯವಾಹಿನಿ ಚಿತ್ರ

**ಕ್ರಮಕ್ಕೆ ರೈತ ಸಂಘಟನೆ ಮನವಿ**

**ಹಿಮವದ್ ಗೋಪಾಲಸ್ವಾಮಿ ದೇವಾಲಯದ ಆವರಣದಲ್ಲಿ ಚಿತ್ರೀಕರಣಕ್ಕೆ ಅವಕಾಶ ನೀಡಿರುವ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವಂತೆ ಗುಂಡ್ಲುಪೇಟೆ ತಾಲ್ಲೂಕಿನ ರೈತ ಸಂಘಟನೆಯ ಪದಾಧಿಕಾರಿಗಳು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರಿಗೆ ದೂರು ಸಲ್ಲಿಸಿದರು.**

ಒತ್ತಡಕ್ಕೆ ಮಣಿದು, ಹಣದಾಸೆಗೆ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಚಿತ್ರೀಕರಣಕ್ಕೆ, ವಾಹನಗಳ ಸಂಚಾರಕ್ಕೆ ಅನುಮತಿ ನೀಡಿರುವುದು ಖಂಡನೀಯ. ಅನುಮತಿ ನೀಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಆಗ್ರಹವೂ ಹೆಚ್ಚುತ್ತಿದೆ. ಕೇರಳದ ಚಿತ್ರತಂಡವು ಏ.8ರಂದು ಚಿತ್ರೀಕರಣಕ್ಕೆ ಅವಕಾಶ ಕೋರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಮನವಿ ಸಲ್ಲಿಸಿದ್ದು, ಅರಣ್ಯ, ಪರಿಸರ, ಜೀವಿಶಾಸ್ತ್ರ ಇಲಾಖೆಯ ಅಧೀನ ಕಾರ್ಯದರ್ಶಿ ಶಿವಪ್ರಕಾಶ್ ಅವರು ಚಿತ್ರೀಕರಣಕ್ಕೆ ಅನುಮತಿ ನೀಡುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಪತ್ರ ಬರೆದಿದ್ದಾರೆ.

ಷರತ್ತಿಗೊಳಪಟ್ಟು, ನಿಗದಿತ ಠೇವಣಿ ಶುಲ್ಕವನ್ನು ಮುಂಗಡವಾಗಿ ಪಡೆದು, ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಯ ದೃಷ್ಟಿಯಿಂದ ಷರತ್ತುಗಳನ್ನು ವಿಧಿಸಿ ಅನುಮತಿ ನೀಡುವಂತೆ ಅಧೀನ ಕಾರ್ಯದರ್ಶಿ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

# ದೇವರ ಕೊಳದಲ್ಲಿ ಉಕ್ಕಿದ ಜಲಧಾರೆ

• ಉದಯವಾಹಿನಿ, ಶ್ರೀರಂಗಪಟ್ಟಣ

ಬತ್ತಿ ಹೋಗಿದ್ದ ತಾಲ್ಲೂಕಿನ ಟಿ.ಎಂ. ಹೊಸೂರು ಗ್ರಾಮದ ದೇವರ ಕೊಳವನ್ನು ನರೇಗಾ ಯೋಜನೆಯಡಿ ಪುನರ್ ನಿರ್ಮಾಣ ಮಾಡಿದ್ದು, ಹಲವು ದಶಕಗಳ ಬಳಿಕ ಈ ಕೊಳದಲ್ಲಿ ಜೀವಜಲ ತುಂಬಿದೆ. ಗ್ರಾಮಕ್ಕೆ ಹೊಂದಿಕೊಂಡಿರುವ ಶತಮಾನದಷ್ಟು ಹಳೆಯದಾದ ದೇವರ ಕೊಳ ಶೇ 90 ಭಾಗ ಮುಚ್ಚಿ ಹೋಗಿತ್ತು.

ಕೊಳದ ಸುತ್ತ, ಒಳ ಭಾಗದಲ್ಲಿ ಮುಳ್ಳು ಕಂಟಿಗಳು ಬೆಳೆದಿದ್ದವು. ಕಾಡು ಕಲ್ಲಿನ ಗೋಡೆಗಳು ಕುಸಿದು ಬಿದ್ದಿದ್ದವು. ಹಾವು, ಹಲ್ಲಿಗಳು ಹರಿದಾಡುತ್ತಿದ್ದವು. ಎದೆ ಎತ್ತರ ಕೆಸರು ತುಂಬಿಕೊಂಡಿತ್ತು.

ಇಲ್ಲಿ ಕೊಳ ಇತ್ತು ಎಂದು ಹೇಳಲಾಗದಷ್ಟು ದುಸ್ಥಿತಿ ತಲುಪಿದ್ದ ಕೊಳಕ್ಕೆ ಮಹಾತ್ಮ ಗಾಂಧಿ ಗ್ರಾಮೀಣ



ಉದಯವಾಹಿನಿ ಚಿತ್ರ

ಉದ್ಯೋಗ ಖಾತ್ರಿ ಯೋಜನೆಯಡಿ ಸ್ಥಳೀಯ ಗ್ರಾಮ ಪಂಚಾಯಿತಿ ಕಾಲಕಲ್ಪ ನೀಡಿದೆ. ಇದರ ಪರಿಣಾಮವಾಗಿ ಟಿ.ಎಂ. ಹೊಸೂರು ದೇವರ ಕೊಳದಲ್ಲಿ ಮತ್ತೆ ಜೀವ ಜಲ ತುಂಬಿದೆ.

ಟಿ.ಎಂ. ಹೊಸೂರು ಗ್ರಾಮದ ದೇವರ ಕೊಳವನ್ನು ನರೇಗಾ ಯೋಜನೆಯಡಿ, 9.50 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಕೊಳದ ಒಳಗೆ ತುಂಬಿದ ಕೆಸರನ್ನು ಖಾಲಿ ಮಾಡಿ ಗಿಡಗಂಟಿಗಳನ್ನು ಕಿತ್ತು ಹಸನು ಮಾಡಲಾಗಿದೆ. ಕುಸಿದಿದ್ದ ಕಾಡು ಕಲ್ಲಿನ ಗೋಡೆಗೆ ಪರ್ಯಾಯವಾಗಿ ಚಪ್ಪಡಿ, ಸೈಜುಗಲ್ಲು ಮತ್ತು ಸಿಮೆಂಟ್‌ನಿಂದ ಚೌಕಾಕಾರದ ನಿರ್ಮಾಣ ಮಾಡಲಾಗಿದೆ. ಕೊಳದ ನಾಲ್ಕೂ ಕಡೆಗಳಿಂದ ಸಲೀಸಾಗಿ ಹತ್ತಿ ಇಳಿಯುವ ವ್ಯವಸ್ಥೆ ಮಾಡಲಾಗಿದೆ. ನೀರು ಕಲುಷಿತವಾಗುವುದನ್ನು ತಡೆಯಲು ಕೊಳದ ಸುತ್ತಲೂ ತಂತಿ ಬೇಲಿಯನ್ನೂ ನಿರ್ಮಿಸಲಾಗಿದೆ. ಪುಟ್ಟ ಕೊಳವೀಗ ಆಕರ್ಷಕ ಕಲ್ಯಾಣಿಯ ರೂಪ ಪಡೆದಿದ್ದು ನೋಡುಗರ ಗಮನ ಸೆಳೆಯುತ್ತಿದೆ. ಮುಖ್ಯವಾಗಿ ಈ ಕೊಳದಲ್ಲಿ ಹತ್ತಾರು ಅಡಿಗಳಷ್ಟು ನೀರು ತುಂಬಿ ನಳನಳಿಸುತ್ತಿದೆ. ನಲ್ಲಿಗಳು ಇಲ್ಲದ ಕಾಲದಲ್ಲಿ ಇಡೀ ಗ್ರಾಮಕ್ಕೆ ಕುಡಿಯುವ ನೀರಿನ ಮೂಲವಾಗಿದ್ದ ಟಿ.ಎಂ. ಹೊಸೂರು ಗ್ರಾಮದ ದೇವರ ಕೊಳ ಭಾಗಶಃ ಮುಚ್ಚಿ ಹೋಗಿತ್ತು. ನರೇಗಾ ಯೋಜನೆಯಡಿ ಅಭಿವೃದ್ಧಿಪಡಿಸಿದ ಬಳಿಕ ಈ ಕೊಳ ಜಲ ವೈಭವದಿಂದ ಶೋಭಿಸುತ್ತಿದೆ ಎಂದು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಎಂ. ಶ್ರೀನಿವಾಸ್ ಸಂತಸ ವ್ಯಕ್ತಪಡಿಸುತ್ತಾರೆ.

# ಮುಂದುವರಿದ ಸಾರಿಗೆ ಸಂಸ್ಥೆ ಬಸ್ ಸಮಸ್ಯೆ

• ಉದಯವಾಹಿನಿ, ಸೋಮವಾರಪೇಟೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಡಿಕೇರಿ ಘಟಕದ ಸಮಸ್ಯೆ ಮುಂದುವರಿದಿದ್ದು, ಜಿಲ್ಲಾ ಘಟಕ ನಾಮಕಾವಸ್ಥೆಗೆ ಎಂಬಂತಾಗಿದ್ದು, ಸಾರ್ವಜನಿಕ ಸೇವೆಯಿಂದ ದೂರವೇ ಉಳಿದಿದೆ ಎನ್ನುವಂತಾಗಿದೆ. ಪ್ರತಿನಿತ್ಯ ಒಂದಿಲ್ಲೊಂದು ಸಮಸ್ಯೆ ಎದುರಾಗುತ್ತಿದ್ದು ಮಡಿಕೇರಿಯಿಂದ ಸೋಮವಾರಪೇಟೆಗೆ ಸಮರ್ಪಕ ಬಸ್ ವ್ಯವಸ್ಥೆ ಇಲ್ಲದೆ ಸರ್ಕಾರಿ ನೌಕರರು, ಖಾಸಗಿ ಉದ್ಯೋಗಕ್ಕೆ ತೆರಳುವವರು, ಶಾಲಾ ಮಕ್ಕಳಿಗೆ ಸಮಸ್ಯೆಯಾಗುತ್ತಿದೆ. ಮಡಿಕೇರಿಯಿಂದ ಸೋಮವಾರಪೇಟೆ ಭಾಗಕ್ಕೆ ಬೆಳಿಗ್ಗೆ 7.45 ರ ನಂತರ 9 ಗಂಟೆಯವರೆಗೆ ಬಸ್ ವ್ಯವಸ್ಥೆ ಇಲ್ಲ. 8.30ರ ಬಸ್ ವಾರದಲ್ಲಿ ಮೂರು ದಿವಸ ಇದ್ದರೆ ಉಳಿದ ನಾಲ್ಕು ದಿನಗಳು ಬರುವುದೇ ಇಲ್ಲ. ಬಸ್ ಒಳಗಡೆ ಶುಚಿತ್ವ ಇಲ್ಲದೆ ವಾರಗಳೇ ಕಳೆದಿರುತ್ತದೆ.



ಉದಯವಾಹಿನಿ ಚಿತ್ರ

ಶಾಸಕ ಡಾ.ಮಂತರ್‌ಗೌಡರ ಉಪಸ್ಥಿತಿಯಲ್ಲಿ ಇತ್ತೀಚೆಗೆ ಸಭೆ ನಡೆದಿದೆ.

ಡಿಪೋ ವ್ಯವಸ್ಥಾಪಕರು ಗಮನಹರಿಸುತ್ತಿಲ್ಲ. ಅದರಲ್ಲೂ ಸೋಮವಾರಪೇಟೆ ಭಾಗಕ್ಕೆ ಸಂಪೂರ್ಣ ತಾರತಮ್ಯ ನೀತಿ ಅನುಸರಿಸುತ್ತಿದ್ದಾರೆ ಎಂದು ಪ್ರತಿನಿತ್ಯ ಬಸ್‌ನಲ್ಲಿ ತೆರಳುತ್ತಿರುವ ನೌಕರರು, ವಿದ್ಯಾರ್ಥಿಗಳು ಪತ್ರಿಕೆಯೊಂದಿಗೆ ತಮ್ಮ ಅಳಲನ್ನು ವ್ಯಕ್ತಪಡಿಸಿದ್ದಾರೆ. ಶನಿವಾರ ಬೆಳಿಗ್ಗೆ 7.45ರ ನಂತರ 8.45 ರವರೆಗೆ ಯಾವುದೇ ಬಸ್ ವ್ಯವಸ್ಥೆ ಇರಲಿಲ್ಲ. ನಂತರ ಬಂದ ಬಸ್ ಮಕ್ಕಂದೂರು ಬಳಿ ಕೆಟ್ಟು ನಿಂತಿದೆ. ಪ್ರಯಾಣಿಕರು ಸಂಸ್ಥೆಗೆ ಹಿಡಿಶಾಪ ಹಾಕುತ್ತಾ ನಂತರ 9.15ರ ಬಸ್‌ನಲ್ಲಿ ಪ್ರಯಾಣ ಬೆಳೆಸಿದರು.

## ಮೈಸೂರಿಗೆ ಪೆರಿಫೆರಲ್ ರಿಂಗ್‌ರಸ್ತೆ; ಮುಡಾದಿಂದ ಈ ರಸ್ತೆಗೆ ಭೂಸ್ವಾಧೀನ ಎಷ್ಟು? ಪಿಆರ್‌ಆರ್ ಪ್ರಯೋಜನಗಳೇನು ಗೊತ್ತೇ..

# ಸದ್ಯ ಒಟ್ಟು ಯೋಜನೆಗೆ 2,100 ಕೋಟಿ ರೂ. ಬೇಕಾಗಬಹುದು

• ಉದಯವಾಹಿನಿ, ಮೈಸೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಪೆರಿಫೆರಲ್ ರಿಂಗ್ ರಸ್ತೆಗೆ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುವ ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಿದೆ. ನಗರ ದಿನೇ ದಿನೆ ಬೆಳವಣಿಗೆ ಹೊಂದುತ್ತಿದೆ. ಇದರಿಂದ ರಿಂಗ್ ರಸ್ತೆ ಮೇಲಿನ ಒತ್ತಡವೂ ಹೆಚ್ಚಾಗುತ್ತಿದೆ. ಹೀಗಾಗಿ ನಗರದ ಸಂಚಾರ ದಟ್ಟಣೆ ನಿರ್ವಹಣೆಯ ದೃಷ್ಟಿಯಿಂದ ಪೆರಿಫೆರಲ್ ರಿಂಗ್‌ರಸ್ತೆ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ.

ಡಿಪಿಆರ್ ತಯಾರಿಕೆಗೆ ಪ್ರಸಕ್ತ ಸಾಲಿನ ಮುಡಾ ಬಜೆಟ್‌ನಲ್ಲಿ 7.75 ಕೋಟಿ ರೂ. ಅನುದಾನ ಕಾಯ್ದಿರಿಸಲಾಗಿದೆ. 105.31 ಕಿ.ಮೀ. ಉದ್ದ, 45 ಮೀ. ಅಗಲದ ಪೆರಿಫೆರಲ್ ರಿಂಗ್ ರಸ್ತೆಯು 3/3 ಮುಖ್ಯ ಲೇನ್, ಎರಡೂ ಕಡೆ ಸರ್ವಿಸ್



ಉದಯವಾಹಿನಿ ಚಿತ್ರ

**ರಸ್ತೆ ನಿರ್ಮಾಣ ವೆಚ್ಚ**

ರಸ್ತೆ ಹೊಂದಿರುತ್ತದೆ.

ಪೆರಿಫೆರಲ್ ರಿಂಗ್ ರಸ್ತೆಗೆ ಸಮಗ್ರ ಯೋಜನಾ ವರದಿ ತಯಾರಿಸಲು ನುರಿತ ಎಂಜಿನಿಯರಿಂಗ್ ಕಂಪನಿಗಳಿಂದ ಮುಡಾ ಟೆಂಡರ್ ಆಹ್ವಾನಿಸಿದೆ.

> ಮುಡಾ ಪ್ರಾಧಿಕಾರದ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಪೆರಿಫೆರಲ್ ರಿಂಗ್‌ರಸ್ತೆಗೆ ಡಿಪಿಆರ್ ತಯಾರಿಸಲು 7.75 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ. ಅದಕ್ಕಾಗಿ ಗ್ಲೋಬಲ್ ಟೆಂಡರ್ ಕರೆಯಲಾಗಿದ್ದು, ಬಳಿಕ ಅರ್ಹ ಬಿಡ್ಡುದಾರರಿಗೆ ಶೀಘ್ರದಲ್ಲೇ ಕಾರ್ಯಾದೇಶ ನೀಡಲಾಗುತ್ತದೆ. ಡಿಪಿಆರ್ ಸಿದ್ಧವಾದ ಬಳಿಕವಷ್ಟೇ ಭೂಸ್ವಾಧೀನ, ರಸ್ತೆ ನಿರ್ಮಾಣ ವೆಚ್ಚ ತಿಳಿಯಲಿದೆ
> 
> -ಎ.ಎನ್.ರಘುನಂದನ್ ಮುಡಾ ಆಯುಕ್ತ.

ಈಗಾಗಲೇ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿರುವ ಟೆಂಡರ್‌ಗಳನ್ನು ತೆರೆದು ಅರ್ಹ ಬಿಡ್ಡುದಾರರಿಗೆ ಡಿಪಿಆರ್ ತಯಾರಿಸಲು ಕಾರ್ಯಾದೇಶ ನೀಡಲಾಗುತ್ತದೆ.

**ಪೆರಿಫೆರಲ್ ರಸ್ತೆ ಪ್ರಯೋಜನವೇನು ?**

- 25 ವರ್ಷಗಳವರೆಗೆ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆ
- ಹೊರ ರಾಜ್ಯದ ಸರಕು ಸಾಕಣೆ ವಾಹನಗಳ ನಗರ ಪ್ರವೇಶ ತಪ್ಪಲಿದೆ.
- ನಗರದ ಒಳಭಾಗದಲ್ಲಿ ಟ್ರಾಫಿಕ್ ಕಿರಿಕಿರಿಗೆ ಮುಕ್ತಿ
- ಕ್ಲಸ್ಟರ್ ನಿರ್ಮಾಣದಿಂದ ಕೈಗಾರಿಕೆಗಳಿಂದಾಗುವ ನಗರದ ಮೇಲಿನ ಒತ್ತಡ ತಗ್ಗಲಿದೆ.
- ವ್ಯವಸ್ಥಿತ ಯೋಜನೆಯಂತೆ ನಗರದ ಕೈಗಾರಿಕೆಗಳ ಅಭಿವೃದ್ಧಿ

**ಭೂಸ್ವಾಧೀನ ವೆಚ್ಚ ತಗ್ಗಿಸಲು ಯೋಜನೆ:** ಸದ್ಯ ಒಟ್ಟು ಯೋಜನೆಗೆ 2,100 ಕೋಟಿ ರೂ. ಬೇಕಾಗಬಹುದು ಎಂದು ಅಂದಾಜಿಸಲಾಗಿದೆ. ಇದರಲ್ಲಿ ಅಂದಾಜು 900 ಕೋಟಿ ರೂ.ಗಳನ್ನು ಭೂಸ್ವಾಧೀನಕ್ಕೆ ವ್ಯಯಿಸಬೇಕಾಗುತ್ತದೆ. ಈ ವೆಚ್ಚವನ್ನು ತಪ್ಪಿಸಲು ರೈತರ ಸಹಭಾಗಿತ್ವದಲ್ಲಿ ಟೌನ್ ಪ್ಲಾನಿಂಗ್ ಸ್ಕೀಂನಲ್ಲಿ ಭೂಮಿಯನ್ನು ಪಡೆಯಲು ಮುಡಾ ಚಿಂತನೆ ನಡೆಸಿದೆ. ಅಂದರೆ ರಿಂಗ್ ರಸ್ತೆ ಸಾಗುವ ಜಾಗವನ್ನು ರೈತರಿಂದ ಪಡೆದು ಇನ್ನುಳಿದ ಜಾಗವನ್ನು ಮುಡಾದಿಂದಲೇ ಅಭಿವೃದ್ಧಿಪಡಿಸಿ ಅದರಿಂದ ಬರುವ ಅನುದಾನದಲ್ಲಿಯೇ ರಸ್ತೆ ನಿರ್ಮಿಸಲು ಯೋಜಿಸಲಾಗಿದೆ.

# ಮಿನಿ ನ್ಯೂಸ್

## 4.99 ಕೋಟಿ ವೆಚ್ಚದ ನಾಲಾ ಕಾಮಗಾರಿಗೆ ಚಾಲನೆ

• ಉದಯವಾಹಿನಿ, ಭಾರತೀನಗರ

ಸಮೀಪದ ಲಕ್ಷ್ಮೀಗೌಡನದೊಡ್ಡಿ ಗ್ರಾಮದಲ್ಲಿ 4.99 ಕೋಟಿ ವೆಚ್ಚದ ಲೋಕಸರ ಶಾಖಾ ನಾಲೆಯಡಿ ಬರುವ ಯಡಗನಹಳ್ಳಿ, ಲಕ್ಷ್ಮೀ ಗೌಡನ ದೊಡ್ಡಿ ಗ್ರಾಮಗಳ ನಾಲಾ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಎಂ. ಉದಯ್ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಅನೇಕ ವರ್ಷಗಳಿಂದ ಗದ್ದೆಗಳಿಗೆ ಹೋಗಲು ರಸ್ತೆ ಇಲ್ಲದೆ ರೈತರು ಪರಿತಪಿಸುತ್ತಿದ್ದರು. ನಾಲೆಗಳು ಅಭಿವೃದ್ಧಿಯಾಗದೆ ಸಮರ್ಪಕವಾಗಿ ನೀರು ತಲುಪುತ್ತಿರಲಿಲ್ಲ. ಹೀಗಾಗಿ ನಾಲೆಗಳು, ರಸ್ತೆಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ ಎಂದರು. ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆಗಳು ಎದುರಾಗುತ್ತಿದ್ದು, ಕಾಂಗ್ರೆಸ್ ಕಾರ್ಯಕರ್ತರು ಸರ್ಕಾರದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಜನರಿಗೆ ತಿಳಿಸಬೇಕು.

ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ಅಡಿಪಾಯ ಹಾಕಬೇಕು ಎಂದು ಮನವಿ ಮಾಡಿದರು.

## ಸೇವೆ ಆಯ್ಕೆಯಲ್ಲ, ಅನಿವಾರ್ಯವಾಗಲಿ

• ಉದಯವಾಹಿನಿ, ಶ್ರೀರಂಗಪಟ್ಟಣ

ಸೇವೆ ಎಂಬುದು ಆಯ್ಕೆಯ ವಿಷಯವಾಗದೆ ಬದುಕಿನಲ್ಲಿ ಎಲ್ಲರಿಗೂ ಅನಿವಾರ್ಯವಾದರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಗಾಂಧಿವಾದಿ ಬಿ. ಸುಜಯಕುಮಾರ್ ಹೇಳಿದರು. ತಾಲ್ಲೂಕಿನ ಕೆ. ಶೆಟ್ಟಹಳ್ಳಿಯಲ್ಲಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕ ಹಮ್ಮಿಕೊಂಡಿರುವ 2024-25ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ವಾರ್ಷಿಕ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ದೈಹಿಕ ಶ್ರಮ ಆಧಾರಿತ ಜೀವನ ನಡೆಸುವುದರಿಂದ ನಿಜವಾದ ಅನುಭವವಾಗುತ್ತದೆ. ತಾಳ್ಮೆ, ಸಹನೆ, ಸಹಕಾರ ಗುಣ, ಚೈತನ್ಯಶೀಲತೆ ಮತ್ತು ಕಷ್ಟಸಹಿಷ್ಣು ಗುಣಗಳು ಸಿದ್ಧಿಸುತ್ತವೆ. ಚಮ್ಮಾರನ ಕೆಲಸದಿಂದ ಪ್ರಧಾನಿ ಹುದ್ದೆಯವರೆಗೆ ಎಲ್ಲಾ ಕೆಲಸಗಳೂ ತಮ್ಮದೇ ಆದ ವೃತ್ತಿ ಗೌರವ ಹೊಂದಿವೆ. ಎಲ್ಲರೂ ಸಮಾನರು ಎಂಬ ಸತ್ಯವನ್ನು ಯುವ ಪೀಳಿಗೆಗೆ ತಿಳಿಸಬೇಕು ಎಂದರು. ಪ್ರಾಂಶುಪಾಲ ಎಸ್.ಪ್ರಸಾದ್ ಪ್ರಾಸ್ತಾವಿಕವಾಗಿ ಮಾತನಾಡಿ, ಎನ್‌ಎಸ್‌ಎಸ್ ಶಿಬಿರಗಳು ವಿದ್ಯಾರ್ಥಿಗಳನ್ನು ದೈಹಿಕ, ಮಾನಸಿಕವಾಗಿ ಸದೃಢರನ್ನಾಗಿ ಮಾಡುತ್ತವೆ. ಕೆ.ಶೆಟ್ಟಹಳ್ಳಿಯಲ್ಲಿ ಏ.17ರವರೆಗೆ ವಿಶೇಷ ವಾರ್ಷಿಕ ಶಿಬಿರ ನಡೆಯುತ್ತಿದ್ದು, ಸ್ಥಳೀಯ ಮುಖಂಡರು ಹಾಗೂ ಸಂಘ, ಸಂಸ್ಥೆಗಳು ಅಗತ್ಯ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

## ಕಸದ ತೊಟ್ಟಿಯಲ್ಲಿ ನವಜಾತ ಶಿಶು ಪತ್ತೆ

• ಉದಯವಾಹಿನಿ, ನಾಗಮಂಗಲ

ತಾಲ್ಲೂಕಿನ ಬಿ.ಜಿ.ನಗರದ ಆದಿಚುಂಚನಗಿರಿ ವೈದ್ಯಕೀಯ ಆಸ್ಪತ್ರೆ ಬಳಿ ಕಸದ ತೊಟ್ಟಿಯಲ್ಲಿ ಶನಿವಾರ ಮುಂಜಾನೆ ನವಜಾತ ಶಿಶು ಪತ್ತೆಯಾಗಿದೆ. ಅಳುತ್ತಿರುವ ಶಬ್ದ ಕೇಳಿದ ಸ್ಥಳೀಯರು ಕಸದ ತೊಟ್ಟಿಯಲ್ಲಿ ನೋಡಿದಾಗ ನವಜಾತ ಶಿಶು ಪತ್ತೆಯಾಗಿದೆ. ಹೆಣ್ಣು ಎಂಬ ಕಾರಣಕ್ಕೆ ಜನಿಸಿದ ದಿನವೇ ಮಗುವನ್ನು ಪೋಷಕರು ಬಿಟ್ಟು ಹೋಗಿರುವ ಶಂಕೆ ವ್ಯಕ್ತವಾಗಿದೆ. ಶಿಶುವಿಗೆ ಚಿಕಿತ್ಸೆಯ ಅಗತ್ಯವಿದ್ದು, ಬಿ.ಜಿ.ನಗರದ ಆದಿಚುಂಚನಗಿರಿ ವೈದ್ಯಕೀಯ ಆಸ್ಪತ್ರೆಯಲ್ಲಿ ಮೂರು ದಿನಗಳವರೆಗೆ ಚಿಕಿತ್ಸೆ ನೀಡಲಾಗುತ್ತದೆ.

ನಂತರ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಲಾಗುವುದು ಎಂದು ಸಿಡಿಪಿಒ ಕೃಷ್ಣಮೂರ್ತಿ ತಿಳಿಸಿದರು. ಘಟನೆ ಸಂಬಂಧ ಮಹಿಳಾ, ಮಕ್ಕಳ ಕಲ್ಯಾಣಾಧಿಕಾರಿ ಬೆಳ್ಳೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

## ಫೋರ್ಜರಿ ಪ್ರಕರಣ; ಇಬ್ಬರು ಕಾನ್‌ಸ್ಟೇಬಲ್ ಅಮಾನತು

• ಉದಯವಾಹಿನಿ, ಮಂಡ್ಯ

ಮುಖ್ಯಮಂತ್ರಿ ಸೇರಿದಂತೆ ಉನ್ನತ ಅಧಿಕಾರಿಗಳ ಸಹಿಯನ್ನೇ ಫೋರ್ಜರಿ ಮಾಡಿ ಸರ್ಕಾರಿ ಕೆಲಸ ಕೊಡಿಸುವುದಾಗಿ ಅಮಾಯಕ ಯುವ ಜನರನ್ನು ವಂಚಿಸುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಕಾನ್‌ಸ್ಟೇಬಲ್‌ಗಳನ್ನು ಅಮಾನತುಗೊಂಡಿದ್ದಾರೆ. ಮಂಡ್ಯ ಗ್ರಾಮಾಂತರ ಠಾಣೆಯ ಚಿಕ್ಕಯ್ಯ, ಸೆಂಟ್ರಲ್ ಠಾಣೆಯ ಲೋಕೇಶ್ ಅಮಾನತುಗೊಂಡವರು.ಕೆಲಸ ಕೊಡಿಸುವುದಾಗಿ ನಿರುದ್ಯೋಗಿಗಳನ್ನು ನಂಬಿಸಿ, ಅವರಿಂದ ಲಕ್ಷಾಂತರ ರೂಪಾಯಿ ಪಡೆದು ವಂಚಿಸಿ ಈಗಾಗಲೇ ಜೈಲು ಪಾಲಾಗಿರುವ ವೆಂಕಟೇಶನಿಗೆ ಈ ಕಾನ್‌ಸ್ಟೆಬಲ್‌ಗಳು ಸಹಕರಿಸಿದ್ದರು ಎಂಬುದು ಪೊಲೀಸ್ ಪ್ರಾಥಮಿಕ ತನಿಖೆಯಿಂದ ದೃಢಪಟ್ಟಿದೆ. ವಂಚಕ ವೆಂಕಟೇಶನ ಜೊತೆ ಈ ಕಾನ್‌ಸ್ಟೆಬಲ್‌ಗಳು ಸಂಪರ್ಕದಲ್ಲಿ ಇದ್ದದ್ದು ಕಂಡುಬಂದಿದೆ. ಹೀಗಾಗಿ ಕರ್ತವ್ಯ ಲೋಪದ ಆರೋಪದ ಮೇಲೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ. ಕೋಟ್ಯಂತರ ವಂಚನೆ ಪ್ರಕರಣದಲ್ಲಿ ಇನ್ನೂ ಹಲವರು ಭಾಗಿಯಾಗಿದ್ದು, ಅವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

## ಆರ್ಥಿಕ ನೆರವಿಗೆ ಉರಗ ರಕ್ಷಕ ಮನವಿ

• ಉದಯವಾಹಿನಿ, ಕುಶಾಲನಗರ

ಬ್ರೇನ್ ಟ್ಯೂಮರ್ ಸಮಸ್ಯೆ ಎದುರಿಸುತ್ತಿರುವ ನನಗೆ ಸೂಕ್ತ ಚಿಕಿತ್ಸೆಗೆ ಆರ್ಥಿಕ ಸಹಕಾರದ ಅಗತ್ಯವಿದ್ದು, ಸಂಘ, ಸಂಸ್ಥೆಗಳು, ದಾನಿಗಳು ಯಾವುದೇ ರೂಪದಲ್ಲಿ ಆಸರೆಯಾಗಬೇಕು' ಎಂದು ಉರಗ ಹಾಗೂ ವನ್ಯಜೀವಿ ಸಂರಕ್ಷಕ ಕೂಡುಮಂಗಳೂರು ಗ್ರಾಮದ ಅಬ್ದುಲ್ ಗಫಾರ್ ಮನವಿ ಮಾಡಿದ್ದಾರೆ. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಳೆದ 25 ವರ್ಷಗಳಿಂದ ಉರಗಗಳು ಸೇರಿದಂತೆ ವನ್ಯಜೀವಿಗಳ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಕುಶಾಲನಗರ, ಕೊಡಿಗೆ, ಕೂಡುಮಂಗಳೂರು ವ್ಯಾಪ್ತಿ ಮಾತ್ರವಲ್ಲದೆ, ನೆರೆಯ ಮೈಸೂರು, ಹಾಸನ ಜಿಲ್ಲೆಗಳ ಅನೇಕರಿಗೆ ಉರಗ ಸಂರಕ್ಷಕರೆಂದು ಪರಿಚಿತನಾಗಿದ್ದು, ಸಾರ್ವಜನಿಕರ ಮನೆ, ಜಾಗಗಳಲ್ಲಿ ಕಾಣಿಸಿಕೊಂಡಿದ್ದ ಸಾವಿರಾರು ಹಾವುಗಳನ್ನು ಜೀವಂತವಾಗಿ ಕಾಡಿಗೆ ಬಿಡುವ ಕೆಲಸವನ್ನು ಮಾಡಿದ್ದೇನೆ. ಐದು ಬಾರಿ ನಾಗರಹಾವು ಕಚ್ಚಿ ಪ್ರಾಣ ಉಳಿಸಿಕೊಂಡಿದ್ದೇನೆ.

ಒಂದು ವರ್ಷದ ಹಿಂದೆ ಮತ್ತೆ ನಾಗರಹಾವು ಕಚ್ಚಿ ಮಡಿಕೇರಿ ಆಸ್ಪತ್ರೆಯಲ್ಲಿ ದಾಖಲಾದೆ. ಅಲ್ಲಿನ ವೈದ್ಯರ ಸೂಚನೆಯಂತೆ ಮೈಸೂರಿನ ಜಯದೇವ ಆಸ್ಪತ್ರೆಗೆ ದಾಖಲಾಗಿದ್ದೆ.

ಆದರೆ ಆರೋಗ್ಯದಲ್ಲಿ ಸುಧಾರಣೆ ಕಾಣಲಿಲ್ಲ. ಕುಶಾಲನಗರದ ವೈದ್ಯರ ಸಲಹೆಯಂತೆ ಎಂಆರ್‌ಐ ಸ್ಕ್ಯಾನ್ ಮಾಡಿಸಿದಾಗ ಬ್ರೈನ್ ಟ್ಯೂಮರ್ ಇದೆ ಎಂಬ ವರದಿ ಬಂದಿದೆ ಎಂದು ಅಳಲು ತೋಡಿಕೊಂಡರು. ಸಹಾಯ ಮಾಡಲು ಇಚ್ಛಿಸುವವರು ನನ್ನ ಮೊ.ಸಂ. 9900371001 ಸಂಪರ್ಕಿಸಬಹುದು ಎಂದು ಕೋರಿದರು.

ಅಂತರಾಳದಿಂದ.. EDITORIAL

# ರಾಣಾ ಹಸ್ತಾಂತರ: ಪ್ರಕರಣ ತಾರ್ಕಿಕ ಅಂತ್ಯ ತಲುಪಲಿ



ಮುಂಬೈ ಮೇಲೆ ನಡೆದ ಭಯೋತ್ಪಾದನಾ ದಾಳಿಯ ಸಂಚುಕೋರರಲ್ಲಿ ಒಬ್ಬನಾಗಿರುವ ತಹುರ್ ರಾಣಾನನ್ನು ಭಾರತಕ್ಕೆ ಅಮೆರಿಕ ಹಸ್ತಾಂತರಿಸಿರುವುದು ಭಯೋತ್ಪಾದನೆ ವಿರುದ್ಧದ ಭಾರತದ ಕಾರ್ಯಾಚರಣೆಯಲ್ಲಿ ಮಹತ್ವದ ಘಟನೆಯಾಗಿದೆ. ರಾಣಾನನ್ನು ದೆಹಲಿಗೆ ಗುರುವಾರ ಕರೆತರಲಾಗಿದೆ.

ಪಾಕಿಸ್ತಾನದ ಗುಪ್ತಚರ ಸಂಸ್ಥೆ ಇಂಟರ್ ಸರ್ವಿಸಸ್ ಇಂಟಲಿಜೆನ್ಸ್ (ಐಎಸ್ಐ) ಒತ್ತಾಸೆಯಲ್ಲಿ 2008ರಲ್ಲಿ ಮುಂಬೈ ಮೇಲೆ ನಡೆದ ದಾಳಿ, ಇತರ ಭಯೋತ್ಪಾದನಾ ಚಟುವಟಿಕೆಗಳಲ್ಲಿ ಆತನ ಪಾತ್ರ ಏನು ಎಂಬುದರ ಕುರಿತು ಕಾನೂನು ಪ್ರಕ್ರಿಯೆಯನ್ನು ರಾಣಾ ಇಲ್ಲಿ ಎದುರಿಸಬೇಕಾಗುತ್ತದೆ. ಆತನನ್ನು ದೆಹಲಿಯಲ್ಲಿ ಎನ್ಐಎ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಆತನ ವಿಚಾರಣೆಯು ಈ ನ್ಯಾಯಾಲಯದಲ್ಲಿಯೇ ನಡೆಯಲಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪ್ರಧಾನಿ ನರೇಂದ್ರ ಮೋದಿ ಅವರು ಶ್ವೇತಭವನದಲ್ಲಿ ಎರಡು ತಿಂಗಳ ಹಿಂದೆ ನಡೆಸಿದ ಜಂಟಿ ಮಾಧ್ಯಮಗೋಷ್ಠಿಯಲ್ಲಿ ರಾಣಾನನ್ನು ಹಸ್ತಾಂತರಿಸುವ ವಿಚಾರವನ್ನು ಘೋಷಿಸಲಾಗಿತ್ತು. ಕೆಡುಕ ರಾಣಾ ನನ್ನು ಭಾರತದಲ್ಲಿ ವಿಚಾರಣೆ ಎದುರಿಸುವುದಕ್ಕಾಗಿ ಹಸ್ತಾಂತರ ಮಾಡಲಾಗುವುದು ಎಂದು ಟ್ರಂಪ್ ಘೋಷಿಸಿದ್ದರು.

> **2009ರಲ್ಲಿಯೇ ಆರಂಭವಾದ ರಾಜತಾಂತ್ರಿಕ, ಕಾನೂನಾತ್ಮಕ ಮತ್ತು ಗುಪ್ತಚರ ಸಂಸ್ಥೆಗಳ ಸುದೀರ್ಘ ಪ್ರಯತ್ನದ ನಂತರ ಹಸ್ತಾಂತರ ಸಾಧ್ಯವಾಗಿದೆ. ವಿವಿಧ ಕಾರಣಗಳಿಗಾಗಿ ರಾಣಾನ ಹಸ್ತಾಂತರ ವಿಳಂಬವಾಯಿತು.**

ರಾಣಾ ಸಲ್ಲಿಸಿದ್ದ ಎಲ್ಲಾ ಆಕ್ಷೇಪಗಳು, ಮನವಿಗಳನ್ನು ಅಮೆರಿಕದ ಸುಪ್ರೀಂ ಕೋರ್ಟ್ ತಳ್ಳಿಹಾಕಿದ ಬಳಿಕ ಹಸ್ತಾಂತರಿಸಲಾಗಿದೆ. ತಹಶ್ವರ್ ರಾಣಾ ಪಾಕಿಸ್ತಾನ ಮೂಲದ ಕೆನಡಾ–ಅಮೆರಿಕ ಪ್ರಜೆ. ಈತ ಪಾಕಿಸ್ತಾನ ಸೇನೆಯಲ್ಲಿ ವೈದ್ಯನಾಗಿ ಕೆಲಸ ಮಾಡಿದ್ದ, ಷಿಕಾಗೊದಲ್ಲಿ ಟ್ರಾವೆಲ್ ಏಜೆನ್ಸಿ ಹೊಂದಿದ್ದ. ಮುಂಬೈ ದಾಳಿಯ ಸಂಚುಕೋರರಲ್ಲಿ ಒಬ್ಬನಾಗಿರುವ ಡೇವಿಡ್ ಹೆಡ್ಲಿ ಈ ಟ್ರಾವೆಲ್ ಏಜೆನ್ಸಿಯನ್ನು ಬಳಸಿಕೊಂಡು ದಾಳಿಗೆ ಮುನ್ನ ಭಾರತಕ್ಕೆ ಬಂದಿದ್ದ ಎನ್ನಲಾಗಿದೆ. ಹೆಡ್ಲಿ ಮಾಫಿಸಾಕ್ಷಿಯಾಗಿದ್ದಾನೆ. 166 ಜನರ ಸಾವಿಗೆ ಕಾರಣವಾದ 2008ರ ನವೆಂಬರ್ 26–29ರ ಮುಂಬೈ ದಾಳಿಯಲ್ಲಿ ರಾಣಾನ ಪಾತ್ರದ ಕುರಿತು ಮಾಹಿತಿ ನೀಡಿದ್ದಾನೆ. ಭಾರತದ ತನಿಖಾ ಸಂಸ್ಥೆಗಳು ಆತನನ್ನು ತನಿಖೆಗೆ ಒಳಪಡಿಸಬೇಕಿದೆ ಮತ್ತು ದಾಳಿಯಲ್ಲಿ ಆತನ ಪಾತ್ರ, ಪಾಕಿಸ್ತಾನದ ಸರ್ಕಾರ ಹಾಗೂ ಅಲ್ಲಿನ ಭಯೋತ್ಪಾದನಾ ಗುಂಪುಗಳ ಪಾತ್ರ ಏನು ಎಂಬ ವಿವರಗಳನ್ನು ಪಡೆದುಕೊಳ್ಳಬೇಕಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ನಿಷೇಧಿತವಾಗಿರುವ ಲಷ್ಕರ್ ಎ ತಯಬಾ ಉಗ್ರಗಾಮಿ ಸಂಘಟನೆಯೊಂದಿಗೆ ರಾಣಾ ಹೊಂದಿರುವ ನಂಟು ಈಗಾಗಲೇ ಸಾಬೀತಾಗಿದೆ.

ಇದಕ್ಕಾಗಿ ಆತ ಅಮೆರಿಕದಲ್ಲಿ ಶಿಕ್ಷೆಗೂ ಒಳಗಾಗಿದ್ದಾನೆ. ಲಷ್ಕರ್ ಜೊತೆಗೆ ಗುರುತಿಸಿಕೊಂಡಿದ್ದ 10 ಭಯೋತ್ಪಾದಕರು ಮುಂಬೈ ದಾಳಿಯನ್ನು ನಡೆಸಿದ್ದರು. ಅಜ್ಮಲ್ ಕಸಬ್ ಒಬ್ಬನನ್ನು ಬಿಟ್ಟು ಉಳಿದ ಎಲ್ಲರೂ ಕಾರ್ಯಾಚರಣೆಯಲ್ಲಿ ಸಾವಿಗೀಡಾದರು. ಕಸಬ್‌ನನ್ನು ವಿಚಾರಣೆಗೆ ಒಳಪಡಿಸಿ 2012ರಲ್ಲಿ ಗಲ್ಲು ಶಿಕ್ಷೆ ವಿಧಿಸಲಾಗಿದೆ. ಇಡೀ ಸಂಚು ಮತ್ತು ಅದನ್ನು ಹೇಗೆ ಕಾರ್ಯರೂಪಕ್ಕೆ ತರಲಾಯಿತು ಎಂಬ ಮಾಹಿತಿಯನ್ನು ಕಸಬ್ ಬಹಿರಂಗಪಡಿಸಿದ್ದ. ರಾಣಾನ ವಿಚಾರಣೆಯಿಂದ ಈವರೆಗೆ ತಿಳಿಯದೇ ಇರುವ ಅಂಶಗಳು ಕೂಡ ತಿಳಿದುಬರಬಹುದು. ತಹುರ್ ರಾಣಾ ಜೊತೆಗೆ ಯಾವುದೇ ನಂಟು ಇಲ್ಲ ಎಂದು ಪಾಕಿಸ್ತಾನ ಸರ್ಕಾರ ಹೇಳಿದೆ. ಆತ ಕೆನಡಾ–ಅಮೆರಿಕ ಪ್ರಜೆ ಎಂದು ಕೂಡ ಪಾಕಿಸ್ತಾನ ಹೇಳಿದೆ. ಇದೊಂದು ಸಹಜ ಪ್ರತಿಕ್ರಿಯೆ. ಇಂತಹ ನಿರಾಕರಣೆಯನ್ನು ಒಪ್ಪುವುದು ಸಾಧ್ಯವಿಲ್ಲ. ಏಕೆಂದರೆ, ಸಂಚುಗಳು ಮತ್ತು ರಹಸ್ಯ ಕಾರ್ಯಾಚರಣೆಯ ಸಂದರ್ಭದಲ್ಲಿ ಈ ರೀತಿಯ ನಿರಾಕರಣೆ ಇದ್ದಿದ್ದೇ. ಮುಂಬೈ ದಾಳಿ, ಭಾರತದಲ್ಲಿ ನಡೆದ ಇತರ ಭಯೋತ್ಪಾದನಾ ಚಟುವಟಿಕೆಗಳಲ್ಲಿ ಪಾಕಿಸ್ತಾನದ ಪಾತ್ರ ಇದೆ ಎಂಬುದು ಹಲವು ರೀತಿಯಲ್ಲಿ ಸಾಬೀತಾಗಿದೆ. ಅದನ್ನು ದೃಢಪಡಿಸಲು ತಹಶ್ವರ್ ರಾಣಾ ಮಾಹಿತಿ ನೀಡುವ ಅಗತ್ಯವೇನೂ ಇಲ್ಲ. ಆತನನ್ನು ನ್ಯಾಯಾಂಗದ ಮುಂದೆ ನಿಲ್ಲಿಸಿ, ಸಂತ್ರಸ್ತರಿಗೆ ನ್ಯಾಯ ದೊರಕಿಸುವುದು ಮತ್ತು ಪ್ರಕರಣವನ್ನು ಮುಕ್ತಾಯಗೊಳಿಸುವುದು ಇಲ್ಲಿ ಮುಖ್ಯವಾಗಿದೆ. ಭಯೋತ್ಪಾದನೆಯಂತಹ ಗಂಭೀರ ಪ್ರಕರಣಗಳಲ್ಲಿ ಕೂಡ ಬೇರೊಂದು ದೇಶದಿಂದ ಆರೋಪಿಯನ್ನು ವಶಕ್ಕೆ ಪಡೆಯಲು ಎಷ್ಟೊಂದು ಪ್ರಯಾಸಪಡಬೇಕು ಎಂಬುದನ್ನೂ ರಾಣಾ ಪ್ರಕರಣವು ತೋರಿಸಿಕೊಟ್ಟಿದೆ.

---

# ರಾಮಾಯಣ



## ಸಿದ್ಧಾರ್ಥನು ಕೈಕೇಯಾದೇವಿಗೆ ಹೇಳಿದ ನೀತಿ

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ಆ ಪ್ರಜೆಗಳ ಮಾತನ್ನು ಕೇಳಿ ಸಗರಚಕ್ರವರ್ತಿಯು ಅತ್ಯಂತ ಕೋಪಯುಕ್ತನಾಗಿ ಮೂಗಿನಲ್ಲಿ ಬೆರಳಿಟ್ಟುಕೊಂಡು ತಲೆದೂಗಿ ತನ್ನ ಪ್ರಧಾನಿಯನ್ನು ಕರೆದು ಅಸಮಂಜನನ್ನು ಆತನ ಸ್ತ್ರೀಸಮೇತ ವಾಗಿ ರಥವನ್ನೇರಿಸಿ ವನದಲ್ಲಿರುವಂತೆ ಕಳುಹಿಸಿ ಬಿಡಬೇಕೆಂದು ಆಜ್ಞಾಪಿಸಿದನು. ಧಾರ್ಮಿಕನಾದ ಸಗರಚಕ್ರವರ್ತಿಯು ಪುತ್ರರಕ್ಷಣೆಗಿಂತಲೂ ಪ್ರಜಾರಕ್ಷಣವು ವಿಶೇಷವೆಂದು ಧರ್ಮರಹಸ್ಯವನ್ನು ಬಲ್ಲವನಾದಕಾರಣ ತನ್ನ ಮಗನನ್ನು ವನಕ್ಕೆ ಕಳುಹಿಸಿದನು. ನಗರ ಚಕ್ರವರ್ತಿಯ ಜ್ಯೇಷ್ಠಕುಮಾರ ನೋಪಾದಿಯಲ್ಲಿ ಶ್ರೀರಾಮನು ಹಾಕಿ ಪಾಪಕೃತ್ಯವನ್ನು ಮಾಡಿದವನೆಂದು ನೀನ ಹೊರಡಿಸುತ್ತಿದ್ದೀಯೆ ? ಆತನಲ್ಲಿ ಯಾವ ಅವಗುಣಗಳನ್ನು ಕಂಡೆ ಚಂದ್ರನಲ್ಲಾದರೂ ಕಳಂಕ ಉಂಟು. ಯಾವ ಅವಗುಣವನ್ನೂ ಕಾಣೆವು! ಶ್ರೀರಾಮನಲ್ಲಿ ನೀನೇನಾದರೂ ದೋಷವನ್ನು ಕಂಡಿದ್ದರೆ ಹೇಳ ಲೋಕದಲ್ಲಿ ಸನ್ಮಾರ್ಗದಲ್ಲಿರುವ ಅಪರಾಧ ವಿಲದವರನ್ನು ಹೊರಡಿಸುವವರು ನರಕವನ್ನೆ, ದವರು. ಧರ್ಮಕ್ಕೆ ವಿರುದ್ಧವಾದ ಕೃತ್ಯವನ್ನು ಮಾಡಿದರೆ ದೇವೇಂದ್ರನಿಗಾದರೂ ಐಶ್ವರ್ಯವು ಕುಂದುವುದು! ಅದು ಹಾಗಿರಲಿ. ಶ್ರೀರಾಮನನ್ನು ದೇಶಭ್ರಷ್ಟನನ್ನಾಗಿ ಮಾಡಿ ಹೊರಡಿಸಿದೆಯಾದರೆ ಲೋಕದಲ್ಲಿ ನಿನಗೆ ಮಹಾ ಅಪಪಕೀರ್ತಿಯು ಸಂಭವಿಸುವುದು'' ಎಂದು ದಶರಥರಾಯನ ಸಂಮುಖದಲ್ಲಿ ಹೇಳಿದನು. ಆ ಮಾತನ್ನು ಕೇಳಿ ದಶರಥರಾಯನು ಅತ್ಯಂತ ದುಃಖಾಕ್ರಾಂತನಾಗಿ ಸ್ವರಗುಂದಿ ಕೈಕೇಯಾದೇವಿಯನ್ನು ಕುರಿತು ಎಲೈ ಕೆಟ್ಟ ) ನೆಡತೆಯವಳೆ, ನೀನು ನಿನ್ನ ಮತ್ತು ನನ್ನ ಹಿತವನ್ನು ಅರಿಯೆ. ಶ್ರೀರಾಮನು ನಿನಗೆ ಹಿತವನ್ನು ಮಾಡಬೇಕೆಂದು ದಿಕ್ಕಿಲ್ಲದವನಂತೆ ವನಕ್ಕೆ ಹೋಗುತ್ತಾನೆ. ಹೀಗಿದ್ದರೂ ಆತನಲ್ಲಿ ಕುಟಿಲಬುದ್ಧಿಯನ್ನು ನನೆಯುತ್ತಿದ್ದಿ. ಯೆ. ಶ್ರೀರಾಮನು ವನಕ್ಕೆ ತೆರಳಿದ ಮೇಲೆ ನನಗೆ ಇಲ್ಲೇನಿದೆ? ನಾನು ರಾಜ್ಯವನ್ನೂ ಸಕಲಸುಖಗಳನ್ನೂ ಬಿಟ್ಟು ಆತನ ಸಂಗಡ ವನವನ್ನೆ । ದುವೆನು. ನೀನು ನಿನ್ನ ಮಗನಾದ ಭರತನೊಡನೆ ರಾಜ್ಯಸುಖವನ್ನು ಅನುಭವಿಸಿಕೊಂಡಿರು ಎಂದು ನುಡಿದನು.

### ವಸಿಷ್ಠನು ನೀತಾದೇವಿಗೆ ವಸ್ತ್ರಾಭರಣಗಳನ್ನು ಕೊಡಿಸಿದ್ದು

ಆ ಬಳಿಕ ಸಮಸ್ತ ನೀತಿಶಾಸ್ತ್ರಗಳನ್ನೂ ಬಲ್ಲ ಶ್ರೀರಾಮನು ದಶರಥರಾಯನನ್ನು ಕುರಿತು ವಿ ಮಹಾರಾಜ, ಸಮಸ್ತ ವಿಷಯಭೋಗಗಳನ್ನೂ ಬಿಟ್ಟು ವನದಲ್ಲಿ ಕಂದಮೂಲಫಲಾಹಾರಗಳನ್ನು ಮಾಡಿಕೊಂಡಿರುವವರಿಗೆ ಚತುರಂಗಬಲವು ಏಕೆ ಧನಧಾನ್ಯಾದಿವಸ್ತುಗಳೇಕೆ ಆಆನೆಯನ್ನೇ ಕೊಟ್ಟವರಿಗೆ ಆನೆಯ ಸರಪಳಿಯಲ್ಲಿ ಸ್ನೇಹವೇಕೆ ರಾಜ್ಯವನ್ನೇ ಬಿಟ್ಟು ಹೋಗುವ ನನಗೆ ಸೇನೆ ಮೊಡಲಾದ ಸಾಮಗ್ರಿಗಳಿಂದೇನು ಪ್ರ ಯೋಜನ ನಾನು ಸಮಸ್ತ ವೃತ್ತಾಂತವನ್ನೂ ಬಲ್ಲವನಲ್ಲದೆ ಮೂಢನಲ್ಲ. ಆದ್ದರಿಂದ ನಾರುಬಟ್ಟೆಗಳನ್ನು ಧರಿಸಿಕೊಂಡು ವನದಲ್ಲ ಹದಿನಾಲ್ಕುವರುಷಗಳಿರುವ ನನಗೆ ಗೆಡ್ಡೆ ಗೆಣಸುಗಳನ್ನು ತರುವುದಕ್ಕೆ ಸಾಧನಗಳಾದ ಹಾರೆಮಕ್ಕರಿಗಳನ್ನು ತರಿಸಿಕೊಡು ಎಂದು ಹೇಳಿದನು.

ಆ ಮಾತನ್ನು ಕೇಳಿ ಕೈಕೇಯಾದೇವಿಯು ಶೀಘ್ರದಲ್ಲಿ ನಾರುಬಟ್ಟೆಗಳನ್ನು ತರಿಸಿ ಅವುಗಳನ್ನು ಧರಿಸಿಕೊಳ್ಳೆಂದು ಶ್ರೀ ಗಖ ಕುರಿತು ದಶರಥನ ಸಂಮುಖದಲ್ಲಿಯೇ ಲಜ್ಜೆಯಿಲ್ಲದೆಯೂ ಶಂಕಾತಂಕವಿಲ್ಲದೆಯೂ ನುಡಿದಳು. ಶ್ರೀರಾಮನು ಮಹಾಪ್ರಸಾದವೆಂದು ಆ ನಾರುಬಟ್ಟೆಗಳನ್ನು ಕೈಗೊಂಡು ತಾನು ಉಟ್ಟು ಹೊದ್ದಿದ್ದ ದುಕೂಲವಸ್ತ್ರಗಳನ್ನು ದಶರಥರಾಯನ ಸಮೀಪದಲ್ಲಿ ತೆಗೆದಿರಿಸಿ ಆ ನಾರುಬಟ್ಟೆಗಳನ್ನು ಧರಿಸಿದನು. ಆಮೇಲೆ ಲಕ್ಷ್ಮಣನೂ ತನ್ನ ಮಕೂಲವಸ್ಥಗಳನ್ನು ತೆಗೆದಿ ನಾರು ಬಟ್ಟೆಗಳನ್ನುಟ್ಟು ಹೊದ್ದುಕೊಂಡನು.


ಮುಂದುವರಿಯುವುದು...

---

## ಡಾ.ಬಿ.ಆರ್.ಅಂಬೇಡ್ಕರ್ ಸಮಾಜಸೇವಾ ರತ್ನ ಪ್ರಶಸ್ತಿ, ಡಾ.ಬಿ.ಆರ್. ಅಂಬೇಡ್ಕರ್ ರತ್ನ ಪ್ರಶಸ್ತಿ, ಡಾ.ಬಿ.ಆರ್.ಅಂಬೇಡ್ಕರ್ ಭೂಷಣ ಪ್ರಶಸ್ತಿ ಪ್ರಧಾನ

# ಡಾ. ಬಿ.ಆರ್.ಅಂಬೇಡ್ಕರ್‌ರವರ 134ನೇ ಜನ್ಮದಿನಾಚರಣೆ

• ಉದಯವಾಹಿನಿ, ಬೆಂಗಳೂರು




ಬಿಬಿಎಂಪಿ ಅಧಿಕಾರಿ, ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿ ಯಿಂದ ಏ. 15 ಮಂಗಳವಾರ ದಂದು ಭಾರತರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ರವರ 134ನೇ ಜನ್ಮ ದಿನಾಚರಣೆ, ಸಾಧಕ ಸಾಧಕಿಯರಿಗೆ, ಬಿಬಿಎಂಪಿ ಅಧಿಕಾರಿ, ನೌಕರರಿಗೆ ಡಾ.ಬಿ.ಆರ್. ಅಂಬೇಡ್ಕರ್ ಹೆಸರಿನಲ್ಲಿ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಟೌನ್ ಹಾಲ್‌ನಲ್ಲಿ ದಿನಾಂಕ 15-4-2025ರ ಸಂಜೆ 4 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಇದರ ಕುರಿತು ಮಾಧ್ಯಮಗಳಿಗೆ ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು ಮಾಹಿತಿ ನೀಡಿದರು.

ಏ. 15ರಂದು ಮುಖ್ಯ ಅತಿಥಿಗಳಾಗಿ ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ಕೃಷ್ಣ ಎಸ್.ದಿಕ್ಷೀತ್ ರವರು, ನ್ಯಾಯಮೂರ್ತಿಗಳಾದ ಶ್ರೀ ಆರ್. ದೇವದಾಸ್‌ರವರು, ಶಿಕ್ಷಣ ತಜ್ಞ ಡಾ. ವೂಡೆ ಪಿ.ಕೃಷ್ಣ, ವಿಶ್ರಾಂತ ಕುಲಪತಿಗಳಾದ ಮಲ್ಲೇಪುರಂ ಜಿ.ವೆಂಕಟೇಶ್, ಬಿಬಿಎಂಪಿ ಆಡಳಿತಗಾರರಾದ ಎಸ್. ಆರ್.ಉಮಾಶಂಕರ್‌ರವರು, ಮುಖ್ಯ ಆಯುಕ್ತರಾದ ತುಷಾರ್ ಗಿರಿನಾಥ್‌ರವರು, ನಿಕಟಪೂರ್ವ ಅಪರ ಮುಖ್ಯ ಕಾರ್ಯದರ್ಶಿಗಳಾದ ಡಾ.ಎನ್.ಮಂಜುನಾಥ್ ಪ್ರಸಾದ್, ಸುಮಂಗಲಿ ಸೇವಾ ಶ್ರಮ ಡಾ.ಎಸ್.ಟಿ.ಸುಶೀಲಮ್ಮ, ವಲಯ ಆಯುಕ್ತರಾದ ಶ್ರೀಮತಿ ಸ್ನೇಹಲ್, ಜಂಟಿ ಆಯುಕ್ತರಾದ ಶ್ರೀಮತಿ ಲಕ್ಷ್ಮಿದೇವಿ, ವಕೀಲರಾದ ಎ.ರಾಜೇಶ್ ರವರು ದೀಪ ಬೆಳಗಿಸಿ ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ. ಸಮಾಜ ಸೇವೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮಾಜಸೇವಾ ರತ್ನ ಪ್ರಶಸ್ತಿ, ಸಾಧಕ, ಸಾಧಕಿಯರಿಗೆ ಡಾ.ಬಿ.ಆರ್. ಅಂಬೇಡ್ಕರ್ ರತ್ನ ಪ್ರಶಸ್ತಿ, ಬಿಬಿಎಂಪಿ ಅಧಿಕಾರಿ, ನೌಕರರಿಗೆ ಡಾ.ಬಿ.ಆರ್.ಅಂಬೇಡ್ಕರ್ ಭೂಷಣ ಪ್ರಶಸ್ತಿ ಪ್ರಧಾನ ಜರುಗಲಿದೆ.

### ಸಂಗೀತ ಸಂಜೆ ಏರ್ಪಾಡು



**ಸಂಜೆ 4ಗಂಟೆ ಖ್ಯಾತ ಜನಪದ ಗಾಯಕ ಗುರುರಾಜ್ ಹೊಸಕೋಟೆ, ತಂಡದವರಿಂದ ಸಂಗೀತ ಸಂಜೆ ಏರ್ಪಡಿಸಲಾಗಿದೆ. ಬಿಬಿಎಂಪಿ ಅಧಿಕಾರಿ ಮತ್ತು ನೌಕರರು, ಸಾರ್ವಜನಿಕರು ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ರವರ ಜನ್ಮದಿನಾಚರಣೆಯಲ್ಲಿ ಭಾಗವಹಿಸಬೇಕು ಅಧ್ಯಕ್ಷರಾದ ಎ.ಅಮೃತ್ ರಾಜ್‌ರವರು ಮನವಿ ಮಾಡಿದರು.**

---

## ಪಂಜಾಬಿನ ಜಲಿಯನ್ ವಾಲ್ ಬಾಗ್‌ನ ಪೈಶಾಚಿಕ ಕೃತ್ಯದ 106ನೇ ವರ್ಷದ ನೆನಪಿನ ದಿನ



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಬ್ರಿಟೀಷರು ತಮ್ಮ ಕುತಂತ್ರ ಆಳ್ವಿಕೆಯ ಕಾಲದಲ್ಲಿ ಸಾಮ್ರಾಜ್ಯವನ್ನು ಕಟ್ಟಿಕೊಂಡು ಭಾರತೀಯರನ್ನು ಗುಲಾಮ ರನ್ನಾಗಿ ನೋಡುತ್ತಿದ್ದರು.

ನಮ್ಮ ಮುಗ್ಧತೆಯನ್ನು ಬ್ರಿಟೀಷರು ದುರುಪಯೋಗಪಡಿಸಿಕೊಂಡು ಇಲ್ಲಿದ್ದ ಸಂಪತ್ತನ್ನು ಲೂಟಿ ಹೊಡೆದರು. 1919 ಏಪ್ರಿಲ್ 13 ರಂದು ಜಲಿಯನ್ ವಾಲ್ ಬಾಗ್ ನಲ್ಲಿ ನಡೆದ ಭಾರತೀಯರ ಕಗ್ಗೊಲೆ ಬ್ರಿಟೀಶರಿಂದ ಯಾವುದೇ ಕಾರಣವಿಲ್ಲದೇ ಪೈಶಾಚಿಕ ಕೃತ್ಯ ನಡೆಯಿತು. ಆಗಿನ ಅಧಿಕಾರಿ ಜನರಲ್ ಡಯರ್ ಕೊಟ್ಟ ಆದೇಶ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಖಂಡಿಸಿದರು. ಮಿಗಿಲಾಗಿ ಈಗಿನ ಇಂಗ್ಲೆಂಡ್ ಸರ್ಕಾರವೂ ಸಹ ಖಂಡಿಸಿದೆ.

ಈ ಜಲಿಯನ್ ವಾಲ್ ಬಾಗ್ ನ ಪೈಶಾಚಿಕ ಕೃತ್ಯ ಸ್ವಾತಂತ್ರ್ಯ ಚಳುವಳಿಯ ಕರಾಳ ಅಧ್ಯಾಯದ ದಿನವಾಗಿ ಏರ್ಪಾಡಾಯಿತು. ಆದರೇನು ಬಂತು ನೂರಾರು ಮಂದಿ ನತದೃಷ್ಟ ಮುಗ್ಧ, ಅಮಾಯಕ ಭಾರತೀಯರು ಅದರಲ್ಲೂ ಪಂಜಾಬಿನ ಹೆಣ್ಣುಮಕ್ಕಳು ತಮ್ಮ ಪ್ರಾಣವನ್ನೇ ಕಳೆದುಕೊಂಡು ಹುತಾತ್ಮರಾದರು. ಆದ್ದರಿಂದ ಪ್ರತಿವರ್ಷ ಏಪ್ರಿಲ್ 13 ರಂದು ಆ ದಿನವನ್ನು ಹುತಾತ್ಮರದಿನ ಜೊತೆಗೆ ಇಂದು 106 ನೇ ವರ್ಷದ ಸ್ಮರಣೀಯ ದಿನವೆಂದು ಸ್ಮರಿಸಿಕೊಳ್ಳುತ್ತಾ ಮುಗ್ಧ ಅಮಾಯಕರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರೆಯಲೆಂದು ಆ ಭಗವಂತನಲ್ಲಿ ಭಾರತೀಯರಾದ ನಾವೆಲ್ಲರೂ ಪ್ರಾರ್ಥಿಸೋಣ.



---

# ಆಂಜನೇಯರ ಪುಣ್ಯಕ್ಷೇತ್ರಗಳು..!



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ತೀರ್ಥಕ್ಷೇತ್ರಗಳ ಯಾತ್ರೆ, ಮಾಡಿ ಪುಣ್ಯ ಸಂಪಾದನೆ ಮಾಡಬೇಕೆಂಬ ಅಭಿಲಾಷೆ ಜನಮಾನಸದಲ್ಲಿ ಹಾಸು ಹೊಕ್ಕಾಗಿದೆ. ಹಾಗೆ, ಅಧಿಕ ಮಾಸ, ಶ್ರಾವಣ ಮಾಸ ಹಾಗೂ ಕೆಲವು ವಿಶೇಷ ದಿನಗಳಲ್ಲಿ, ಸೂರ್ಯೋದಯ ದಿಂದ ಸೂರ್ಯಾಸ್ತದೊಳಗೆ ಒಂದೇ ದೇವರ ಮೂರು ಕ್ಷೇತ್ರಗಳ ದರ್ಶನ ಮಾಡಿದರೆ ಕಾಶಿಯಾತ್ರೆಗೆ ಹೋದ ಪುಣ್ಯ ಲಭಿಸುತ್ತದೆ ಎಂಬ ನಂಬಿಕೆ ಇತ್ತೀಚಿಗೆ ಹೆಚ್ಚು ಪ್ರಚಲಿತದಲ್ಲಿದೆ. ಅವುಗಳಲ್ಲಿ ವಿಷ್ಣುವಿನ ಅವತಾರ ಶ್ರೀರಂಗನಾಥನ ತ್ರಿರಂಗ ಕ್ಷೇತ್ರಗಳು ಅಂದರೆ ಶ್ರೀರಂಗಪಟ್ಟಣದ ಆದಿರಂಗನಾಥ, ಶಿವನಸಮುದ್ರದ ಮಧ್ಯರಂಗ ನಾಥ, ಮತ್ತು ತಮಿಳುನಾಡಿನ ಶ್ರೀರಂಗಂ ನ ಅಂತ್ಯರಂಗನಾಥ ಇವುಗಳು. ಹಾಗೆಯೇ, ಸುಬ್ರಹ್ಮಣ್ಯ ಕ್ಷೇತ್ರಗಳಲ್ಲಿ ಘಾಟಿ, ಕುಕ್ಕೆ ,ಹಾಗೂ ನಾಗಲಮಡಿಕೆ ಸುಬ್ರಮಣ್ಯನ ಒಂದೇ ದಿನ ದರ್ಶನ ಮಾಡಿದರೆ ಅದರಲ್ಲೂ ಅಧಿಕಮಾಸ ದಲ್ಲಿ ದುಪ್ಪಟ್ಟು ಪುಣ್ಯ ಲಭಿಸುತ್ತದೆ ಎಂಬ ನಂಬಿಕೆ. ಹಾಗೆ ಶ್ರೀರಾಮನ ಬಂಟ ಹನುಮನ ದೇಹದ ಮುಖ್ಯ ಭಾಗವಾದ, ನೆತ್ತಿಯಲ್ಲಿ, ಕಣ್ಣಿನ ಭಾಗದಲ್ಲಿ ಮತ್ತು ಮೂಗಿನಲ್ಲಿ ಸಾಲಿಗ್ರಾಮ ಜೋಡಿಸಿರುವ ಕಾಂತೇಶ, ಬ್ರಾಂತೇಶ, ಹಾಗೂ ಶಾಂತೇಶ ಎಂಬ ಹೆಸರಿನಿಂದ ಕರೆಯಲ್ಪಡುವ ಆಂಜನೇಯರ ದರ್ಶನ ಮಾಡಿದರೆ ಕಾಶಿಗೆ ಹೋದಷ್ಟೇ ಪುಣ್ಯ ಲಭಿಸುತ್ತದೆ ಎಂಬುದು ಭಕ್ತರ ನಂಬಿಕೆಗೆ ಪೂರಕವಾಗಿದೆ.

**ಕಾಂತೇಶ:** ಈ ಆಂಜನೇಯ ಹಾವೇರಿ ತಾಲೂಕಿನ ಬ್ಯಾಡಗಿ ತಾಲ್ಲೂಕಿನ ಕದರಮಂಡಲಗಿ ಎಂಬ ಗ್ರಾಮದಲ್ಲಿ ಕಾಂತೇಶ ಎಂದು ಕರೆಯಲ್ಪಡುವ ಆಂಜನೇಯನ ದೇವಸ್ಥಾನವಿದೆ. ಈ ಆಂಜನೇಯಗೆ ಎಲ್ಲಾ ಕಡೆಯಂತೆ ಒಂದು ಬದಿಯಲ್ಲಿ ಮುಖ ಇರದೆ ನೇರವಾದ ಮುಖವಿದ್ದು, ಸೂರ್ಯ ಸಾಲಿಗ್ರಾಮವನ್ನು ಎರಡೂ ಕಣ್ಣಿನಲ್ಲಿ ಹೊಂದಿದ್ದಾನೆ. ಈ ಸಾಲಿಗ್ರಾಮದ ವಿಶೇಷ ಪ್ರಭೆ ಕಾಂತಿಯುತವಾದುದರಿಂದ ಈ ಆಂಜನೇಯನನ್ನು 'ಕಾಂತೇಶ' ಎಂದು ಕರೆಯುತ್ತಾರೆ. ಭೀಮನ ಅವತಾರ ಎನ್ನಲಾಗಿದೆ. ಈ ಆಂಜನೇಯನನ್ನು ದ್ವಾಪರಯುಗದಲ್ಲಿ ಜನಮೇಜಯರಾಯನಿಂದ ಪ್ರತಿಷ್ಠಾಪಿಸಲಾಗಿದೆ. ಈ ದೇಗುಲದಲ್ಲಿ ಕನಕದಾಸರು ತಮ್ಮ ಅಮೂಲ್ಯ ಕೃತಿಯಾದ ಮೋಹನ ತರಂಗಿಣಿಯನ್ನು ರಚನೆ ಮಾಡಿದರು.


**ಶಾಂತೇಶ:** ಈ ಹೆಸರಿನ ಆಂಜನೇಯ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಸಾತೇನಹಳ್ಳಿಯಲ್ಲಿ ಇದೆ. ಶ್ರೀರಾಮಚಂದ್ರನಿಂದ ವರ ಪಡೆದು ಇಂದಿಗೂ ಭೂಮಿ ಮೇಲೆ ಭಕ್ತರನ್ನು ಕಾಪಾಡುತ್ತಿರುವ ಆಂಜನೇಯನ ನೆತ್ತಿಯ ಮೇಲೆ ಸಾಲಿಗ್ರಾಮವಿದೆ. ಇಲ್ಲಿನ ಆಂಜನೇಯನನ್ನು ವ್ಯಾಸರಾಯರ ಗುರುಗಳು ಬ್ರಾಹ್ಮಣ್ಯತೀರ್ಥರಿಂದ ಪ್ರತಿಷ್ಠಾಪಿಸಲಾಗಿದೆ ಎಂಬ ಅಭಿಪ್ರಾಯ ವಿದೆ. ಸ್ಥಳ ಪುರಾಣದ ಪ್ರಕಾರ ಬ್ರಾಹ್ಮಣ್ಯತೀರ್ಥರು ಸಾತೇನಹಳ್ಳಿಗೆ ಬಂದಾಗ ಭೂಮಿಯಲ್ಲಿ ಹುದುಗಿದ ವಿಗ್ರಹದ ಸೂಕ್ಷ್ಮತೆ ಗೋಚರವಾಗಿ ಭೂಮಿಯಿಂದ ತೆಗೆದು ಪ್ರತಿಷ್ಠಾಪನೆ ಮಾಡಿದರೆಂದು ಹೇಳುತ್ತಾರೆ. ಮದ್ವಾವತಾರದ ರೂಪ ಎನ್ನಲಾದ ಆಂಜನೇಯನ ನೆತ್ತಿಯ ಮೇಲೆ ಸಾಲಿಗ್ರಾಮ ಇರುವುದರಿಂದ ಇವನು ಶಾಂತ ಸ್ವರೂ ಪದವನು ಎನ್ನಲಾಗಿದೆ. ಈ ಕ್ಷೇತ್ರಕ್ಕೆ ಬಂದ ಭಕ್ತರ ಬೇಡಿಕೆಗಳು ಈಡೇರುತ್ತದೆ. ಶಕ್ತಿಶಾಲಿ ಆಂಜನೇಯ ಎಂಬುದು ಸ್ಥಳೀಯರ ನಂಬಿಕೆಯಾಗಿದೆ. ಮಕ್ಕಳಿಲ್ಲದ ದಂಪ ತಿಗಳು ಕ್ಷೇತ್ರಕ್ಕೆ ಬಂದು ಶ್ರದ್ಧಾ ಭಕ್ತಿಯಿಂದ ಆಂಜನೇಯನನ್ನು ಬೇಡಿಕೊಂಡು ಅವನ ಕೃಪೆಗೆ ಪಾತ್ರರಾಗಿ ಮಕ್ಕಳನ್ನು ಪಡೆದಿದ್ದಾರೆ. ಆಶ್ವೀಜ ಮಾಸದ ಶ್ರವಣ( ವಿಜಯದಶಮಿ) ನಕ್ಷತ್ರದ ದಿನ ಗಿಡಮೂಲಿಕೆಗಳಿಂದ ವೈದ್ಯ ಪದ್ಧತಿಯಲ್ಲಿ ತಯಾರಿಸಿದ ಔಷಧಿಯನ್ನು ಬಾಳೆಹಣ್ಣಿನ ಜೊತೆ ಪ್ರಸಾದದ ರೂಪದಲ್ಲಿ ಕೊಡುತ್ತಾರೆ. ಇದನ್ನು ಸೇವನೆ ಮಾಡಿದ ಅದೆಷ್ಟೋ ಮಹಿಳೆಯರು ಮಕ್ಕಳನ್ನು ಪಡೆದು ತೃಪ್ತಿಯ ನಗೆ ಬೀರಿದ್ದಾರೆ. ಇನ್ನೂ ಅನೇಕರು ಪಂಚಮ ಶನಿ, ಸಾಡೇ ಸಾತಿಯಂಥ ಶನಿ ಕಾಟ, ಗ್ರಹ ದೋಷ ಗಳಿಗೆ ಪರಿಹಾರ ಪಡೆದಿದ್ದಾರೆ. ಇಲ್ಲಿಗೆ ಹರಕೆ ಹೊತ್ತು ಕೊಂಡವರು ತೆಂಗಿನಕಾಯಿಯನ್ನು ಅರ್ಪಿಸುತ್ತಾರೆ. ಈ ದೇವಸ್ಥಾನದಲ್ಲಿ ಬೆಳಿಗ್ಗೆ ಆರು ಗಂಟೆಯಿಂದ ರಾತ್ರಿ 8 ಗಂಟೆಯವರೆಗೂ ದರ್ಶನ ಮಾಡುವ ಸೌಲಭ್ಯ ವಿದೆ.

**ಬ್ರಾಂತೇಶ:** ಈ ಆಂಜನೇಯ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಇದೆ. ಸ್ಥಳ ಪುರಾಣದ ಪ್ರಕಾರ, ಹಿಂದೆ ಇದ್ದ ದೇವಸ್ಥಾನವನ್ನು ಕಿಡಿಗೇಡಿಗಳು ಕೆಡವಿ ಆಂಜನೇಯನನ್ನು ಅಲ್ಲಿರುವ ಕೆರೆಯಲ್ಲಿ ಹಾಕಿದ್ದರಂತೆ, ಆ ಊರಿನ ಪಾಳೇಗಾರನ ಕನಸಿನಲ್ಲಿ ಆಂಜನೇಯ ಸ್ವಾಮಿ ಬಂದು ಕೆರೆಯಿಂದ ನನ್ನನ್ನು ಹೊರತೆಗೆದು ಗುರು ವ್ಯಾಸರಾಯರ ಮೂಲಕ ಪ್ರತಿಷ್ಠಾಪಿಸು ಎಂದು ಹೇಳಿದಂತಾಯಿತು. ಅದೇ ಪ್ರಕಾರ ಕೆರೆಯಿಂದ ಆಂಜನೇಯನನ್ನು ತರುವಾಗ ಮೂಗಿನ ಬಳಿ ಸ್ವಲ್ಪ ಭಿನ್ನವಾಯಿತು.

ಭಿನ್ನ ವಿಗ್ರಹವನ್ನು ಪ್ರತಿಷ್ಠಾಪಿಸುವುದಿಲ್ಲ ಎಂದು ಹೇಳಿದ ಗುರುಗಳ ಸ್ವಪ್ನದಲ್ಲಿ ಆಂಜನೇಯನೇ ಬಂದು ಕೃಷ್ಣಾ ನದಿಯಲ್ಲಿ ಮುಳುಗು ಹಾಕಿದರೆ ಒಂದು ಸಾಲಿಗ್ರಾಮ ಸಿಗುತ್ತದೆ ಅದನ್ನು ಮೂಗಿನ ಭಾಗಕ್ಕೆ ಸೇರಿಸಿ ಪ್ರತಿಷ್ಠಾಪಿಸು ಎಂದನಂತೆ. ಸ್ವಪ್ನದಲ್ಲಿ ತಿಳಿಸಿದಂತೆ ಕೃಷ್ಣಾ ನದಿಯಿಂದ ತಂದ ಸಾಲಿಗ್ರಾಮವನ್ನು ಹನುಮಂತನ ಮೂಗಿಗೆ ಜೋಡಿಸಿ ಪ್ರತಿಷ್ಠಾಪಿಸಿದರು ಎಂಬುದು ದಂತಕಥೆ. ಈ ದೇವಸ್ಥಾನದಲ್ಲಿ ಪ್ರಮುಖ ದೇವರು ಹುಚ್ಚರಾಯಸ್ವಾಮಿ ಯಾಗಿದ್ದು, ಈ ಹೆಸರು ಬರಲು ಕಾರಣವೂ ಇದೆ. ಗಣಪತಿ, ಸೀತಾರಾಮಾಂಜನೇಯ ವಿಗ್ರಹವು ಪ್ರತಿಷ್ಠಾಪಿಸಲ್ಪಟ್ಟಿದೆ. ದೇವಸ್ಥಾನದ ಹತ್ತಿರವಿರುವ ದೊಡ್ಡ ಕೆರೆಯಲ್ಲಿ ಕಲ್ಲಿನ ದೋಣಿಯಲ್ಲಿ ಆಂಜನೇಯ ವಿರಾಜಮಾನನಾಗಿದ್ದ. ಆ ದೋಣಿಯನ್ನು ದೇವಸ್ಥಾನದ ಹೊರಪ್ರಕಾರದಲ್ಲಿ ಇಟ್ಟಿದ್ದರು. ಆಂಜನೇಯನನ್ನು ಪ್ರತಿಷ್ಠಾಪನೆ ಮಾಡಿದ ಜಾಗ ವೀರಶೈವ ಜಂಗಮನಾದ ಹುಚ್ಚಪ್ಪ ಎಂಬುವನದು ಅವನಲ್ಲಿ ಜಾಗ ಕೇಳಿದಾಗ ನನ್ನ ಹೆಸರು ಇಟ್ಟರೆ ಕೊಡುತ್ತೇನೆ ಎಂಬ ಅಭಿಮತದಂತೆ ಆಂಜನೇಯನಿಗೆ 'ಹುಚ್ಚರಾಯಸ್ವಾಮಿ' ಎಂದು ಹೆಸರಿಟ್ಟರು. ಮುಖ್ಯ ದೇವರಾದ ಹುಚ್ಚರಾಯಸ್ವಾಮಿ, ಹಾಗೂ ಗಣಪತಿ, ಸೀತಾರಾಮಾಂಜನೇಯ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದು ನಿತ್ಯ ಪೂಜೆ ಅರ್ಚನೆ, ವಿಶೇಷ ದಿನಗಳಲ್ಲಿ ಪೂಜೆ, ಹೋಮ ಹವನ ಭಜನೆ, ಅನ್ನ ಸಂತರ್ಪಣೆ, ಹಾಗೂ ಹರಿಕಥೆ, ಪ್ರವಚನ, ಎಲ್ಲವನ್ನು ನಡೆಸಲಾಗುತ್ತಿದೆ. ಶಿಕಾರಿಪುರದಲ್ಲಿ ಹುಚ್ಚರಾಯಸ್ವಾಮಿ ದೇವಸ್ಥಾನ ಪ್ರಸಿದ್ಧಿ ಪಡೆದಿದೆ.

ವರ್ಷಕ್ಕೊಮ್ಮೆ ಅದ್ದೂರಿಯಾಗಿ ಜಾತ್ರೆ ನಡೆಯುತ್ತದೆ. (ಯಾವು ದೋ ಒಂದು ಮಾಸದಲ್ಲಿ ಇದೇ ದೇವಾಲಯದಲ್ಲಿ 15 ದಿನಗಳ ಕಾಲ ಮಹಿಳೆಯರು ಮಕ್ಕಳು ಸೇರಿ, ಭಜನೆ ಹಾಡು ಎಲ್ಲಾ ಹೇಳಿ ಹುಣ್ಣಿಮೆ ದಿನ ರಾಮ ಸೀತೆ ಅಥವಾ ಈಶ್ವರ ಪಾರ್ವತಿಯರಂತೆ ಮಕ್ಕಳಿಗೆ ಅಲಂಕರಿಸಿ ಕೂರಿಸುತ್ತಾರೆ. ಎಲ್ಲರ ಮನೆಯಿಂದಲೂ ವಿಧವಿಧವಾದ ತಿಂಡಿ ತಿನಿಸುಗಳನ್ನು ತಂದಿರುತ್ತಾರೆ.

> **ಶಿಕಾರಿಪುರಕ್ಕೆ ಸಮೀಪದಲ್ಲಿ ಹೊಯ್ಸಳರ ಆಳ್ವಿಕೆಯ ಲ್ಲಿದ್ದ ಬಳ್ಳಿಗಾವಿ ಗ್ರಾಮವಿದ್ದು ಗತಕಾಲದ ವೈಭವ ತಿಳಿಸುತ್ತದೆ. ನಾಟ್ಯರಾಣಿ ಶಾಂತಲೆಯ ತವರೂರು ಆಗಿದೆ. ಇಲ್ಲೊಂದು ಈಶ್ವರ ಲಿಂಗ ವಿದ್ದು, ದಿನದ ತ್ರಿಕಾಲದಲ್ಲಿ ಮೂರು ಬಣ್ಣದಲ್ಲಿ ಬದಲಾಗುತ್ತದೆ. ಉಡಗಣಿ ಅಥವಾ ಉಡತಡಿ ಗ್ರಾಮ ಸಮೀಪವೇ ಇದ್ದು ಇಲ್ಲಿ ಪ್ರಸಿದ್ಧವಾದ ರಾಘವೇಂದ್ರ ಸ್ವಾಮಿಗಳ ಮಠವಿದೆ. ರಾಯರನ್ನು ಬೇಡಿಕೊಂಡರೆ ಎಂತಹ ಕಷ್ಟಗಳು ಪರಿಹಾರವಾಗುತ್ತದೆ ಎಂದುಬೇರೆ ಬೇರೆ ಕಡೆಯಿಂದಲೂ ಭಕ್ತರು ಬಂದು ಸೇವೆ ಸಲ್ಲಿಸುತ್ತಾರೆ.**



ಹಾಡು, ಭಜನೆ, ಒಗಟು, ಆಟ, ಮನರಂಜನೆಯಾಡಿ ತಂದಿರುವ ತಿಂಡಿಗಳನ್ನು ಮೊದಲು ಅಲಂಕರಿಸಿದ ಮಕ್ಕಳಿಗೆ ಬಡಿಸುತ್ತಾರೆ ನಂತರ ಎಲ್ಲರ ಎಲೆಗೂ ಅದನ್ನು ಬಡಿಸುತ್ತಾರೆ ಒಂದಾಗಿ ಕುಳಿತು ಹರಟುತ್ತಾ ಸಂತೋಷವಾಗಿ ತಿಂದು ಮನೆಗೆ ಹೋಗುವುದು.

ನಾನು ಶಿಕಾರಿ ಪುರದಲ್ಲಿ ಎಂಟನೇ ತರಗತಿ ಓದಿದ್ದೆ ಆಗ ನೋಡಿದ್ದೆ ಯಾವ ಆಚರಣೆ ಎಂದು ನೆನಪಿಲ್ಲ) ಈ ಊರಿನ ಹೆಸರು ಮೊದಲು ಬೇರೆ ಇತ್ತು. ಇಲ್ಲಿ ತುಂಬಾ ಕಾಡು ಪ್ರಾಣಿಗಳು ಹುಲಿ, ಸಿಂಹ, ಚಿರತೆ, ಕಿರುಬ, ಜಿಂಕೆ, ಅನೇಕ ಪ್ರಾಣಿಗಳು ಶಿಕಾರಿಗೆ ಸಿಗುತ್ತದೆ ಎಂದು ಕೆಳದಿ ಅರಸರು ಶಿಕಾರಿಮಾಡಲು ಬರುತ್ತಿದ್ದರು. ಈ ಕಾರಣದಿಂದ ಶಿಕಾರಿಪುರ ಎಂದು ಹೆಸರು ಬಂದಿತು ಎಂಬುದು ಇತಿಹಾಸ. ದೇವಸ್ಥಾನದ ಹತ್ತಿರವೇ ಕೆರೆ ಇದೆ ದೊಡ್ಡ ಕೆರೆ ಎಂದು ಕರೆಯುತ್ತಾರೆ. ಕೆರೆ ದಾಟಿ ಸ್ವಲ್ಪ ಮುಂದೆ ಹೋದರೆ ದತ್ತಾಶ್ರಮವಿದೆ. ಇಲ್ಲಿ ಶಾರದಾಂಬೆ ಮತ್ತು ಶಂಕರಾ ಚಾರ್ಯರು, ಅಮೃತಶಿಲೆಯ ದತ್ತಾತ್ರೇಯ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಪೂಜೆ ಭಜನೆ ಪ್ರವಚನ ಎಲ್ಲಾ ಇರುತ್ತದೆ. ಈ ಊರಿನಲ್ಲಿ ವೀರಶೈವರ ಚೆನ್ನಮಲ್ಲಿಕಾರ್ಜುನರ ದೇವಸ್ಥಾನ ಮತ್ತು ಮಠ ಇದೆ. ಶಿವಶರಣೆ ಅಕ್ಕಮಹಾದೇವಿಯ ಜನ್ಮಸ್ಥಳ ಇದಾಗಿದ್ದು ಅಕ್ಕಮಹಾದೇವಿಯ ಒಂದು ದೇವಸ್ಥಾನವಿದೆ.

ನಮ್ಮೆಲ್ಲರ ಪ್ರೀತಿಯ ಕವಿ ಎದೆ ತುಂಬಿ ಹಾಡಿದನು ಅಂದು ನಾನು ಮನವಿಟ್ಟು ಕೇಳಿದರೆ ಅಲ್ಲಿ ನೀವು ಜಿ.ಎಸ್ ಶಿವರುದ್ರಪ್ಪ ನವರ ಹುಟ್ಟೂರು. ಬ್ರಿಟಿಷರು ನಮ್ಮ ದೇಶ ಆಕ್ರಮಿಸಿಕೊಂಡಾಗ ಸ್ವಾತಂತ್ರ್ಯ ಹೋರಾಟದ ಕಹಳೆಯೂದಿ ರೈತರು ಹೋರಾಟ ಮಾಡಿ ವೀರ ಮರಣವನ್ನಪ್ಪಿದ ಈಸೂರು ಸಮೀಪದಲ್ಲಿದೆ.

ಹರಿಹರ, ದಾವಣಗೆರೆ ಸಮೀಪದಲ್ಲಿದ್ದು ಹೋಟೆಲ್‌ಗಳಲ್ಲಿ ದಾವಣಗೆರೆ ಬೆಣ್ಣೆಯಿಂದ ತಯಾರಿಸಿದ ರುಚಿಕರ ತಿಂಡಿಗಳು ದೊರೆಯುತ್ತದೆ. ಇಲ್ಲಿ ಕುಮದ್ವತಿ ನದಿ ಹರಿಯುತ್ತಿದ್ದು ಮಳೆಗಾಲದಲ್ಲಿ ಪ್ರವಾಹದ ವೈಭವ ನೋಡಲು ಖುಷಿಯಾಗುತ್ತದೆ. ಶಿಕಾರಿಪುರ, ಶಿರಾಳಕೊಪ್ಪ, ಆಯನೂರಿನ ಸಂತೆ ಹೆಸರುವಾಸಿ. ಬಾರೆ ಸಂತೆಗೆ ಹೋಗೋಣ ಸಿನಿಮಾ ಟೆಂಟಲ್ಲಿ ಕೋರೋಣ ಎಂಬಂತೆ ಆಗ ಸಿನಿಮಾ ಟಾಕೀಸ್, ಹೋಟೆಲ್ಲು ಎಲ್ಲವೂ ತುಂಬಾ ಚೆನ್ನಾಗಿತ್ತು. ಸಾಗರ, ಸೊರಬ, ರಿಪ್ಪನ್ ಪೇಟೆ, ಈ ಕಡೆಗೆ ಕುಂಸಿ, ಚೋರ್ಡಿ, ಶಿಕಾರಿಪುರಕ್ಕೆ ಸಮೀಪದಲ್ಲಿದೆ. ಶಿಕಾರಿಪುರ ಭತ್ತದ ಕಣಜ ಎಂದು ಪ್ರಸಿದ್ಧವಾಗಿದೆ. ಇತ್ತ ಮಲೆನಾಡು ಅಲ್ಲದ ಅತ್ತ ಬಯಲು ಸೀಮೆಯು ಅಲ್ಲದ 'ಶಿಕಾರಿಪುರ' ಮನಮೋಹಕವಾದ ಸುಂದರವಾದ ಹುಚ್ರಾಯಸ್ವಾಮಿಯ ಪುಣ್ಯಕ್ಷೇತ್ರ. ಈ ಕಥೆ ಬರೆಯುತ್ತಾ, ನನಗೆ ಮತ್ತೊಮ್ಮೆ ಶಿಕಾರಿಪುರಕ್ಕೆ ಹೋಗಿ ಬಂದಂತೆ ಆಯಿತು.

---

## ಹನುಮಾನ್ ಜಯಂತಿ; 500 ಕಡೆಗಳಲ್ಲಿ ಸಾಮೂಹಿಕ ಗದಾಪೂಜೆ ಸಂಪನ್ನ

• ಉದಯವಾಹಿನಿ, ಬೆಂಗಳೂರು

ಅಯೋಧ್ಯೆಯಲ್ಲಿ ಸ್ಥಾಪನೆಯಾಗಿರುವ ಶ್ರೀರಾಮ ಮಂದಿರವು ಒಂದು ರೀತಿಯಲ್ಲಿ ರಾಮರಾಜ್ಯದ ಪ್ರಾರಂಭವಾಗಿದ್ದು, ಈಗ ರಾಮರಾಜ್ಯವು ಎಲ್ಲೆಡೆ ಸ್ಥಾಪನೆಯಾಗಬೇಕು ಮತ್ತು ಹಿಂದೂ ಸಮಾಜದ ಶೌರ್ಯವು ಜಾಗೃತಗೊಳ್ಳಬೇಕೆಂದು ಏಪ್ರಿಲ್ 12 ಶ್ರೀಹನುಮಾನ್ ಜಯಂತಿಯ ನಿಮಿತ್ತ ಹಿಂದೂ ಜನಜಾಗೃತಿ ಸಮಿತಿ ಮತ್ತು ಸಮಾನ ವಿಚಾರಧಾರೆಯ ಹಿಂದುತ್ವನಿಷ್ಠ ಸಂಘಟನೆಗಳು, ಭಕ್ತರ ಸಹಭಾಗಿತ್ವದಲ್ಲಿ ದೇಶಾದ್ಯಂತ 500 ಸ್ಥಳಗಳಲ್ಲಿ ಸಾಮೂಹಿಕ ಗದಾಪೂಜೆ ನಡೆಸಲಾಯಿತು. ಬೆಂಗಳೂರಿನಲ್ಲಿಯೂ ಸಾಮೂಹಿಕ ಗದಾಪೂಜೆ ಕಾರ್ಯಕ್ರಮ ನಡೆಸಲಾಯಿತು.



ಉದಯವಾಹಿನಿ ಚಿತ್ರ

ಇದರಲ್ಲಿ ವಿಶೇಷವಾಗಿ ಯುವಕರು ಸ್ವಯಂ ಪ್ರೇರಿತರಾಗಿ ಭಾಗವಹಿಸಿದರು. ಈ ಕಾರ್ಯಕ್ರಮಗಳ ಪ್ರಾರಂಭವು ಶಂಖನಾದದಿಂದ ಆಯಿತು. ತದನಂತರ ಸಾಮೂಹಿಕ ಪ್ರಾರ್ಥನೆ, 'ಗದಾಪೂಜೆ' ವಿಧಿ, ಶ್ರೀ ಹನುಮಂತನ ಆರತಿ, ಮಾರುತಿ ಸ್ತೋತ್ರ ಪಠಣದ ನಂತರ 'ಶ್ರೀ ಹನುಮತೇ ನಮಃ' ಎಂಬ ಸಾಮೂಹಿಕ ನಾಮಜಪವನ್ನು ಮಾಡಲಾಯಿತು. ಜೊತೆಗೆ ರಾಮರಾಜ್ಯದ ಸ್ಥಾಪನೆಗಾಗಿ ಮಾರುತಿರಾಯರ ಗುಣಗಳನ್ನು ಹೇಗೆ ಅಳವಡಿಸಿಕೊಳ್ಳಬೇಕು' ಎಂಬುದರ ಕುರಿತು ಮಾರ್ಗದರ್ಶನವನ್ನು ನೀಡಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ 'ರಾಮರಾಜ್ಯದ ಸ್ಥಾಪನೆಗಾಗಿ ಸಾಮೂಹಿಕ ಪ್ರತಿಜ್ಞೆಯನ್ನು ತೆಗೆದುಕೊಳ್ಳಲಾಯಿತು. ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ ದೇಶಾದ್ಯಂತ ಕಳೆದ 3 ವರ್ಷಗಳಿಂದ ಸಾಮೂಹಿಕ 'ಗದಾಪೂಜಾ' ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ, ಈ ವರ್ಷವೂ ಹಿಂದುತ್ವನಿಷ್ಠರು ಮತ್ತು ಭಕ್ತರ ಉತ್ತಮ ಸಹಭಾಗಿತ್ವವು ಇದರಲ್ಲಿ ಕಂಡುಬಂತು.

ಈ ಗದಾಪೂಜೆಯ ಹಿಂದಿನ ಉದ್ದೇಶವನ್ನು ಸ್ಪಷ್ಟಪಡಿಸುತ್ತಾ ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ವಕ್ತಾರರಾದ ಶ್ರೀ. ಮೋಹನ್ ಗೌಡ ಮಾತನಾಡಿ, ಮಾರುತಿರಾಯರ 'ಗದೆ' ಕೇವಲ ಯುದ್ಧದ ಆಯುಧವಲ್ಲ, ಬದಲಾಗಿ ಅದು ಧರ್ಮರಕ್ಷಣೆಯ ಸಂಕಲ್ಪ, ಅನ್ಯಾಯದ ವಿರುದ್ಧ ನಿಲ್ಲುವುದು ಮತ್ತು ಭಗವಂತನ ಕಾರ್ಯಕ್ಕಾಗಿ ಹಗಲಿರುಳು ಶ್ರಮಿಸುವುದರ ಸಂಕೇತ ವಾಗಿದೆ. ಶನಿವಾರ ಅಯೋಧ್ಯೆಯಲ್ಲಿ ಶ್ರೀರಾಮಲಲ್ಲಾ ವಿರಾಜಮಾನರಾಗಿದ್ದಾರೆ, ಇದು ಒಂದು ಐತಿಹಾಸಿಕ ಕ್ಷಣ, ಆದರೆ ಶ್ರೀರಾಮನ ಕಾರ್ಯವು ಇನ್ನೂ ಅಪೂರ್ಣವಾಗಿದೆ. ಮಂದಿರವನ್ನು ನಿರ್ಮಿಸಲಾಗಿದೆ, ಈಗ ರಾಮರಾಜ್ಯವನ್ನು ನಿರ್ಮಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಈ ಕಾರ್ಯವು ಹನುಮಂತನಂತಹ ಶೌರ್ಯ, ನಿಷ್ಠೆ, ತ್ಯಾಗ ಮತ್ತು ಸಾಮರ್ಥ್ಯವಿಲ್ಲದೆ ಸಾಧ್ಯವಿಲ್ಲ. ಅದಕ್ಕಾಗಿಯೇ ಈ ವರ್ಷವೂ ದೇಶಾದ್ಯಂತ ಗದಾಪೂಜೆಯ ಮೂಲಕ ಹಿಂದೂಗಳಲ್ಲಿನ ಶೌರ್ಯವನ್ನು ಜಾಗೃತಗೊಳಿಸುವ ಮತ್ತು ರಾಮರಾಜ್ಯದ ಕಡೆಗೆ ಸಾಮೂಹಿಕವಾಗಿ ಹೆಜ್ಜೆ ಹಾಕುವ ನಿರ್ಧಾರವನ್ನು ಮಾಡಬೇಕಾಗಿದೆ' ಎಂದರು.

---

## ಹುಣ್ಣಿಮೆಯ ಪ್ರಯುಕ್ತ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀ ಪಾದಂಗಳವರ ಆದೇಶದಂತೆ ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಹನುಮ ಜಯಂತಿ ಪ್ರಯುಕ್ತ ಶ್ರೀ ಮುಖ್ಯ ಪ್ರಾಣ ದೇವರಿಗೆ ವಜ್ರಕವಚ ಧಾರಣೆ, ಹುಣ್ಣಿಮೆ, ಹನುಮ ಜಯಂತಿಯ ಪ್ರಯುಕ್ತ ವೇದ ಪಾರಾಯಣದೊಂದಿಗೆ ಶ್ರೀ ಸತ್ಯನಾರಾಯಣ ಸ್ವಾಮಿವ್ರತ ಪೂಜೆಯು ಪುರೋಹಿತರಾದ ಶ್ರೀ ನಂದಕಿಶೋರಾಚಾರ್ಯರು ಹಾಗೂ ಕಟ್ಟಿ ರಾಘವೇಂದ್ರ ಆಚಾರ್ಯರು ನೆರವೇರಿಸಿದರು.

ಈ ಸಂದರ್ಭದಲ್ಲಿ ವಿಶೇಷವಾಗಿ ರಥೋತ್ಸವ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿತರಣೆ ಕಾರ್ಯಕ್ರಮಗಳು ಜರುಗಿದವು.

ಈ ಪೂಜಾ ಸೇವೆಗಳಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಸಾದವನ್ನು ಸ್ವೀಕರಿಸಿ ಶ್ರೀ ಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು.

## ಕಾರಟಗಿ ತಾಲ್ಲೂಕಿನಾದ್ಯಂತ 50-60 ಕೋಟಿ ಬೆಳೆ ನಷ್ಟವಾಗಿದೆ ಸರಕಾರ
## ರೈತರಿಗೆ ಶೀಘ್ರ ಪರಿಹಾರ ನೀಡಲಿ: ರೈತ ಮುಖಂಡ ಆರ್. ಮಾಧವ ರೆಡ್ಡಿ ಆಗ್ರಹ

• ಉದಯವಾಹಿನಿ ಕಾರಟಗಿ

ಏಪ್ರಿಲ್ 10 ರಂದು ಮಳೆ ಬಿರು ಗಾಳಿ ಸಹಿತ ಗುಡುಗು ಸಿಡಿಲು ಮತ್ತು ಆಲಿಕಲ್ಲು ಮಳೆಯಿಂದಾಗಿ ತಾಲ್ಲೂಕಿನ ಚಳ್ಳೂರು, ಚಳ್ಳೂರು ಕ್ಯಾಂಪ್, ಗುಡೂರು, ಸೋಮನಾಳ, ಮೈಲಾಪುರ, ತೊಂಡಿ ಹಾಳ್, ಗುಂಡೂರು, ಸಿಂಗನಾಳ, ಅಂಜೂರಿ ಕ್ಯಾಂಪ್ ಹಾಗೂ ವಿವಿಧ ಗ್ರಾಮಗಳ ರೈತರ ಬತ್ತದ ಬೆಳೆಗಳು ಸಂಪೂರ್ಣ ನೆಲಕ್ಕುರುಳಿ ಹಾನಿಯಾಗಿರುವ ಭತ್ತ ವನ್ನು ಶುಕ್ರವಾರ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಆರ್. ಮಾಧವ ರೆಡ್ಡಿ ವೀಕ್ಷಣೆ ಮಾಡಿ ರೈತರೊಂದಿಗೆ ಚರ್ಚೆ ನಡೆಸಿ ಮಾತನಾಡಿದ ಅವರು ರೈತರು ದೇಶಕ್ಕೆ ಅನ್ನ ನೀಡುವ ಅನ್ನದಾತರು ಅಂತ ನಾವೆಲ್ಲಾ ಹೇಳುತ್ತೇವೆ. ಆದರೆ ರೈತರು ಸಂಕಷ್ಟದಲ್ಲಿದ್ದಾಗ ಸರಕಾರಗಳು ಸ್ಪಂದನೆ ನೀಡಬೇಕು. ಇಲ್ಲವಾದಲ್ಲಿ ರೈತರು ಸಾಲದ ಸುಳಿಯಲ್ಲಿ ಸಿಲುಕಿ ಆತ್ಮಹತ್ಯೆಯಂತ ನಿರ್ಧಾರಕ್ಕೆ ಮುಂದಾಗುತ್ತಾರೆ.

ಹೀಗಾಗಿ ಈ ದೇಶದಲ್ಲಿ ಏನೇ ಸಮಸ್ಯೆಯಾಗಲಿ ಆದರೆ ರೈತರ ಆತ್ಮಹತ್ಯೆಯಾಗಬಾರದು ಮತ್ತು ತಾಲ್ಲೂಕಿನ ನಾನಾ ಗ್ರಾಮಗಳಲ್ಲಿ ಸುರಿದ ಆಲಿ ಕಲ್ಲು ಮಳೆಯಿಂದಾಗಿ ಸುಮಾರು 50 ರಿಂದ 60 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಇದರಿಂದ ರೈತರು ಕಣ್ಣೀರಲ್ಲಿ ಕೈ ತೊಳೆಯುವಂತ ಪರಿಸ್ಥಿತಿ ನಿರ್ಮಾಣವಾಗಿದೆ.

**ಕಣ್ಣೀರಲ್ಲಿ ಕೈ ತೊಳೆಯುವ ಪರಿಸ್ಥಿತಿ**

ಕೂಡಲೇ ತಾಲೂಕು ಆಡಳಿತ ತತಕ್ಷಣ ಇಚ್ಚೆತ್ತು ಕೊಂಡು ವರದಿ ಸಲ್ಲಿಸಿ ಕಳುಹಿಸಿ ಕೊಡಬೇಕು ಜತೆಗೆ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೂಡಲೇ ರೈತರಿಗೆ ಪರಿಹಾರ ನೀಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಆರ್. ಮಾಧವ ರೆಡ್ಡಿ ಒತ್ತಾಯಿಸಿದರು

ಈ ವೇಳೆ ರೈತ ಮುಖಂಡರಾದ , ಹನುಮಂತ ರಡ್ಡಿ,ರಾಮನಗೌಡ ಸುರೇಂದ್ರ, ಓಂ ಕಾರಿ, ವೆಂಕನ ಗೌಡ ವಿಶ್ವಾನಾಥ ಸೇರಿ ನೂರಾರು ರೈತರು ಭಾಗ ವಹಿಸಿದ್ದರು.

ತಾಲ್ಲೂಕಿನ ಚಳ್ಳೂರು, ಚಳ್ಳೂರು ಕ್ಯಾಂಪ್ ಸೇರಿದಂತೆ ಭತ್ತ ಹಾನಿಗೊಳಗಾದ ಪ್ರದೇಶಕ್ಕೆ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಆರ್. ಮಾಧವ ರೆಡ್ಡಿ ಭೇಟಿ ನೀಡಿ ವೀಕ್ಷಣೆ ಮಾಡಿದರು.



ಉದಯವಾಹಿನಿ ಚಿತ್ರ

## ಜನಾಕ್ರೋಶ ಯಾತ್ರೆ ವಿರುದ್ಧ ಪ್ರತಿಭಟನೆ: ಕಾಂಗ್ರೇಸ್ ಕಾರ್ಯಕರ್ತರು ಪೊಲೀಸ್ ವಶಕ್ಕೆ

• ಉದಯವಾಹಿನಿ ಶಿವಮೊಗ್ಗ

ಡೀಸೆಲ್, ಅಡುಗೆ ಅನಿಲ ಬೆಲೆ ಏರಿಕೆ ಮಾಡಿ ಜನಸಾಮಾನ್ಯರ ಜೀವನದ ಮೇಲೆ ಬಿಜೆಪಿ ಗದಾಪ್ರಹಾರ ಮಾಡಿದೆ. ಆ ಪಕ್ಷದ ನಾಯಕರಿಗೆ ಜನಾಕ್ರೋಶ ಯಾತ್ರೆ ಮಾಡುವ ನೈತಿಕತೆ ಇಲ್ಲ ಎಂದು ಆರೋಪಿಸಿ ಯುವ ಕಾಂಗ್ರೇಸ್ ಜಿಲ್ಲಾ ಘಟಕದ ಕಾರ್ಯಕರ್ತರು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು. ಈ ವೇಳೆ ಮಾತನಾಡಿದ ಯುವ ಕಾಂಗ್ರೇಸ್‌ನ ಹರ್ಷಿತ್ ಗೌಡ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ದುಬಾರಿಯಾಗಿದ್ದಾಗ ಯುಪಿಎ ಸರ್ಕಾರ



ಉದಯವಾಹಿನಿ ಚಿತ್ರ

ಕೇವಲ 63ಕ್ಕೆ ಪೆಟ್ರೋಲ್ ಮಾರಾಟ ಮಾಡುತ್ತಿತ್ತು. ಈಗ ಕಚ್ಚಾತೈಲದ ಬೆಲೆ ಕಡಿಮೆಯಾಗಿದ್ದರೂ ಬಿಜೆಪಿ ನೇತೃತ್ವದ ಸರ್ಕಾರ 103ಕ್ಕೆ ಲೀಟರ್ ಪೆಟ್ರೋಲ್ ಮಾರಾಟ ಮಾಡುತ್ತಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆಯೇ ಕಾರಣ ಎಂದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಆರ್. ಅಶೋಕ್ ಅವರು ಜನಾಕ್ರೋಶ ಯಾತ್ರೆ ಕೈಬಿಟ್ಟು, ತಮ್ಮದೇ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದ್ದು, ಪ್ರಧಾನಿ ಮನವೊಲಿಸಿ ಅಗತ್ಯ ವಸ್ತುಗಳ ಬೆಲೆ ಕಡಿಮೆ ಮಾಡಿ ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡಬೇಕು ಆಗ್ರಹಿಸಿದರು.

## ಕಳೆದ ಏಳು ವರ್ಷಗಳಿಂದ ರಸ್ತೆ ಅಭಿವೃದ್ಧಿಗೆ ಜನರು ಜನಪ್ರತಿನಿಧಿಗಳ ಮನೆ ಬಾಗಿಲಿಗೆ ಅಲೆದಿದ್ದಾರೆ
## ಚಂದಾ ಎತ್ತಿ ಹೊಲಕ್ಕೆ ರಸ್ತೆ: ಚಿಕ್ಕಮಗಳೂರು ಗ್ರಾಮಸ್ಥರಿಂದ ಮಾದರಿ ಹೆಜ್ಜೆ


• ಉದಯವಾಹಿನಿ ಚಿಕ್ಕಮಗಳೂರು

ಸರಕಾರ ಪ್ರತಿ ಜಮೀನಿಗೆ ಸಾಗಲು ಸೂಕ್ತ ರಸ್ತೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ನಮ್ಮ ಹೊಲ, ನಮ್ಮ ರಸ್ತೆ ಯೋಜನೆ ಜಾರಿ ಮಾಡಿದೆ. ಆದರೆ, ಪಿಳ್ಳೇನಹಳ್ಳಿ ಗ್ರಾಮದಲ್ಲಿಈ ಯೋಜನೆ ಅನುಷ್ಠಾನಕ್ಕೆ ಗ್ರಾಮಸ್ಥರು ಜನಪ್ರತಿನಿಗಳು, ಅಧಿಕಾರಿಗಳ ಬಳಿ ಅಲೆದು ಸುಸ್ತಾಗಿ ಕೊನೆಗೆ ತಾವೇ ಚಂದಾ ಎತ್ತಿ ತಮ್ಮ ಹೊಲಗಳಿಗೆ ರಸ್ತೆ ನಿರ್ಮಿಸಿಕೊಂಡಿದ್ದಾರೆ.

ರೈತರು ತಮ್ಮ ಜಮೀನುಗಳಿಗೆ ಸಾಗಲು ಸೂಕ್ತ ರಸ್ತೆ ಇರದಿದ್ದರೆ 'ನಮ್ಮ ಹೊಲ ನಮ್ಮ ರಸ್ತೆ' ಯೋಜನೆಯಡಿ ರಸ್ತೆ ನಿರ್ಮಿಸಿಕೊಡಲು ಸರಕಾರ ಯೋಜನೆ ರೂಪಿಸಿದೆ. ಆದರೆ. ಕಡೂರು ತಾಲ್ಲೂಕಿನ ಪಿಳ್ಳೇನಹಳ್ಳಿ ಗ್ರಾಮದ ಚಿನ್ನೇರಿ ರಸ್ತೆಗೆ ಈ ಭಾಗ್ಯ ಕೂಡಿ ಬಂದಿರಲಿಲ್ಲ.

ಕಳೆದ ಏಳು ವರ್ಷಗಳಿಂದ ರಸ್ತೆ ಅಭಿವೃದ್ಧಿಗೆ ಜನರು ಜನಪ್ರತಿನಿಧಿಗಳ ಮನೆ ಬಾಗಿಲಿಗೆ ಅಲೆದಿದ್ದಾರೆ. ಇತ್ತೀಚೆಗೆ ಕಾಂಗ್ರೇಸ್ ಸರಕಾರ ನಮ್ಮ ಹೊಲ ನಮ್ಮ ರಸ್ತೆ ಯೋಜನೆ ಜಾರಿಯಾದ ಬಳಿಕ ಮನವಿ ಸಲ್ಲಿಸಿದರೂ ಪ್ರಯೋಜನವಾಗದ ಕಾರಣ ರೈತರೇ ರಸ್ತೆ ನಿರ್ಮಾಣಕ್ಕೆ ಮುಂದಾಗಿ ಸೈ ಎನಿಸಿಕೊಂಡಿದ್ದಾರೆ.

ಏಳು ವರ್ಷಗಳಿಂದ ರಸ್ತೆ ಅಭಿವೃದ್ಧಿಗೆ ಎಲ್ಲಾ ಪಕ್ಷದ ಜನಪ್ರತಿನಿಗಳು ಸೇರಿದಂತೆ ಸರಕಾರಿ ಕಚೇರಿಗೆ ಅಲೆದಾಡಿದ್ದೇವೆ. ಯಾರೂ ಈ ಬಗ್ಗೆ ತಲೆಕೆಡಿಕೊಳ್ಳದ ಕಾರಣ ಈ ಭಾಗದ 500ರಿಂದ 600 ರೈತ ಕುಟುಂಬದವರು ಎಕರೆಗೆ 3 ಸಾವಿರ ರೂ.ನಂತೆ



ಉದಯವಾಹಿನಿ ಚಿತ್ರ

- ಸರ್ಕಾರ 'ನಮ್ಮ ಹೊಲ, ನಮ್ಮ ರಸ್ತೆ' ಯೋಜನೆ ಜಾರಿ ಮಾಡಿದೆ.
- ಕಳೆದ ಏಳು ವರ್ಷಗಳಿಂದ ರಸ್ತೆ ಅಭಿವೃದ್ಧಿಗೆ ಜನರು ಜನಪ್ರತಿನಿಧಿಗಳ ಮನೆ ಬಾಗಿಲಿಗೆ ಅಲೆದಿದ್ದಾರೆ.
- ಪಿಳ್ಳೇನಹಳ್ಳಿ, ಕಾಲುವೆಹಳ್ಳಿ, ಗಂಗಬಸವನಹಳ್ಳಿ ಗ್ರಾಮದ ಸುಮಾರು ಐನೂರಕ್ಕೂ ಹೆಚ್ಚು ರೈತರು ತಮ್ಮ ಜಮೀನುಗಳಿಗೆ ಈ ರಸ್ತೆ ಮೂಲಕ ಸಾಗುತ್ತಾರೆ.

ಹಣ ಒಟ್ಟುಗೂಡಿಸಿ ರಸ್ತೆ ಅಭಿವೃದ್ಧಿ ಪಡಿಸುತ್ತಿದ್ದೇವೆ.

ಇದರಿಂದ ಎಲ್ಲರಿಗೂ ಅನುಕೂಲವಾಗಲಿದೆ ಎಂದಿದ್ದಾರೆ ಹರೀಶ್, ಗ್ರಾಮಸ್ಥ, ಪಿಳ್ಳೇನಹಳ್ಳಿ ಈ ರಸ್ತೆ ಪಿಳ್ಳೇನಹಳ್ಳಿಯ ಹೃದಯ ಭಾಗ ಇದ್ದಂತೆ. ಸುತ್ತಮುತ್ತಲಿನ ಮೂರು ಗ್ರಾಮಗಳಿಗೆ ಈ ರಸ್ತೆ ಸಂಪರ್ಕ ಕಲ್ಪಿಸುತ್ತದೆ. ಈ ವರೆಗೆ ಅಧಿಕಾರಕ್ಕೆ ಬಂದ ಶಾಸಕರುಗಳಿಗೆ ಮನವಿ ಸಲ್ಲಿಸಿದ್ದಕ್ಕೆ ಪ್ರಯೋಜನವಾಗಲಿಲ್ಲ. ಆದ್ದರಿಂದ 2 ಕಿ.ಮೀ. ರಸ್ತೆಯನ್ನು ರೈತರೇ ನಿರ್ಮಾಣ ಮಾಡಿಕೊಂಡಿದ್ದೇವೆ ಎಂದಿದ್ದಾರೆ ವಿಜಯ್ ಕುಮಾರ್, ಗ್ರಾಮಸ್ಥ, ಪಿಳ್ಳೇನಹಳ್ಳಿ.

### ರೈತರಿಂದ ಚಂದಾ ಎತ್ತಿ ರಸ್ತೆ ನಿರ್ಮಾಣ

ಪಿಳ್ಳೇನಹಳ್ಳಿ, ಕಾಲುವೆಹಳ್ಳಿ, ಗಂಗಬಸವನಹಳ್ಳಿ ಗ್ರಾಮದ ಸುಮಾರು ಐನೂರಕ್ಕೂ ಹೆಚ್ಚು ರೈತರು ತಮ್ಮ ಜಮೀನುಗಳಿಗೆ ಈ ರಸ್ತೆ ಮೂಲಕ ಸಾಗುತ್ತಾರೆ. 20 ವರ್ಷದ ಹಿಂದೆ ಆಗಿನ ಸಂಸದರಾಗಿದ್ದ ದಿ. ಶ್ರೀಕಂಠಪ್ಪ ಅವರು ಸ್ವಲ್ಪ ಪ್ರಮಾಣದಲ್ಲಿ ರಸ್ತೆ ಅಭಿವೃದ್ಧಿಗೊಳಿಸಿದ್ದರು. ಆದಾದ ಬಳಿಕ ರಸ್ತೆ ಹದಗೆಟ್ಟಿತ್ತು. ಮಳೆಗಾಲದಲ್ಲಿ ರಸ್ತೆ ಗುಂಡಿ ಬಿದ್ದು ಜಮೀನುಗಳಿಗೆ ವಾಹನಗಳು ಸಾಗುವುದು ಕಷ್ಟಕರವಾಗಿತ್ತು. ಗ್ರಾಮಸ್ಥರು ರಸ್ತೆ ಅಭಿವೃದ್ಧಿಪಡಿಸಿಕೊಡಿ ಎಂದು ಸ್ಥಳೀಯ ಗ್ರಾಮ ಪಂಚಾಯಿತಿಯಿಂದ ಹಿಡಿದು ಶಾಸಕರವರೆಗೆ ಮನವಿ ಸಲ್ಲಿಸಿದ್ದರು. ಯಾರೂ ಸೂಕ್ತವಾಗಿ ಸ್ಪಂದಿಸದ ಕಾರಣ ಈ ರಸ್ತೆ ಮೂಲಕ ಜಮೀನುಗಳಿಗೆ ಸಾಗುವ ಮಾಲೀಕರ ಬಳಿ ಒಂದು ಎಕರೆಗೆ ಮೂರು ಸಾವಿರ ರೂ. ಚಂದಾ ಎತ್ತಿ ಸುಮಾರು 3 ಲಕ್ಷ ರೂ. ವೆಚ್ಚದಲ್ಲಿರಸ್ತೆ ಅಭಿವೃದ್ಧಿ ಪಡಿಸಿಕೊಂಡಿದ್ದಾರೆ. ಈ ಮೂಲಕ ಜನಪ್ರತಿನಿಗಳು, ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಮಾದರಿ ಕಾರ್ಯದ ಉತ್ತರ ನೀಡಿದ್ದಾರೆ.

### ಮನೆಗೊಬ್ಬರಿಂದ ರಸ್ತೆ ಕಾಯಕ

ರಸ್ತೆ ನಿರ್ಮಾಣದಲ್ಲಿ ರೈತರೇ ಕಾಯಕ ಯೋಗಿಗಳಾಗಿದ್ದಾರೆ. ಈ ರಸ್ತೆ ವ್ಯಾಪ್ತಿಯಲ್ಲಿ ಬರುವ ರೈತರು ಮನೆಗೊಬ್ಬರಂತೆ ದುರಸ್ತಿ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಹದಗೆಟ್ಟಿದ್ದ ರಸ್ತೆಗೆ ತಮ್ಮ ಮನೆಯ ಟ್ರ್ಯಾಕ್ಟರ್‌ಗಳನ್ನು ಬಳಕೆ ಮಾಡಿಕೊಂಡು ಹಣ ಉಳಿತಾಯ ಮಾಡಿದ್ದಾರೆ. ಬೇರೆಡೆಯಿಂದ ಮಣ್ಣು ತರಲು ಮಾತ್ರ ಟಿಪ್ಪರ್‌ಗಳನ್ನು ಬಾಡಿಗೆಗೆ ಪಡೆದಿದ್ದು, ಉಳಿದಂತೆ ರಸ್ತೆ ಸಮತಟ್ಟಾಗಿ ಮಾಡುವುದು, ಸುತ್ತಲಿನ ಕಲ್ಲು ಬಂಡೆಗಳ ತೆರವು ಕಾರ್ಯ ಸೇರಿದಂತೆ ಎಲ್ಲವನ್ನೂ ರೈತರೆ ಮಾಡಿಕೊಂಡಿದ್ದಾರೆ.

## ಹನುಮಾನ್ ಜಯಂತಿ ಸಂಭ್ರಮ: ಭವ್ಯ ಶೋಭಾಯಾತ್ರೆ

• ಉದಯವಾಹಿನಿ ಕಲಬುರಗಿ

ನಾಡಿನೆಲ್ಲೆಡೆ ಶನಿವಾರ ಹನುಮಾನ್ ಜಯಂತ್ಯೋತ್ಸವವನ್ನು ಶೃಧ್ಧಾ ಭಕ್ತಿಯಿಂದ ಆಚರಿಸಲಾಗುತ್ತಿದ್ದು, ನಗರದಲ್ಲೆಡೆ ಸಡಗರ ಹಾಗೂ ಸಂಭ್ರಮದಿಂದ ಹನುಮಾನ್ ಜಯಂತಿ ಆಚರಿಸಲಾಯಿತು.

ಹನುಮಾನ್ ದೇವಸ್ಥಾನಗಳನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ವಿಶೇಷ ಪೂಜೆ, ಪುನಸ್ಕಾರಗಳು ನೆರವೇರಿದವು.

**ಭವ್ಯ ಶೋಭಾ ಯಾತ್ರೆ:** ಹನುಮಾನ್ ಜನ್ಮೋತ್ಸವ ನಿಮಿತ್ಯ 14 ಅಡಿ ಎತ್ತರದ ಹನುಮಾನ್ ಭವ್ಯ ಮೂರ್ತಿ ಮೆರವಣಿಗೆಗೆ ರಾಮತೀರ್ಥದಿಂದ ಶ್ರೀನಿವಾಸ್ ಸರಡಗಿ ಶಕ್ತಿ ಪೀಠದ ಡಾ. ಅಪ್ಪಾರಾವ್ ಮುತ್ಯಾ ಅವರು ಚಾಲನೆ ನೀಡಿದರು. ಕೇಸರಿ ನಂದನ್ ಯುವಬ್ರಿಗೇಡ್‌ದಿಂದ ಹಮ್ಮಿಕೊಂಡ ಭವ್ಯ ಶೋಭಾ ಯಾತ್ರೆಯು ಆಳಂದ್ ಚೆಕ್ ಪೋಸ್ಟ್ ಮೂಲಕ ಆಳಂದ್ ಕಾಲೋನಿ, ಖಾದ್ರಿ ಚೌಕ್, ಆಳಂದ್ ನಾಕಾ, ಪ್ರಕಾಶ್ ಚಿತ್ರಮಂದಿರ, ಹಳೆಯ ಚೌಕ್, ಸೂಪರ್ ಮಾರ್ಕೆಟ್ ಮಾರ್ಗವಾಗಿ ಜಗತ್ ವೃತ್ತಕ್ಕೆ ಆಗಮಿಸಿ ಮೆರವಣಿಗೆ ಸಮಾಪ್ತಿಗೊಂಡಿತು.



ಉದಯವಾಹಿನಿ ಚಿತ್ರ

ಸಹಸ್ರಾರು ಜನರು ಶೋಭಾ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಸಂದರ್ಭದಲ್ಲಿ ಈ ಭವ್ಯ ಮೆರವಣಿಗೆಯಲ್ಲಿ ಮಠಾಧೀಶರು, ಗಣ್ಯ ವ್ಯಕ್ತಿಗಳು, ಕೇಸರಿ ನಂದನ್ ಯುವ ಬ್ರಿಗೇಡ್‌ನ ಅಧ್ಯಕ್ಷ ಆನಂದ್ ಆರ್. ಚವ್ಹಾಣ್, ಶ್ವೇತಾಸಿಂಗ್, ರಾಜಕುಮಾರ್ ಗಬರಾದಿ, ಶಶಿಕಾಂತ್ ಆರ್. ದೀಕ್ಷಿತ್, ನಾಗರಾಜ್ ಪಾಟೀಲ್ ಸೇರಿದಂತೆ ಅಪಾರ ಪ್ರಮಾಣದಲ್ಲಿ ಭಕ್ತರು ಬೃಹತ್ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಈ ಮಧ್ಯೆ, ಶೋಭಾಯಾತ್ರೆಯು ಸುಸೂತ್ರವಾಗಿ ನೆರವೇರಲು ನಗರ ಪೋಲಿಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಅವರ ನೇತೃತ್ವದಲ್ಲಿ ಎಲ್ಲೆಡೆ ಬಿಗಿ ಪೋಲಿಸ್ ಬಂದೋಬಸ್ತ್ ಮಾಡಲಾಗಿತ್ತು.

### ಕೋರಂಟಿಯಲ್ಲಿ ಜನಜಾತ್ರೆ

ಹನುಮಾನ್ ಜಯಂತಿ ನಿಮಿತ್ಯ ನಗರದ ಕೋರಂಟಿ ಹನುಮಾನ್ ದೇವಸ್ಥಾನಕ್ಕೆ ಬೆಳಿಗ್ಗೆಯಿಂದಲೇ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದರ್ಶನ ಪಡೆದರು. ಬೃಹತ್ ಉದ್ದನೆಯ ಸರದಿ ಸಾಲಿನಲ್ಲಿ ನಿಂತು ಭಕ್ತರು ದೇವರ ದರ್ಶನ ಪಡೆದರು. ಹನುಮಾನ್ ಬೃಹತ್ ಪ್ರತಿಮೆಯ ಮುಂದೆ ಅನೇಕ ಭಕ್ತರು ನಿಂತು ತಮ್ಮ ಮೊಬೈಲ್‌ಗಳಿಂದ ಸೆಲ್ಫಿ ತೆಗೆದುಕೊಂಡು ಖುಷಿ ಪಟ್ಟರು. ಇದೇ ಸಂದರ್ಭದಲ್ಲಿ ಬಂದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಸಹ ಮಾಡಲಾಗಿತ್ತು.

ನಗರದ ಶ್ರೀ ಸ್ಮಶಾನ ಹನುಮಾನ್ ದೇವಸ್ಥಾನದಲ್ಲಿಯೂ ಸಹ ಜಯಂತಿ ನಿಮಿತ್ತ ವಿಶೇಷ ಪೂಜೆ ಜರುಗಿತು. ನಂತರ ದೇವಸ್ಥಾನದ ವತಿಯಿಂದ ಮಹಾ ಪ್ರಸಾದ ವಿತರಿಸಲಾಯಿತು.

## ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆ ಪ್ರತಿಯೊಬ್ಬರ ಹೊಣೆ

• ಉದಯವಾಹಿನಿ ಸಾಗರ

ನಮ್ಮ ಸುತ್ತಲಿನ ಐತಿಹಾಸಿಕ, ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸುವುದು ಪ್ರತಿಯೊಬ್ಬರ ಹೊಣೆಗಾರಿಕೆಯಾಗಿದೆ' ಎಂದು ಬೆಂಗಳೂರಿನ ಅಧಮ್ಯ ಚೇತನ ಸಂಸ್ಥೆಯ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್ ಹೇಳಿದರು.

ಇಲ್ಲಿನ ಎಲ್‌ಬಿ ಮತ್ತು ಎಸ್‌ಬಿಎಸ್ ಕಾಲೇಜಿನಲ್ಲಿ ಶನಿವಾರ ನಡೆದ ಐತಿಹಾಸಿಕ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಪರಿಸರದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನಾವೇನೂ ಮಾಡಲಾಗದು ಎಂದು ಕೈಚೆಲ್ಲಿ ಕುಳಿತುಕೊಳ್ಳುವುದಕ್ಕಿಂತ ನಮ್ಮ ಮಿತಿಯಲ್ಲಿ ಪರಿಸರಸ್ನೇಹಿಯಾದ ಯಾವ ಕೆಲಸ ಮಾಡಬಹುದು ಎಂಬುದನ್ನು ನಾವು ಚಿಂತಿಸಬೇಕು. ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು. ವಿದ್ಯಾರ್ಥಿಗಳೇ ಸೇರಿ ಐತಿಹಾಸಿಕ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣಾ ಅಭಿಯಾನಕ್ಕೆ ಮುಂದಾಗಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದರು. ಅರಣ್ಯ ಎಂದರೆ ಕೇವಲ ಮರ ಗಿಡಗಳಷ್ಟೆ ಅಲ್ಲ, ಅಲ್ಲಿ ಅಪಾರ ಪ್ರಮಾಣದ ಜೀವವೈವಿಧ್ಯ, ಪ್ರಾಣಿ ಪಕ್ಷಿ ಸಂಕುಲಗಳು ಕೂಡ ಇವೆ. ಕೃಷಿಯ ಮೂಲ ಇರುವುದೇ





ಉದಯವಾಹಿನಿ ಚಿತ್ರ

ನಮ್ಮ ನೈಸರ್ಗಿಕ ಅರಣ್ಯದಲ್ಲಿ ಎಂಬ ವಾಸ್ತವವನ್ನು ಮನದಟ್ಟು ಮಾಡಬೇಕಿದೆ' ಎಂದು ಅರಣ್ಯದ ಕುರಿತು ವಿಶೇಷ ಉಪನ್ಯಾಸ ನೀಡಿದ ಪರಿಸರ ತಜ್ಞ ಬಿ.ಎಂ. ಕುಮಾರಸ್ವಾಮಿ ಹೇಳಿದರು. ನಮ್ಮ ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ ಪ್ರತಿ ಪ್ರದೇಶದಲ್ಲೂ ಕನಿಷ್ಠ ಶೇ.33ರಷ್ಟು ಅರಣ್ಯವಿರಬೇಕು. ಆದರೆ ಸರ್ಕಾರ ಅಡಿಕೆ ತೋಟ, ರಬ್ಬರ್ ನೆಡುತೋಪುಗಳನ್ನು ಸಹ ಅರಣ್ಯ ಪ್ರದೇಶವೆಂದು ಪರಿಗಣಿಸುವ ತಪ್ಪು ಮಾಡುತ್ತಿದೆ. ಇದರಿಂದಾಗಿ ನೈಸರ್ಗಿಕ ಅರಣ್ಯದ ಅಸ್ತಿತ್ವಕ್ಕೆ ಸಂಚಕಾರ ಬಂದಿದೆ' ಎಂದರು. ಯಾವುದೆ ಅಭಿವೃದ್ಧಿ ಯೋಜನೆ ರೂಪಿಸುವಾಗ ಅರಣ್ಯ ನಾಶದ ನಷ್ಟವನ್ನು ಸರ್ಕಾರ ಲೆಕ್ಕಾಚಾರ ಹಾಕುವ ಕ್ರಮ ಅವೈಜ್ಞಾನಿಕವಾಗಿದೆ. ಏಕೆಂದರೆ ಅರಣ್ಯವೆಂದರೆ ಕೇವಲ ಮರಗಳಷ್ಟೆ ಎಂದು ಪರಿಗಣಿಸಲಾಗುತ್ತಿದೆ ಎಂದರು.

## ಉದ್ಯೋಗ ಖಾತ್ರಿ ಯೋಜನೆ ಶೀಘ್ರವೇ ನೀಡಲು ಒತ್ತಾಯ

• ಉದಯವಾಹಿನಿ ಚಿತ್ತಾಪುರ

ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸ ಮಾಡಿದ ಕಾರ್ಮಿಕರಿಗೆ ಶೀಘ್ರವೇ ವೇತನ ಪಾವತಿ ಮಾಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆಯ ತಾಲ್ಲೂಕ ಅಧ್ಯಕ್ಷ ರಾಜಕುಮಾರ ಯರಗೋಳ ಅವರು ಆಗ್ರಹಿಸಿದ್ದಾರೆ.

ಪಟ್ಟಣದ ಬಜಾಜ ಕಾಂಪ್ಲೆಕ್ಸ್ ಮೀಟಿಂಗ್ ಹಾಲ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ತಾಲ್ಲೂಕಿನಾದ್ಯಂತ ಸಾವಿರಾರು ಜನ ಕೂಲಿ ಕಾರ್ಮಿಕರು ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡಿದ್ದು ಪ್ರತಿ ದಿನಕ್ಕೆ 349 ರೂಪಾಯಿಯಂತೆ ಒಟ್ಟು ಎರಡು ತಿಂಗಳ ವೇತನ ನೀಡದೆ ಇರುವುದರಿಂದ ಕೂಲಿ ಕಾರ್ಮಿಕರು ಕಂಗಾಲಾಗಿದ್ದು ಬಡವರು ತಮ್ಮ ಸಂಸಾರ ನಡೆಸಲು ದುಸ್ತರವಾಗಿದೆ.

ಅಧಿಕಾರಿಗಳು ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡಿದ ಬಡ ಕೂಲಿ ಕಾರ್ಮಿಕರ ವೇತನ ಅತಿ ಬೇಗನೆ ಪಾವತಿ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

## ಗುರಿ ಸಾಧನೆಗೆ ನಿರಂತರ ಶ್ರಮ ಅಗತ್ಯ

• ಉದಯವಾಹಿನಿ ಉಡುಪಿ

ನಿರಂತರ ಶ್ರಮ, ಪ್ರಾಮಾಣಿಕತೆ, ಸಮಗ್ರತೆ , ಸಾಮಾಜಿಕವಾಗಿ ತೊಡಗಿಕೊಳ್ಳುವಿಕೆಯಿಂದ ವಿದ್ಯಾರ್ಥಿಗಳಿಗೆ ಗುರಿ ಸಾಧಿಸುವ ಕನಸು ನನಸಾಗಲು ಸಾಧ್ಯ ಎಂದು ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್. ಇಂದಿರೇಶ ಹೇಳಿದರು. ಉಡುಪಿಯ ವೈಕುಂಠ ಬಾಳಿಗಾ ಕಾನೂನು ಮಹಾವಿದ್ಯಾಲಯದಲ್ಲಿ ಶುಕ್ರವಾರ ಆಯೋಜಿಸಿದ್ದ ಅಡ್ವಕೇಟ್ ಪಿ.ಶಿವಾಜಿ ಶೆಟ್ಟಿ ಸ್ಮಾರಕ 9ನೇ ರಾಷ್ಟ್ರ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡಿದರು.

ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿ ಪಿ. ಜ್ಯೋತಿಮಣಿ ಮಾತನಾಡಿ, ಅನ್ಯಾಯಕ್ಕೊಳಗಾದವರಿಗೆ ನ್ಯಾಯ ಕೊಡಿಸುವ ಮೂಲಕ ವಕೀಲರು ನೊಂದವರ ಕಣ್ಣೀರು ಒರೆಸುತ್ತಾರೆ. ವಕೀಲರಾಗುವವರಿಗೆ ಇಂತಹ ಅಣಕು ನ್ಯಾಯಾಲಯ ಸ್ಪರ್ಧೆಯು ವೃತ್ತಿ ನೈಪುಣ್ಯತೆ ಸಾಧಿಸಲು ಸಹಕಾರಿಯಾಗುತ್ತದೆ ಎಂದರು.

ಕಾಲೇಜಿನ ನಿರ್ದೇಶಕಿ ನಿರ್ಮಲಾ ಕುಮಾರಿ ಕೆ. ಅಧ್ಯಕ್ಷತೆ ವಹಿಸಿದ್ದರು. ಜಯಂತಿ ಪಿ. ಶಿವಾಜಿ ಶೆಟ್ಟಿ, ಸ್ಪರ್ಧೆಯ ಸಂಯೋಜಕಿ ಸುರೇಖಾ ಕೆ.. ವಕೀಲ ಶ್ರೀಧರ ಪಿ.ಎಸ್., ಸ್ಪರ್ಧೆಯ ಕಾರ್ಯದರ್ಶಿಗಳಾದ ಕೌಶಲ ಕಾಮತ್, ನಾ ಭಾಗವಹಿಸಿದ್ದರು. ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶ ಕಿರಣ ಎಸ್. ಗಂಗಣ್ಣವರ ಪಾಲ್ಗೊಂಡಿದ್ದರು.

ವಿದ್ಯಾರ್ಥಿನಿಯರಾದ ಶ್ರೀನಿಧಿ ಸಂಗಡಿಗರು ಪ್ರಾರ್ಥಿಸಿದರು. ಪ್ರಾಂಶುಪಾಲ ರಘುನಾಥ ಕೆ.ಎಸ್. ಸ್ವಾಗತಿಸಿದರು. ಕಾನೂನು ವಿದ್ಯಾರ್ಥಿಗಳಾದ ಸಿಮ್ರಾನ್ ಶೇಖ್, ಸಂಜನಾ ಎಸ್. ತೋಳೂರು, ಡಿಯಾನ್ ಕ್ವಾಡ್ರಸ್ ಅತಿಥಿಗಳನ್ನು ಪರಿಚಯಿಸಿದರು. ಸಾಯಿರಮ್ಯಾ ಆರ್. ಬೇಳೂರಕರ್ ನಿರೂಪಿಸಿದರು. ಸಹಾಯಕ ಪ್ರಾಂಶುಪಾಲ ಅಮೋಘ ಗಡಕರ್ ವಂದಿಸಿದರು. 3 ದಿನ ನಡೆಯಲಿರುವ ಸ್ಪರ್ಧೆಯಲ್ಲಿ 22 ರಾಜ್ಯಗಳಿಂದ ಕಾನೂನು ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.

## ಮಂಗಳೂರಿಗೂ ವಂದೇ ಭಾರತ್ ಸ್ಲೀಪರ್ ಬೋಗಿ

• ಉದಯವಾಹಿನಿ ಮಂಗಳೂರು

ಒಂದೆರಡು ತಿಂಗಳುಗಳಲ್ಲಿ ವಂದೇ ಭಾರತ್ ರೈಲಿಗೆ ಸ್ಲೀಪರ್ ಕೋಚ್‌ಗಳು ಬರಲಿದ್ದು, ಮಂಗಳೂರಿಗೂ ವಂದೇ ಭಾರತ್ ಸ್ಲೀಪರ್ ಕೋಚ್ ಸೌಲಭ್ಯ ಸಿಗಲಿದೆ' ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು. ಮಂಗಳೂರು ಸೆಂಟ್ರಲ್ ಕಬಕ ಪುತ್ತೂರು ಪ್ಯಾಸೆಂಜರ್ ರೈಲನ್ನು ಸುಬ್ರಹ್ಮಣ್ಯ ರೋಡ್‌ವರೆಗೆ ವಿಸ್ತರಿಸಲಾಗಿದ್ದು, ಸೋಮಣ್ಣ ಅವರು ಇಲ್ಲಿನ ಸೆಂಟ್ರಲ್ ರೈಲು ನಿಲ್ದಾಣದಲ್ಲಿ ಶನಿವಾರ ಈ ಸೇವೆಗೆ ಹಸಿರು ನಿಶಾನೆ ತೋರಿಸಿದರು.

ಇದಕ್ಕೂ ಮುನ್ನ ಸಮಾರಂಭದಲ್ಲಿ ಮಾತನಾಡಿದ ಅವರು, 'ಮಂಗಳೂರು ಜಂಕ್ಷನ್ ನಿಲ್ದಾಣ 19 ಕೋಟಿಯಲ್ಲಿ ಅಭಿವೃದ್ಧಿಗೊಳ್ಳುತ್ತಿದ್ದು, ಶೇ 85ರಷ್ಟು ಕಾಮಗಾರಿ ನಡೆದಿದೆ. ಆಗಸ್ಟ್‌ನಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ. ಇಲ್ಲಿನ ಸೆಂಟ್ರಲ್ ರೈಲು ನಿಲ್ದಾಣವನ್ನು ವಿಶ್ವದರ್ಜೆಯ ನಿಲ್ದಾಣವನ್ನಾಗಿ ಮೇಲ್ದರ್ಜೆಗೇರಿಸಲು ಶೀಘ್ರವೇ ಟೆಂಡರ್ ಆಹ್ವಾನಿಸಲಿದ್ದೇವೆ. ಕಾಮಗಾರಿ 2 ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ. ಸುಬ್ರಹ್ಮಣ್ಯ ರೋಡ್ ನಿಲ್ದಾಣವೂ ಅಮೃತ್ ಭಾರತ ಯೋಜನೆಯಡಿ ಅಭಿವೃದ್ಧಿಪಡಿಸಲಾಗುತ್ತಿದೆ' ಎಂದರು. ಜಿಲ್ಲೆಯಲ್ಲಿ ಅಗತ್ಯ ಇರುವ ಕಡೆಗೆ ರೈಲು ಮೇಲೇತುವೆ ಅಥವಾ



ಉದಯವಾಹಿನಿ ಚಿತ್ರ

ಕೆಳಸೇತುವೆ ಮಂಜೂರು ಮಾಡಲಿದ್ದೇವೆ.

ಹಿಂದೆ ಇದರ ಅರ್ಧದಷ್ಟು ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಬೇಕಿತ್ತು. ಈಗ ಇದರ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸಲಿದೆ. ಸುರಕ್ಷತಾ ಕ್ರಮಗಳ ಬಗ್ಗೆ ಇಲಾಖೆ ಹೆಚ್ಚಿನ ನಿಗಾವಹಿಸಿದೆ. ಅಪಘಾತಗಳ ಪ್ರಮಾಣ ಬಹಳ ಕಡಿಮೆ ಆಗಿದೆ. ಒಂದೇ ಹಳಿಯಲ್ಲಿ ಎರಡು ರೈಲುಗಳು ಏಕಾಏಕಿ ಮುಖಾಮುಖಿಯಾದರೂ ಡಿಕ್ಕಿ ಆಗುವುದನ್ನು ತಪ್ಪಿಸುವ ಕವಚ್ ವ್ಯವಸ್ಥೆ ರೂಪಿಸಲಾಗಿದೆ ಎಂದರು.

ಕ್ಯಾ.ಬ್ರಿಜೇಶ್ ಚೌಟ, ಮೀಟರ್ ಗೇಜ್ ಹಳಿ ಇದ್ದಾಗ ಮಂಗಳೂರು- ಸುಬ್ರಹ್ಮಣ್ಯ ನಡುವೆ ಪ್ಯಾಸೆಂಜರ್ ರೈಲು ಸಂಚರಿಸುತ್ತಿತ್ತು. ಸ್ಥಗಿತಗೊಂಡಿದ್ದ ಈ ಸೇವೆಯನ್ನು ಮತ್ತೆ ಪಡೆಯಲು ಸಾಕಷ್ಟು ಹೋರಾಟ ನಡೆಸಬೇಕಾಯಿತು. ವಿದ್ಯುದೀಕರಣ ಪೂರ್ಣಗೊಂಡ ಬಳಿಕ ಈ ರೈಲನ್ನು ಮೆಮು ರೈಲನ್ನಾಗಿ ಪರಿವರ್ತಿಸಬೇಕು. ಎಂದರು.

## ಕಟ್ಟಡಗಳು ಗಟ್ಟಿಯಾಗಿ ನಿಲ್ಲಲಿ, ಕಾರ್ಮಿಕರ ರಕ್ಷಣೆಗೆ ಒತ್ತು ಕೊಡಿ

• ಉದಯವಾಹಿನಿ ಬೀದರ

ಕಟ್ಟಡಗಳು ನಗರದಲ್ಲಿ ಗಟ್ಟಿಯಾಗಿ ನೆಲೆನಿಲ್ಲುವಂತೆ ನಿರ್ಮಿಸುವ ಬಹುದೊಡ್ಡ ಜವಾಬ್ದಾರಿ ಸಿವಿಲ್ ಇಂಜಿನಿಯರ್ ಅವರ ಮೇಲಿದೆ. ಜೊತೆಗೆ ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಕಾರ್ಮಿಕರಿಗೆ ಗ್ಲೌಜ್, ಶೂಸ್, ಹೆಲ್ಮೆಟ್ ಹಾಗೂ ಇನ್ನಿತರ ಸುರಕ್ಷಿತ ವಸ್ತುಗಳನ್ನು ನೀಡುವ ಅವಶ್ಯಕತೆ ಇದೆ ಎಂದು ಲೋಕಸಭಾ ಸದಸ್ಯ ಸಾಗರ ಖಂಡ್ರೆ ತಿಳಿಸಿದರು.

ಅಸೋಸಿಯೇಶನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್(ಇಂಡಿಯಾ) ವತಿಯಿಂದ ನಗರದ ಲಾವಣ್ಯ ಕನ್ವೆನ್ಶನ್ ಹಾಲ್‌ನಲ್ಲಿ ನಡೆಯುತ್ತಿರುವ ಮೂರು ದಿವಸಗಳ ಸ್ಪೈಕಾನ್-4 ರಾಷ್ಟ್ರೀಯ ವಿಚಾರ ಸಂಕಿರಣ ಹಾಗೂ ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ಕಾಲದಲ್ಲಿ ಪ್ರತಿಯೊಬ್ಬರೂ ಕೆರೆ ಹಾಗೂ ನದಿಯಲ್ಲಿ ಸಿಗುವ ರೇತಿ ಕಡೆಗೆ ಹೆಚ್ಚು ಗಮನ ಹರಿಸುತ್ತಾರೆ. ಇದರಿಂದ ಪ್ರಕೃತಿ ನಾಶವಾಗುತ್ತಿದೆ. ಅದಕ್ಕೂ ಮೀರಿ ರೋಬೊ ರೇತಿ ಹಾಗೂ ಇನ್ನಿತರ ಕಟ್ಟಿಗೆಯ ಕಟ್ಟಡದ ಕಡೆಗೆ ಒಲವು ತೋರುತ್ತಿಲ್ಲ. ನದಿಯ ರೇತಿಯಿಂದ ನೀರಿನೊಳಗಿನ ಜಲಚರ ಪ್ರಾಣಿಗಳು, ಭೂಮಿಯ ಒಡಲು ನಾಶವಾಗುತ್ತಿದೆ. ಆದ್ದರಿಂದ ಆಸ್ಟ್ರೇಲಿಯಾ ದೇಶದಂತೆ ಹಗುರವಾದ ವಸ್ತುಗಳಿಂದಲೂ ಕಟ್ಟಡ ನಿರ್ಮಾಣದ ಕಡೆಗೆ ಗಮನ ಹರಿಸಬೇಕೆಂದು ತಿಳಿಸಿದರು. ಸುರಕ್ಷಿತ ಕಟ್ಟಡಗಳ ನಿರ್ಮಾಣ, ಬಳಸುವ ವಸ್ತುಗಳ ಕುರಿತು ಬಹಳ ಮಾರ್ಮಿಕವಾಗಿ ಮೂರು ದಿವಸಗಳ ವಿಚಾರ ಸಂಕಿರಣ ಆಯೋಜನೆ ಮಾಡಿದ್ದು ಖುಷಿ ತಂದಿದೆ.

ಸಿವಿಲ್ ಇಂಜಿನಿಯರ್ ಹಾಗೂ ಸರ್ಕಾರ ಒಟ್ಟಾಗಿ ಸೇರಿಕೊಂಡು ರಸ್ತೆ, ಸಮುದಾಯ ಭವನ, ಶೌಚಾಲಯ, ಶಾಲೆಗಳ ಕಟ್ಟಡ ಹಾಗೂ ಇನ್ನಿತರ ಸರ್ಕಾರಿ ಕಟ್ಟಡಗಳ ಕೆಲಸ ಗುಣಮಟ್ಟದಿಂದ ಮಾಡಿದರೆ ಗಟ್ಟಿಮುಟ್ಟಾದ ಕಾಮಗಾರಿಗಳನ್ನು ಮಾಡಬಹುದು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಅಸೋಸಿಯೇಶನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್(ಇಂಡಿಯಾ)ದ ಅಧ್ಯಕ್ಷ ವೀರಶೆಟ್ಟಿ ಮಣಗೆ ಕಾರ್ಯಕ್ರಮದ ಯಶಸ್ವಿಗೆ ಸಾಕಷ್ಟು ಜನ ಉದ್ಯಮಿಗಳು ಹಾಗೂ ವಿವಿಧ ಕಟ್ಟಡ ನಿರ್ಮಾಣ ಸಾಮಗ್ರಿ ಮಾರಾಟದ ಅಂಗಡಿಗಳ ಮಾಲಿಕರು ಸಹಕಾರ ನೀಡಿದ್ದಾರೆ. ಒಂದು ಯಶಸ್ವೀ ಕಟ್ಟಡ ನಿರ್ಮಿಸುವಲ್ಲಿ ಸಿವಿಲ್ ಇಂಜಿನಿಯರ್ ಹಿಡಿದು ಕಾರ್ಮಿಕರವರೆಗೆ ಸಾಕಷ್ಟು ಜನರ ಪರಿಶ್ರಮ ಇರುತ್ತದೆ. ಹೀಗಾಗಿ ಜಿಲ್ಲೆಯಲ್ಲಿ ವಿನೂತನ ಕಟ್ಟಡಗಳ ನಿರ್ಮಾಣಕ್ಕೆ ಎಲ್ಲರೂ ಕೂಡಿ ಶ್ರಮಿಸೋಣ ಎಂದರು.





ಉದಯವಾಹಿನಿ ಚಿತ್ರ

> **ಕಟ್ಟಡಗಳ ಜೊತೆಗೆ ವ್ಯಕ್ತಿ ಭಾವನಾತ್ಮಕವಾಗಿ ಬೆಸೆದುಕೊಂಡಿರುತ್ತಾನೆ. ಹೀಗಾಗಿ ಒಮ್ಮೆ ನಿರ್ಮಿಸಿದ ಮನೆಯಲ್ಲಿ ನಾಲ್ಕು ತಲೆಮಾರಿನವರು ಜೀವಿಸುವಷ್ಟು ಬಾಳಿಕೆಗೆ ಬರಬೇಕೆಂದು ಜನರು ಆಸೆ ಪಡುತ್ತಾರೆ. ಹೀಗಾಗಿ ಪ್ರಕೃತಿ ಸ್ನೇಹಿ ವಸ್ತುಗಳನ್ನು ಬಳಸಿ ಕಟ್ಟಡಗಳನ್ನು ನಿರ್ಮಿಸಬೇಕು**
>
> -ಡಾ. ಶೈಲೇಂದ್ರ ಕೆ ಬೆಲ್ದಾಳೆ, ಶಾಸಕ

## ಈ ಬಾರಿ ಆಗಾಗ ಸುರಿಯುತ್ತಿರುವ ಬೇಸಿಗೆ ಮಳೆಯಿಂದಾಗಿ ಕೊಳವೆ ಬಾವಿಗಳಿಗೂ ಪರಿಹಾರ ಸಿಗುವ ನಿರೀಕ್ಷೆ
## ಕರಾವಳಿಯ ಬಹುತೇಕ ಕಡೆ ಉತ್ತಮ ಮಳೆ : ನೀರಿನ ದಾಹ ತಣಿಸಿದ ಬೇಸಿಗೆ ಮಳೆ

• ಉದಯವಾಹಿನಿ ಪುತ್ತೂರು

ಕಳೆದ 2 ವಾರಗಳಿಂದ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಬಹುತೇಕ ಕಡೆ ಸುರಿಯುತ್ತಿರುವ ಬೇಸಿಗೆ ಮಳೆಯು ನೀರಿನ ಪ್ರಶ್ನೆಗೆ ಉತ್ತರ ನೀಡುವ ನಿರೀಕ್ಷೆ ಹುಟ್ಟಿಸಿದೆ. ಈ ಬಾರಿ ಬೇಸಿಗೆ ಆರಂಭವಾದ ಬಳಿಕ ಅನೇಕ ಬಾರಿ ಸರಣಿ ಪ್ರಕಾರ ಮಳೆ ಸುರಿಯುತ್ತಿರುವ ಕಾರಣ ಈ ವರ್ಷದ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸದು ಎಂಬ ಭರವಸೆ ಮೂಡಿದೆ.

ಫೆಬ್ರವರಿ ತಿಂಗಳಲ್ಲಿ ನಾಲ್ಕಾರು ದಿನಗಳ ಕಾಲ ಮಳೆಯಾಗಿದ್ದರೆ, ಮಾರ್ಚ್‌ನಲ್ಲಿ ವಾರಗಟ್ಟಲೆ ಮಳೆಯಾಗಿತ್ತು. ಇದೀಗ ಏಪ್ರಿಲ್ ಆರಂಭದಿಂದಲೇ ನಾನಾ ಕಡೆ ಉತ್ತಮ ಮಳೆ ಸುರಿಯುತ್ತಿದೆ. ಕಳೆದ ಮೂರು ದಿನಗಳಿಂದ ಏಕರೂಪವಾಗಿ ಎಲ್ಲಕಡೆ ಸಂಜೆ ಹೊತ್ತು ಭರ್ಜರಿ ವರ್ಷಧಾರೆಯಾಗಿದೆ.

**ಸುಪುಷ್ಟ ಮಳೆ:** ಸುಳ್ಯ, ಕಡಬ ಮತ್ತು ಬೆಳ್ತಂಗಡಿ ತಾಲ್ಲೂಕುಗಳ ಪಶ್ಚಿಮ ಘಟ್ಟ ತಪ್ಪಲಲ್ಲಿ ಈ ಬಾರಿ ಬೇಸಿಗೆ ಮಳೆ ಭರ್ಜರಿಯಾಗಿ ಸುರಿದಿದೆ. ಜಿಲ್ಲೆಯ ಇತರ ಕಡೆಗಳಲ್ಲಿಸುರಿದ ಮಳೆಗಿಂತ 4 ಪಟ್ಟು ಹೆಚ್ಚು ಮಳೆ ಈ ಭಾಗದಲ್ಲಿಸುರಿದಿದೆ. ಮಾರ್ಚ್ ಕೊನೆಯ ವಾರದಿಂದ ಈ ಭಾಗದಲ್ಲಿನಿತ್ಯ ಸಂಜೆ ಮಳೆಯಾಗುತ್ತಿದೆ. ಉಳಿದಂತೆ ಪುತ್ತೂರು ತಾಲೂಕಿನಲ್ಲೂ ತೃಪ್ತಿಕರ ಮಳೆಯಾಗಿದ್ದರೆ, ಬಂಟ್ವಾಳದಲ್ಲಿಆಗೀಗೊಮ್ಮೆ ಭರ್ಜರಿ ವರ್ಷಧಾರೆಯಾಗಿದೆ.

**ನೀರಿನ ಸಭೆ:** ಮಾರ್ಚ್‌ನಲ್ಲಿ ಜಿಲ್ಲಾಮಟ್ಟದಲ್ಲಿ ಮಂಗಳೂರು ಪುತ್ತೂರು, ಸುಳ್ಯ, ಕಡಬ, ಬೆಳ್ತಂಗಡಿ, ಬಂಟ್ವಾಳಗಳಲ್ಲಿ ಕುಡಿಯುವ ನೀರಿನ ಸಂಬಂಧಿಸಿ ಆಯಾ ಶಾಸಕರ ನೇತೃತ್ವದಲ್ಲಿ ಅಧಿಕಾರಿಗಳ ಸಭೆ ನಡೆದಿದೆ.

ಕೆಡಿಪಿ ಸಭೆಗಳಲ್ಲಿ ನೀರಿನ ಮುನ್ನೆಚ್ಚರಿಕೆ ಬಗ್ಗೆ ಚರ್ಚೆ ನಡೆದಿದೆ. ಪುತ್ತೂರಿನಲ್ಲಿ ಶಾಸಕ ಅಶೋಕ್ ರೈ ಅವರು ಸತತ 2 ಸಭೆ ನಡೆಸಿ ಯಾವುದೇ ಕಾರಣಕ್ಕೂ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಬೇಕೆಂದು ಸೂಚಿಸಿದ್ದರು.

ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ಜಿಲ್ಲೆಯ ಗ್ರಾಮಾಂತರಗಳಲ್ಲೂ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತದೆ. ವಿಶೇಷವಾಗಿ ಕೊಳವೆ ಬಾವಿಗಳಿಂದ ನೀರು ಪೂರೈಸುವ ಗ್ರಾಪಂಗಳಲ್ಲಿಆತಂಕ ಉಂಟಾಗುತ್ತದೆ. ಪುತ್ತೂರು ನಗರದಲ್ಲೂ ಕೊಳವೆ ಬಾವಿ ಬತ್ತಿ ಹೋಗುವ ಅನೇಕ ಪ್ರಸಂಗಗಳು ಈ ಹಿಂದಿನ ವರ್ಷಗಳಲ್ಲಿ ನಡೆದಿವೆ. ಈ ಬಾರಿ ಆಗಾಗ ಸುರಿಯುತ್ತಿರುವ ಬೇಸಿಗೆ ಮಳೆಯಿಂದಾಗಿ ಕೊಳವೆ ಬಾವಿಗಳಿಗೂ ಪರಿಹಾರ ಸಿಗುವ ನಿರೀಕ್ಷೆ ಇದೆ.

ಕುಡಿಯುವ ನೀರಿನ ವಿಚಾರದಲ್ಲಿ ಅಧಿಕಾರಿಗಳ ಜತೆ ಸರಣಿ ಸಭೆ ನಡೆಸಿ ಸೂಚನೆ ನೀಡಲಾಗಿದೆ.

ಪ್ರತೀ ಪಂಚಾಯಿತಿ ವ್ಯಾಪ್ತಿಯ ನೀರಿನ ಸಮಸ್ಯೆ ನಿರ್ವಹಣೆ ಹೊಣೆ ಆಯಾ ಪಿಡಿಒಗೆ ಸೇರಿದ್ದು. ಸಮಸ್ಯೆ ಉಂಟಾಗದಂತೆ ಅವರೇ ಸೂಕ್ತ ಮುನ್ನೆಚ್ಚರಿಕೆ ವಹಿಸಿಕೊಳ್ಳಬೇಕು. ಅಗತ್ಯವಿದ್ದ ಕಡೆ ಕೊಳವೆ ಬಾವಿ ಮರುಪೂರಣ ಮಾಡಬೇಕು.


ತುರ್ತು ಪರಿಸ್ಥಿತಿ ಇದ್ದರೆ ಹೊಸ ಬೋರ್‌ವೆಲ್ ಕೊಡಲಾಗುವುದು ಎಂದಿದ್ದಾರೆ ಅಶೋಕ್ ರೈ, ಶಾಸಕ, ಪುತ್ತೂರು.

ಮಳೆಯ ಕಾರಣದಿಂದ ಕುಮಾರಧಾರ ನದಿಯಲ್ಲಿ ನೀರಿನ ಹರಿವು ಹೆಚ್ಚಿದೆ. ಪುತ್ತೂರು ನಗರಸಭೆಗೆ ನೀರುಣಿಸುವ ನೆಕ್ಕಿಲಾಡಿ ಕಿಂಡಿ ಅಣೆಕಟ್ಟಿನಲ್ಲೂನೀರಿನ ಪ್ರಮಾಣ ಹೆಚ್ಚಾಗಿದೆ.

ಈ ಬಾರಿ ಬೇಸಿಗೆಯಲ್ಲಿನೀರಿನ ಸಮಸ್ಯೆ ಅಷ್ಟಾಗಿ ತಟ್ಟದು ಎಂದು ಈಗಿನ ಸ್ಥಿತಿ ನೋಡಿ ಅಂದಾಜಿಸಬಹುದು. ಆದರೂ ನಾವು ಪರಿಸ್ಥಿತಿ ಮೇಲೆ ನಿರಂತರ ನಿಗಾ ಇಟ್ಟಿರುತ್ತೇವೆ ಎಂದಿದ್ದಾರೆ ಮಧು ಎಸ್.ಮನೋಹರ್, ಪೌರಾಯುಕ್ತ, ನಗರಸಭೆ ಪುತ್ತೂರು.

### ಅಡಕೆ ಬೆಳೆಗಾರರು ಖುಷ್

ಸುಳ್ಯ, ಪುತ್ತೂರು, ಬೆಳ್ತಂಗಡಿ ತಾಲ್ಲೂಕಿನ ಬಹುಪಾಲು ಅಡಕೆ ಬೆಳೆಗಾರರು ಈ ಬಾರಿ ನೀರಾವರಿ ವಿಚಾರದಲ್ಲಿಖುಷಿಯಿಂದಿದ್ದಾರೆ. ಅದರಲ್ಲೂಸುಳ್ಯ ತಾಲ್ಲೂಕಿನ ರೈತರಿಗೆ ಪಂಪ್ ಚಾಲೂ ಮಾಡುವ ಸಂದರ್ಭವೇ ಕಡಿಮೆಯಾಗಿದೆ. ವಾರಕ್ಕೆ ಎರಡು ಮೂರು ಭರ್ಜರಿ ಮಳೆಯಾದರೆ ಅಡಕೆ ತೋಟಕ್ಕೆ ನೀರು ಹಾಯಿಸುವ ಅನಿವಾರ್ಯತೆಯೇ ಇಲ್ಲ. 3 ವರ್ಷಗಳ ಹಿಂದೊಮ್ಮೆ ಬೇಸಿಗೆಯಲ್ಲಿಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು ಎನ್ನುತ್ತಾರೆ ಅಡಕೆ ಬೆಳೆಗಾರ ರವೀಂದ್ರ ರೈ ಪುತ್ತೂರು.



ಉದಯವಾಹಿನಿ ಚಿತ್ರ

- ಏಪ್ರಿಲ್ ಆರಂಭದಿಂದಲೇ ನಾನಾ ಕಡೆ ಉತ್ತಮ ಮಳೆ ಸುರಿಯುತ್ತಿದೆ.
- ಕಳೆದ ಮೂರು ದಿನಗಳಿಂದ ಏಕರೂಪವಾಗಿ ಎಲ್ಲಕಡೆ ಸಂಜೆ ಹೊತ್ತು ಭರ್ಜರಿ ವರ್ಷಧಾರೆಯಾಗಿದೆ.
- ಈ ಬಾರಿ ಆಗಾಗ ಸುರಿಯುತ್ತಿರುವ ಬೇಸಿಗೆ ಮಳೆಯಿಂದಾಗಿ ಕೊಳವೆ ಬಾವಿಗಳಿಗೂ ಪರಿಹಾರ ಸಿಗುವ ನಿರೀಕ್ಷೆ ಇದೆ.

### ತುಂಬೆಗೆ ಹರಿವು ಹೆಚ್ಚಳ ನಿರೀಕ್ಷೆ

ನಿರಂತರ ಸುರಿದ ಬೇಸಿಗೆ ಮಳೆಯಿಂದಾಗಿ ಜಿಲ್ಲೆಯ ಜೀವ ನದಿಗಳ ಪಾತ್ರದಲ್ಲಿ ನೀರಿನ ಆದ್ಯತೆ ಉಂಟಾಗುತ್ತಿದೆ. ಮುಂದಿನ ದಿನಗಳಲ್ಲೂ ಬೇಸಿಗೆ ಮಳೆ ಸುರಿಯುತ್ತಿದ್ದರೆ ನದಿಯೊಡಲು ಭಣಗುಡುವ ಸನ್ನಿವೇಶ ತಪ್ಪಲಿದೆ ಮಾತ್ರವಲ್ಲ ಮಳೆಯ ಕಾರಣದಿಂದ ತುಂಬೆ ಡ್ಯಾಂನ ನೀರಿನ ಸಂಗ್ರಹಕ್ಕೆ ವರದಾನವಾಗಲಿದೆ. ಇದು ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕುಡಿಯುವ ನೀರು ಪೂರೈಕೆಯ ಚಿಂತೆಯನ್ನು ಕಡಿಮೆ ಮಾಡಲಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ ಮತ್ತು ನೀವು ಇದನ್ನು ಬಾಕಿಯಿರುವ ಕೆಲಸಗಳನ್ನು ಪೂರ್ಣಗೊಳಿಸಲು ಬಳಸಬೇಕು. ನೀವು ಹಣಕಾಸಿನ ಲಾಭ ತರುವ ಅದ್ಭುತವಾದ ಹೊಸ ಕಲ್ಪನೆಗಳನ್ನು ಪ್ರಸ್ತುತಪಡಿಸುತ್ತೀರಿ.

**ವೃಷಭ** ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ. ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ.

**ಮಿಥುನ** ರಕ್ತದೊತ್ತಡವಿರುವ ರೋಗಿಗಳು ತಮ್ಮ ರಕ್ತದೊತ್ತಡ ಕಡಿಮೆ ಮಾಡಲು ಮತ್ತು ಕೊಲೆಸ್ಟರಾಲ್ ನಿಯಂತ್ರಣದಲ್ಲಿರಿಸಲು ಕೆಂಪು ವೈನ್ ತೆಗೆದುಕೊಳ್ಳಬಹುದು. ಇದು ಅವರಿಗೆ ಮತ್ತಷ್ಟು ವಿಶ್ರಾಂತಿ ತರುತ್ತದೆ.

**ಕರ್ಕಾಟಕ** ಕೆಲವು ಕುಟುಂಬದ ಸದಸ್ಯರು ತಮ್ಮ ಅಸೂಯೆಯ ವರ್ತನೆಯಿಂದ ನಿಮಗೆ ಕಿರಿಕಿರಿ ಮಾಡಬಹುದು. ಆದರೆ ತಾಳ್ಮೆ ಕಳೆದುಕೊಳ್ಳುವುದು ಬೇಡ. ಇಲ್ಲದಿದ್ದರೆ ಪರಿಸ್ಥಿತಿ ನಿಯಂತ್ರಣ ಮೀರಬಹುದು.

**ಸಿಂಹ** ನಿಮ್ಮ ಸ್ನೇಹಿತರು ನಿಮಗೆ ಅವರ ಅವಶ್ಯಕತೆ ಅತ್ಯಂತ ಹೆಚ್ಚಿದ್ದಾಗ ನಿಮ್ಮನ್ನು ನಿರಾಸೆಗೊಳಿಸಬಹುದು. ನಿಮ್ಮ ಹೃದಯಕ್ಕೆ ಪ್ರಿಯವಾಗುವ ಯಾರನ್ನಾದರೂ ಸಂಧಿಸುವ ಅವಕಾಶಗಳು ಇಂದು ಬಲವಾಗಿವೆ.

**ಕನ್ಯಾ** ನಿಮ್ಮ ಒತ್ತಡ ನಿವಾರಿಸಲು ಕುಟುಂಬದ ಸದಸ್ಯರ ಬೆಂಬಲ ಪಡೆಯಿರಿ. ಅವರ ಸಹಾಯವನ್ನು ಗೌರವದಿಂದ ಸ್ವೀಕರಿಸಿ. ನೀವು ಭಾವನೆಗಳು ಮತ್ತು ಒತ್ತಡಗಳನ್ನು ಒಳಗೆ ಅದುಮಿಡಬಾರದು.

**ತುಲಾ** ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ಹೂಡಿಕೆ ಮಾಡುವುದು ಅನೇಕ ಬಾರಿ ನಿಮಗೆ ಪ್ರಯೋಜನಕಾರಿಯೆಂದು ಸಾಬೀತುಪಡಿಸುತ್ತದೆ.

**ವೃಶ್ಚಿಕ** ಸಂತೃಪ್ತಿಯ ಜೀವನಕ್ಕಾಗಿ ನಿಮ್ಮ ಮಾನಸಿಕ ದೃಢತೆಯನ್ನು ಸುಧಾರಿಸಿ. ಹಣವನ್ನು ಬೆಟ್ಟಿಂಗ್‌ನಲ್ಲಿ ಖರ್ಚು ಮಾಡಿದವರು ನಷ್ಟ ಅನುಭವಿಸುವ ಸಾಧ್ಯತೆಯಿದೆ. ಬೆಟ್ಟಿಂಗ್‌ನಿಂದ ದೂರವಿರಲು ನಿಮಗೆ ಸೂಚಿಸಲಾಗಿದೆ.

**ಧನಸ್ಸು** ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ. ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೋರುತ್ತದೆ. ಇಂದು ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು.

**ಮಕರ** ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು ಮತ್ತು ನೀವು ಹಣದಿಂದ ಲಾಭ ಪಡೆಯಬಹುದು.

**ಕುಂಭ** ಪ್ರಭಾವಿ ಮತ್ತು ಪ್ರಮುಖ ಜನರೊಡನೆ ನಿಮ್ಮ ಬಾಂಧವ್ಯವನ್ನು ಸುಧಾರಿಸಲು ಒಂದು ಪರಿಪೂರ್ಣ ಅವಕಾಶವಾಗಿರುತ್ತದೆ. ಪ್ರೀತಿಯ ಸಂಕಟವನ್ನು ಎದುರಿಸುವ ಸಾಧ್ಯತೆಗಳು ಇಂದು ಹೆಚ್ಚಿವೆ.

**ಮೀನ** ಸ್ನೇಹಿತನ ಜೊತೆಗಿನ ನಿಮ್ಮ ಅಪಾರ್ಥ ಕೆಲವು ಅಹಿತಕರ ಪ್ರತಿಕ್ರಿಯೆಗಳನ್ನು ಉಂಟುಮಾಡಬಹುದು – ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ಸಮತೋಲಿತ ನೋಟ ಹೊಂದಿ.

# ಮಹಿಳೆಯರು ಸರಕಾರದ ಪ್ರತಿಯೊಂದು ಯೋಜನೆಗಳು ಸದುಪಯೋಗ ಪಡೆದುಕೊಳ್ಳಲು: ನರಸಮ್ಮ ಲಕ್ಷ್ಮಣ ಆವುಂಟಿ ಕರೆ

• ಉದಯವಾಹಿನಿ, ಚಿಂಚೋಳಿ

ಮಹಿಳೆಯರ ಕಲ್ಯಾಣಕ್ಕಾಗಿ ಸರ್ಕಾರಗಳು ಹಲವಾರು ಯೋಜನೆಗಳು ಜಾರಿಗೆ ತಂದಿದ್ದು ಪ್ರತಿಯೊಬ್ಬ ಮಹಿಳೆಯರು ಯೋಜನೆಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಜನಜಾಗೃತಿ ವೇದಿಕೆ ಉಪಾಧ್ಯಕ್ಷೆ ಹಾಗೂ ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷೆ ನರಸಮ್ಮ ಲಕ್ಷ್ಮಣ ಆವುಂಟಿ ಕರೆ ನೀಡಿದರು.

ತಾಲ್ಲೂಕಿನ ಐನೊಳ್ಳಿ ಗ್ರಾಮದ ಶ್ರೀ ರಾಮ ಲಿಂಗೇಶ್ವರ ದೇವಾಲಯದ ಆವರಣದಲ್ಲಿ ಜಿಲ್ಲಾ ಪಂಚಾಯತ ಮತ್ತು ತಾಲ್ಲೂಕಾ ಪಂಚಾಯತ್ ಹಾಗೂ ಗ್ರಾಮ ಪಂಚಾಯತ ಮತ್ತು ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಮೈಸೂರ ಸಂಯುಕ್ತ ಆಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾ ಚರಣೆ ಅಂಗವಾಗಿ ಹಮ್ಮಿಕೊಂಡ ವಿಶೇಷ ಮಹಿಳಾ ಗ್ರಾಮ ಸಭೆಯನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು. ರಾಜ್ಯ ಸರ್ಕಾರ ಜಾರಿಗೆ ತಂದ ಪಂಚ


ಉದಯವಾಹಿನಿ ಚಿತ್ರ

ಗ್ಯಾರಂಟಿ ಯೋಜನೆಗಳಾದ ಅನ್ನಭಾಗ್ಯ, ಗೃಹ ಲಕ್ಷ್ಮಿ, ಗೃಹ ಜ್ಯೋತಿ, ಶಕ್ತಿ ಯೋಜನೆ,ಯುವನಿಧಿ, ಸ್ವಸಹಾಯ ಸಂಘಗಳಿಗೆ ಸಹಾಯಧನ,ಉದ್ಯೋಗಿನಿ ಸೇರಿದಂತೆ ಮುಂತಾದ ಯೋಜನೆಗಳು ಮಹಿಳೆಯರ ಬದುಕಿಗೆ ಕುಟುಂಬ ನಿರ್ವಹಣೆಗೆ ಅನೂಕುಲವಾಗುತ್ತಿದ್ದು ಸದ್ಬಳಕೆ ಮಾಡಿಕೊಳ್ಳಬೇಕು.

ಹೆಣ್ಣು ಅಬಲೆಯಲ್ಲ ಸಬಲೆ ಹೆಣ್ಣಿಗೆ ಸಮಾಜದಲ್ಲಿ ಗೌರವವಾದ ಸ್ಥಾನ ಮಾನವಿದೆ,ಪ್ರತಿಯೊಂದು ಕ್ಷೇತ್ರದಲ್ಲಿ ಮಹಿಳೆ ಮುಂದೆ ಬಂದು ಒಂದಿಲ್ಲಾ ಒಂದು ಸಾಧನೆ ಮಾಡುತ್ತಿದ್ದಾಳೆ, ಸಾಧನೆ ಜೋತೆ ತನ್ನ ಕುಟುಂಬ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾಳೆ. ಕೌಶಲ್ಯ ಅಬಿವೃದ್ದಿ ಜೀವನೋಪಯ ಯೋಜನೆ ಆಡಿಯಲ್ಲಿ ಗ್ರಾಮ ಪಂಚಾಯತ ಮಟ್ಟದಲ್ಲಿ ಸಂಜೀವಿನಿ ಸ್ವಸಹಾಯ ಸಂಘಗಳಿಗೆ ಆರ್ಥಿಕವಾಗಿ ಹಲವಾರು ರೀತಿಯ ಸೌಲಭ್ಯಗಳು ನೀಡುತ್ತಿದ್ದು ಅದರ ಸದುಪಯೋಗ ಪ್ರತಿಯೊಬ್ಬ ಮಹಿಳೆಯರು ಪಡೆಯಲು ಕರೆ ನುಡಿದರು.

ಈ ಸಂದರ್ಭದಲ್ಲಿ ಐನೊಳ್ಳಿ ಗ್ರಾ.ಪಂ.ಅಧ್ಯಕ್ಷೆ ಶ್ರೀದೇವಿ ಮೇತ್ರಿ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ. ಉಪಾಧ್ಯಕ್ಷೆ ಸುಕೀರ್ತಾ, ಗ್ರಾ.ಪಂ. ಪಿಡಿಓ ಈರಣ್ಣಾ,ಆರ್. ಎಲ್‌ಎಚ್. ಪಿ.ಸಂಸ್ಥೆಯ ನಿರ್ದೇಶಕಿ ಸರೋಜಾ ಬಾಯಿ ದೊಡ್ಡಿ, ಆರೋಗ್ಯ ಇಲಾಖೆಯ ಗುರುಬಸ್ಸಮ್ಮ, ಒಕ್ಕೊಟದ ಶಕುಂತಲಾ, ಆಯುಶಾಬೇಗಂ,ಶ್ರೀ ದೇವಿ, ಜಯಶ್ರೀ, ಶಬಾನಾ,ನರಸಮ್ಮ, ನಿಲಮ್ಮ, ಸೇರಿದಂತೆ ಸ್ವಸಾಹಾಯ ಸಂಘದ ಪದಾದಿಕಾರಿಗಳು ಸದಸ್ಯರು ಮಹಿಳೆಯರು ಅನೇಕರಿದ್ದರು.

# ಗ್ರಾಪಂ ಅಧ್ಯಕ್ಷರ ಮೇಲೆ ಮಾರಣಾಂತಿಕ ಹಲ್ಲೆ

• ಉದಯವಾಹಿನಿ, ಆಳಂದ

ತಾಲ್ಲೂಕಿನ ಕೊಡಲಹಂಗರಗಾ ಗ್ರಾಮದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷ ಶಿವರಾಯ ನಡಗೇರಿ ಸೇರಿ ಪುತ್ರ ಮತ್ತು ಕಿರಿಯ ಸೊಸೆಯ ಮೇಲೆ ಮೇಲೆ ಹಣದ ವಿವಾದದ ಹಿನ್ನೆಲೆಯಲ್ಲಿ ಅಧ್ಯಕ್ಷರ ಹಿರಿಯ ಸೊಸೆಯ ಸಂಬಂಧಿಕರೆ ಮಾರಣಾಂತಿಕ ಹಲ್ಲೆ ನಡೆಸಿದ ಘಟನೆ ವರದಿಯಾಗಿದೆ.

ಈ ದುರ್ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿರುವ ಅಧ್ಯಕ್ಷ ಶಿವರಾಯ ನಡಗೇರಿ, ಪುತ್ರ ರಾಜು ನಡಗೇರಿ ಅವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಕರಣದ ವಿವರಗಳ ಪ್ರಕಾರ, ಶಿವರಾಯ ನಡಗೇರಿ ಅವರ ಹಿರಿಯ ಮಗನ ನಿಧನದ ನಂತರ ಅವರ ಸೊಸೆಯ ಬಂಧುಗಳೊಂದಿಗೆ ಹಣಕಾಸಿನ ಒಪ್ಪಂದವೊಂದು ಮಾಡಿಕೊಳ್ಳಲಾಗಿತ್ತು. ಆದರೆ, ಒಪ್ಪಂದದಂತೆ ನಿಗದಿತ ಸಮಯಕ್ಕೆ ಹಣವನ್ನು ಪಾವತಿಸದ ಕಾರಣ ಹಾಗೂ ಮೂರು ತಿಂಗಳ ಹಿಂದೆ ಹೃದಯ ಚಿಕಿತ್ಸೆಗೆ ಒಳಗಾಗಿದ್ದ ಕಾರಣ


ಉದಯವಾಹಿನಿ ಚಿತ್ರ

ಹಣ ನೀಡಲಾಗಿರಲಿಲ್ಲ. ಆದರೆ ಆಕ್ರೋಶಗೊಂಡ ಸೊಸೆಯ ತರವು ಕೊಡಲಂಗರಗಾ ಗ್ರಾಮದಲ್ಲಿನ ಬಂಧುಗಳೇ ಇವರ ಮೇಲೆ ದಾಳಿ ನಡೆಸಿದ್ದಾರೆ ಎಂದು ತಿಳಿದು ಬಂದಿದೆ.

ಈ ಹಲ್ಲೆಯಲ್ಲಿ ಗಂಭೀರ ಗಾಯಗಳನ್ನು ಎದುರಿಸಿದ ಅಧ್ಯಕ್ಷರ ಸ್ಥಿತಿ ಚಿಂತಾಜನಕವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಕುರಿತು ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಘಟನೆಯ ಬಗ್ಗೆ ತನಿಖೆ ಆರಂಭಿಸಿದ್ದು, ಆರೋಪಿಗಳನ್ನು ಗುರುತಿಸಿ ಕಾನೂನು ಕ್ರಮಕ್ಕೆ ಒಳಪಡಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದಾರೆ.

### ನನ್ನ ಮತ ಮಾರಾಟಕ್ಕಿಲ್ಲ –ಮತದಾರರ ಜಾಗೃತಿ ಆಂದೋಲನ ಕಾರ್ಯಕ್ರಮ

# ಪ್ರತಿಯೊಂದು ಮತಕ್ಕೂ ಮೌಲ್ಯವಿದೆ: ಡಾ.ವಿಜಯಕುಮಾರ

• ಉದಯವಾಹಿನಿ, ಕಲಬುರಗಿ

ನಗರದ ಜೇವರ್ಗಿ ರಸ್ತೆಯಲ್ಲಿರುವ ಎಂ.ಎಸ್. ದೇಸಾಯಿ ಪದವಿ ಮಹಾವಿದ್ಯಾಲಯದಲ್ಲಿ ಭಾರತೀಯ ಚುನಾವಣಾ ಸುಧಾರಣಾ ಹೋರಾಟ ಸಮಿತಿ ವತಿಯಿಂದ ನನ್ನ ಮತ ಮಾರಾಟಕ್ಕಿಲ್ಲ –ಮತದಾರರ ಜಾಗೃತಿ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ನೂತನ ವಿದ್ಯಾಲಯ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ವಿಜಯ ಕುಮಾರ ಗೊತಗಿಕರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ, ದೇಶದ ಪ್ರತಿಯೊಬ್ಬ ಪ್ರಜೆಯ ಮತಕ್ಕೆ ಅತ್ಯಮೂಲ್ಯವಾದ ಮೌಲ್ಯವಿದ್ದು ಪ್ರತಿಯೊಬ್ಬರ ಮತದಿಂದ ದೇಶದ ಭವಿಷ್ಯವನ್ನೇ ನಿರ್ಮಾಣ ಮಾಡುವ ಶಕ್ತಿ ಇದ್ದು ಪ್ರತಿಯೊಬ್ಬರೂ ಚುನಾವಣೆಗಳಲ್ಲಿ ಮತ ಚಲಾಯಿಸುವಾಗ ಅತ್ಯಂತ ವಿವೇಚನೆಯಿಂದ ಮತ ಚಲಾಯಿಸಬೇಕು ಮತ್ತು ದೇಶದ ಭವಿಷ್ಯದಲ್ಲಿಯೇ ನಮ್ಮೆಲ್ಲರ ಭವಿಷ್ಯ ಅಡಗಿದೆ ಎಂಬುದನ್ನು ನಾವೆಲ್ಲರೂ ಅರಿತುಕೊಳ್ಳಬೇಕು, ವಿದ್ಯಾರ್ಥಿಗಳು ಮತದಾರ ಪಟ್ಟಿಯಲ್ಲಿ ಪ್ರತಿಯೊಬ್ಬರು ತಮ್ಮ ಹೆಸರನ್ನು ನೋಂದಾಯಿಸಿ, ಚುನಾವಣೆಯಲ್ಲಿಯೂ ತಪ್ಪದೇ ಯಾವುದೇ ಆಸೆ– ಆಮಿಷಕ್ಕೊಳ್ಳಲಾಗದೆ ಒಳ್ಳೆಯ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕು


ಉದಯವಾಹಿನಿ ಚಿತ್ರ

> ರಾಜಕಾರಣದಲ್ಲಿ ಇತ್ತೀಚಿಗೆ ಕ್ರಿಮಿನಲ್ ಆರೋಪ ಹಿನ್ನಲೆ ಉಳ್ಳವರು ಲೋಕಸಭೆ ವಿಧಾನಸಭೆಗಳಲ್ಲಿ ಆಯ್ಕೆಯಾಗುತ್ತಿದ್ದು ಇದೇ ರೀತಿ ಮುಂದುವರೆದರೆ ಇದರಿಂದ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಕಾದಿದ್ದು ಇದನ್ನು ತಡೆಗಟ್ಟಬೇಕಾದರೆ ಕ್ರಿಮಿನಲ್ ಆರೋಪ ಹಿನ್ನೆಲೆ ಉಳ್ಳವರಿಗೆ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಇರದಂತೆ ಮಾಡಲು ಚುನಾವಣಾ ಆಯೋಗ ಹೊಸ ಕಾನೂನನ್ನು ತರಬೇಕಾಗಿದೆ, ಇದರಿಂದ ರಾಜಕೀಯ ಶುದ್ದೀಕರಣಗೊಳ್ಳುತ್ತದೆ
> –ಶಿವಶರಣಪ್ಪ ಪೂಜಾರಿ, ರಾಜ್ಯಶಾಸ್ತ್ರ ಉಪನ್ಯಾಸಕರಾದ

ಎಂದು ತಿಳಿಸಿದರು. ಇವತ್ತು ದೇಶದಲ್ಲಿ ಅದೆಷ್ಟೋ ಜನರು ಚುನಾವಣೆಯಲ್ಲಿ ಹಣಕ್ಕಾಗಿ ಹಾಗೂ ಇತರೆ ಆಸೆ ಆಮೀಷಗಳಿಗಾಗಿ ಬಲಿಯಾಗಿ ಮತದಾನ ಮಾಡುತ್ತಿರುವುದು ಪ್ರಜಾಪ್ರಭುತ್ವಕ್ಕೆ ಮಾರಕ ಎಂದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಭಾರತೀಯ ಚುನಾವಣಾ ಸುಧಾರಣಾ ಹೋರಾಟ ಸಮಿತಿ ಕಲಬುರಗಿ ಸಂಸ್ಥಾಪಕರಾದ ರಮೇಶ ಆರ್ ದುತ್ತರಗಿ ಮಾತನಾಡುತ್ತಾ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯನ್ನು ಸುಧಾರಿಸುವದಕ್ಕಾಗಿ ದೇಶದ ಪ್ರಜ್ಞಾವಂತರು ಸಾಮಾಜಿಕ ಹಾಗೂ ರಾಜಕೀಯ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕಾಗಿದೆ.

ಯುವ ಜನತೆ ದುಶ್ಚಟಗಳಿಗೆ ದಾಸರಾಗದೆ ಒಳ್ಳೆಯ ಶಿಕ್ಷಣವನ್ನು ಪಡೆದು ಉತ್ತಮ ನಾಗರಿಕರಾಗಬೇಕು.

ವಿದ್ಯಾರ್ಥಿ ಮೌಲಾಲಿ ಸ್ವಾಗತಿಸಿದರು

> ವಿದ್ಯಾರ್ಥಿ ಜೀವನದಲ್ಲಿ ಯುವ ಜನಾಂಗ ಸಮಯದ ಮಹತ್ವವನ್ನು ಅರಿತುಕೊಂಡು ವಿದ್ಯಾಭ್ಯಾಸ ಮಾಡಿದರೆ ಯುವಕರ ಭವಿಷ್ಯ ಉಜ್ವಲವಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗಳು ತಪ್ಪದೇ ಪ್ರತಿಯೊಂದು ತರಗತಿಯಲ್ಲಿ ಹಾಜರಿದ್ದು ವಿದ್ಯಾರ್ಥಿಗಳು ತಮಗೆ ಏನಾದರೂ ತರಗತಿಗಳಲ್ಲಿ ಸಮಸ್ಯೆಗಳಿದ್ದರೆ ತಮ್ಮ ಉಪನ್ಯಾಸಕರನ್ನು ಕೇಳಿ ಬಗೆಹರಿಸಿಕೊಳ್ಳಬೇಕು
> –ರೇಷ್ಮಾ ರಾಥೋಡ್

ವಿದ್ಯಾರ್ಥಿನಿಯರಾದ ನಾಗಮ್ಮ ನಿರೂಪಿಸಿದರು, ನಿರ್ಮಲಾ ವಂದನಾರ್ಪಣೆ ಮಾಡಿದರು ಕಾಲೇಜಿನ ಅಧ್ಯಕ್ಷರಾದ ಸಂದೀಪ ದೇಸಾಯಿ, ಕಾರ್ಯದರ್ಶಿ ಜಗನ್ನಾಥ ನಾಗೂರ, ಪ್ರಾಂಶುಪಾಲರಾದ ನಾಗರಾಜ ಪಟ್ಟಣಕರ, ಉಪನ್ಯಾಸಕರಾದ ಶ್ರೀದೇವಿ ಹಿರೇಮಠ, ರಶ್ಮಿಪಾಟೀಲ, ಡಿ.ಪಿ.ಸಜ್ಜನ, ಮಂಜುನಾಥ ಬನ್ನೂರ ಅಮರ ಹಾಗರಗಿ ಬೋಧಕ್ಕೇತರ ಸಿಬ್ಬಂದಿಗಳಾದ ಶಿಲ್ಪ ಚಟ್ಟಿ, ಮೇಘನಾ, ಪ್ರಿಯಾ , ಸಂತೋಷ ಉಪಸ್ಥಿತರಿದ್ದರು.

# ಹನುಮಾನ ಜಯಂತ್ಯೋತ್ಸವ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕಮಲನಗರ

ತಾಲೂಕಿನ ಹೊಳೆಸಮುದ್ರ ಗ್ರಾಮದಲ್ಲಿ ಶ್ರೀ ಹನುಮಂತ ದೇವಸ್ಥಾನದಲ್ಲಿ ಶನಿವಾರ ಪ್ರತಿ ವರ್ಷದಂತೆ ಈ ವರ್ಷವೂ ಚಿತ್ರಾ ಪೂರ್ಣಿಮಾ ತಿಥಿ ದವನದ ಹುಣ್ಣಿಮೆ ದಿನ ಅದ್ದೂರಿಯಾಗಿ ಕಾರ್ಯಕ್ರಮ ಸಂಭ್ರಮದಿಂದ ಆಚರಿಸಲಾಯಿತು.

ರುದ್ರಾಭಿಷೇಕ ಪೂಜೆ ನೆರವೇರಿಸುವ ಮೂಲಕ ರಾಜದೇವ್ ಜೊಶಿ ಮಹಾರಾಜ ಚಾಲನೆ ದೊರೆಯಿತು.

ಈ ದಿನ ರಾತ್ರಿ ಭಕ್ತರು ಭಜನೆ ಮಾಡಿದರು.ಬೆಳಗ್ಗೆ 5 :00ಗಂಟೆಗೆ ಮಂದಿರದಲ್ಲಿ ತೊಟ್ಟಿಲು ಕಾರ್ಯಕ್ರಮ ನೇರವೆರಿತು.ನಂತರ ದಿನವಿಡಿ ವಿಶೇಷ ಪೂಜೆ ಸಲ್ಲಿಸಿದರು. ಪೂಜೆ ಸಲ್ಲಿಸುವ ಮೂಲಕ ತೆಂಗು ಕರ್ಪೂರ ನೈವೇದ್ಯ ಭಕ್ತರು ಅರ್ಪಿಸಿದರು.

ಧನರಾಜ ಪಾಡೊದೆ, ತುಕಾರಾಮ ಬೀರಾದಾರ, ಮತ್ತು ನ್ಯಾನೊಭಾ ಬೀರಾದಾರ ಪ್ರಸಾದ ವ್ಯವಸ್ಥೆ ಆಯೋಜಿಸಲಾಗಿದೆ. ಇವರಿಂದ ಭಕ್ತಿ ದಾಸೋಹ ನೇರವೇರಿಸಿದರು.

ಪ್ರತಿ ವರ್ಷದಂತೆ ಈ ವರ್ಷವೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ.ಅನ್ನ,ಹುಗ್ಗಿ ಸಾರು, ಪ್ರಸಾದ್ ಸ್ವೀಕರಿಸಿದರು.

ಈ ಸಂದರ್ಭದಲ್ಲಿ, ಸೋಪಾನ ಶಿಂಧೆ ಸಂತೋಷ್ ಎರೋಳೆ, ಭೀಮ್ ಹಂಗರಗೆ,ಗೋಪಾಲರಾವ್ ಪಾಟೀಲ್, ಶಿವಾಜಿ ಕಾಳೆ, ಶಂಕರ್ ನೂದನುರೆ,ಮಾರುತಿ ಅಳಂದೆ, ರಾಹುಲ್ ಪಾಟೀಲ್, ರಾಮ್ ಕದಮ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಅಕ್ಕಮಹಾದೇವಿ ಜಯಂತಿ ಆಚರಣೆ

• ಉದಯವಾಹಿನಿ ಬೀದರ

ಅಕ್ಕಮಹಾದೇವಿ ಮಹಿಳಾ ಪತ್ತಿನ ಸಹಕಾರ ಸಂಘ ಹಾಗೂ ಕರ್ನಾಟಕ ಸಾಹಿತ್ಯ ಸಂಘದ ಸಹಯೋಗದೊಂದಿಗೆ ಸಂಘದ ಸಭಾಂಗಣದಲ್ಲಿ ಜಗನ್ಮಾತಾ ಅಕ್ಕ ಮಹಾದೇವಿ ತಾಯಿಯವರ ಜಯಂತಿ ಆಚರಣೆ ಮಾಡಲಾಯಿತು.

ಇದೇ ವೇಳೆ ಅಕ್ಕಮಹಾದೇವಿ ಮಹಿಳಾ ಪತ್ತಿನ ಸಹಕಾರ ಸಂಘದ ಅಧ್ಯಕ್ಷೆ ಡಾ. ಸಾವಿತ್ರಿಬಾಯಿ ಹೆಬ್ಬಾಳೆ, ಉಪಾಧ್ಯಕ್ಷೆ ಮೀನಾಕ್ಷಿ ತಗಾರೆ, ನಿರ್ದೇಶಕರಾದ ಡಾ. ಸುನಿತಾ ಕೂಡ್ಲಿಕರ್, ಅಂಬಿಕಾ ಬಿರಾದಾರ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭುವನೇಶ್ವರಿ ಹಿರೇಮಠ, ಕಂಪ್ಯೂಟರ್ ಆಪರೇಟರ್ ಸುನಿತಾ ಬುಡೇರಿ, ಕ್ಷೇತ್ರ ಅಧಿಕಾರಿ ಅಂಬಿಕಾ ನಿಣ್ಣೆ, ವಿಶೇಷ ಆಹ್ವಾನಿತರಾದ ಶ್ರದ್ಧಾ ಶಿಂಧೆ, ಲೆಕ್ಕಿಗರಾದ ಉಮೇಶ ಮಾನಶೆಟ್ಟಿ, ಶಿವಕುಮಾರ ಪರೀಟ, ಪರಮೇಶ ಪಾಟೀಲ ಉಪಸ್ಥಿತರಿದ್ದರು.

# ಬಾವನನ್ನೇ ಕೊಂದ ಬಾಮೈದ

• ಉದಯವಾಹಿನಿ ಕಲಬುರಗಿ

ಜಗಳವಾಡಿಕೊಂಡು ತವರು ಮನೆ ಸೇರಿದ್ದ ಹೆಂಡತಿಯ ಮನವೊಲಿಸಲು ಬಂದ ಬಾವನನ್ನು ಬಾಮೈದುನನೇ ಥಳಿಸಿ ಚಾಕುವಿನಿಂದ ಇರಿದು ಕೊಂದಿರುವ ಘಟನೆ ನಗರದಲ್ಲಿ ನಡೆದಿದೆ. ಆನಂದ್ (24) ಕೊಲೆಯಾದ ವ್ಯಕ್ತಿ ಎಂದು ಗುರುತಿಸಲಾಗಿದೆ. ಆರೋಪಿ ಟೋನಿಯನ್ನು ಪೊಲೀಸರು ಬಂಧಿಸಿದ್ದಾರೆ.

ಕಳೆದ ಎರಡು ವರ್ಷದ ಹಿಂದೆ ಗಾಜಿಪುರದ ಸ್ನೇಹಾ ಎಂಬಾಕೆಯನ್ನು ಪ್ರೀತಿಸಿ ಮದುವೆಯಾಗಿದ್ದ ಆನಂದ ಆರಂಭದಲ್ಲಿ ಸಂತೋಷವಾಗಿದ್ದರು. ಆದರೆ ಕಳೆದ 2 ತಿಂಗಳ ಹಿಂದೆ ಗಂಡ ಹೆಂಡತಿಯ ಮಧ್ಯೆ ಜಗಳವಾಗಿದೆ. ಕೋಪಗೊಂಡ ಸ್ನೇಹಾ ತವರು ಮನೆ ಸೇರಿದ್ದಳು. ಆನಂದ್ ಅವರ ಅಣ್ಣನ ಮದುವೆ ನಿಶ್ಚಯವಾಗಿದ್ದರಿಂದ ಮನೆಗೆ ವಾಪಾಸ್ ಬರುವಂತೆ ಸ್ನೇಹಾಳನ್ನು ಕರೆದಿದ್ದರೂ ಬಂದಿರಲಿಲ್ಲ. ಹಾಗಾಗಿ ಆನಂದ್ ಅವರೇ ಪತ್ನಿಯನ್ನು ಕರೆದುಕೊಂಡು ಬರಲು ಅವರ ಮನೆಗೆ ಹೋಗಿದ್ದಾನೆ.

# ಬಡ ರೋಗಿಗಳಿಗೆ ಸೂಕ್ತ ಸಮಯಕ್ಕೆ ಚಿಕಿತ್ಸೆ ನೀಡುವಂತೆ ಆಗ್ರಹಿಸಿ ಮನವಿ

• ಉದಯವಾಹಿನಿ ಔರಾದ

ಗ್ರಾಮೀಣ ಭಾಗದ ಹಾಗೂ ಬಡ ರೋಗಿಗಳಿಗೆ ಸಂಜೀವಿನಿಯಾಗಬೇಕಾದ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಬಡ ರೋಗಿಗಳಿಗೆ ಚಿಕಿತ್ಸೆ ನೀಡಲು ಕೆಲ ವೈದ್ಯರು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಆರೋಪಿಸಿ ಪಟ್ಟಣದ ಪ್ರಮುಖರು ತಾಲ್ಲೂಕು ವೈದ್ಯಾಧಿಕಾರಿ ಡಾ.ಗಾಯತ್ರಿ ಅವರಿಗೆ ಮನವಿ ಸಲ್ಲಿಸಿದರು.

ಗಡಿಭಾಗ ಹಾಗೂ ಗ್ರಾಮೀಣ ಪ್ರದೇಶದ ಬಡ ರೋಗಿಗಳಿಗೆ ವೈದ್ಯರು ಸರಿಯಾಗಿ ನೋಡದೆ ಜಿಲ್ಲಾ ಆಸ್ಪತ್ರೆಗೆ ಶಿಫಾರಸು ಮಾಡುತ್ತಿದ್ದಾರೆ, ವೈದ್ಯೋ ನಾರಾಯಣ ಹರಿ ಎಂದು ಹೇಳುವಂತೆ ವೈದ್ಯರು ಕಾರ್ಯ ನಿರ್ವಹಿಸಬೇಕು, ಆದರೆ ಆಸ್ಪತ್ರೆಯಲ್ಲಿ ವೈದ್ಯರು ಎಲ್ಲಾ ರೀತಿಯ ಸೌಲಭ್ಯಗಳು ಇದ್ದರು ಸಹ ನಿರ್ಲಕ್ಷ್ಯತನ ವಹಿಸುತ್ತಿದ್ದಾರೆ, ಎಲ್ಲಾ ರೀತಿಯ ಉಪಕರಣಗಳು ಇದ್ದರು ಸಹ ಅದರ ಉಪಯೋಗ ವಾಗುತ್ತಿಲ್ಲ, ಸಣ್ಣ ಪುಟ್ಟ ರೋಗಗಳಿಗು ಸಹ ಜಿಲ್ಲಾ ಆಸ್ಪತ್ರೆಗೆ ಕಳುಹಿಸುತ್ತಾರೆ ಎಂದು ದೂರಿದರು.

ರಾತ್ರಿ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಹ ವೈದ್ಯರು ರೋಗಿಗಳಿಗೆ ಸರಿಯಾಗಿ ಸ್ಪಂದನೆ ನೀಡುತ್ತಿಲ್ಲ ಅಲ್ಲಿನ ಶೂಶ್ರುಕರೆ ವೈದ್ಯರಾಗುತ್ತಾರೆ, ರಾತ್ರಿ ಸಮಯದಲ್ಲಿ ಗ್ರಾಮೀಣ ಭಾಗದಿಂದ ಬರುವ ಬಡ ರೋಗಿಗಳು ಸರಿಯಾದ ಸ್ಪಂದನೆ ಸಿಗದೇ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಅಂಬುಲೆನ್ಸ್ ವ್ಯವಸ್ಥೆ ಇದ್ದರೂ ಸಹ ಅದರ ಸೇವೆ


ಉದಯವಾಹಿನಿ ಚಿತ್ರ

**ವೈದ್ಯರ ಸಭೆ ಕರೆದು ವ್ಯವಸ್ಥೆ**

**ಸಾರ್ವಜನಿಕ ಆಸ್ಪತ್ರೆಯ ವೈದ್ಯರ ನಿರ್ಲಕ್ಷತನ ಕುರಿತು ದೂರು ಸ್ವೀಕರಿಸಿದ ವೈದ್ಯಾಧಿಕಾರಿ ಡಾ.ಗಾಯತ್ರಿ ಅವರು ಮನವಿಗೆ ಸ್ಪಂದಿಸಿ ಶೀಘ್ರವೇ ಎಲ್ಲಾ ವೈದ್ಯರ ಹಾಗೂ ಸಿಬ್ಬಂದಿಗಳ ಕರೆದು ಸಭೆ ನಡೆಸಿ ವ್ಯವಸ್ಥೆ ಸರಿಪಡಿಸಲಾಗುವುದು. ಆಸ್ಪತ್ರೆಯಲ್ಲಿ ಎಲ್ಲಾ ರೀತಿಯ ಸೌಲಭ್ಯಗಳು ಲಭ್ಯವಿದ್ದು ಉತ್ತಮ ಸೇವೆ ನೀಡಲು ಸೂಚಿಸಲಾಗುವುದು.**

ಬಡ ರೋಗಿಗಳಿಗೆ ಸಿಗುತ್ತಿಲ್ಲ, ಈಗಾಗಲೇ ಈ ಸಂಬಂಧ ದೂರುಗಳು ಸಹ ನೀಡಿದ್ದೇವೆ ಆದರೆ ಯಾವುದೇ ಪ್ರಯೋಜನ ಸಿಕ್ಕಿಲ್ಲ, ಒಂದು ವಾರದ ಒಳಗೆ ವೈದ್ಯಾಧಿಕಾರಿಗಳು ವೈದ್ಯರಾಗುತ್ತಾರೆ ಎಲ್ಲಾ ವೈದ್ಯರ ಸಭೆ ನಡೆಸಿ ವ್ಯವಸ್ಥೆ ಸರಿಪಡಿಸಬೇಕು ಇಲ್ಲವಾದಲ್ಲಿ ಆಸ್ಪತ್ರೆ ಎದುರಿಗೆ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

# ಕಾಂಗ್ರೇಸ್ ಬೆಲೆ ಏರಿಕೆಗೆ ಜನಾಕ್ರೋಶ: ನಡಹಳ್ಳಿ

• ಉದಯವಾಹಿನಿ ಮುದ್ದೇಬಿಹಾಳ

ಬಿಜೆಪಿ ಜನಾಕ್ರೋಶ ಯಾತ್ರೆಯ ಎರಡನೇ ಹಂತಹ ಹೋರಾಟ ವಿಜಯಪುರ ಜಿಲ್ಲೆಯಲ್ಲಿ ಏ 17 ಗುರುವಾರದಂದು ನಡೆಯಲಿದ್ದು ಈ ಜನಾಕ್ರೋಶ ಯಾತ್ರೆಗೆ ಮುದ್ದೇಬಿಹಾಳ ಮತಕ್ಷೇತ್ರದಿಂದ 10 ಸಾವಿರ ಬಿಜೆಪಿ ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಬಿಜೆಪಿ ರಾಜ್ಯ ರೈತ ಮೋರ್ಚಾ ಅಧ್ಯಕ್ಷ ಮಾಜಿ ಶಾಸಕ

**ಏ 17 ವಿಜಯಪುರ ಜನಾಕ್ರೋಶ ಯಾತ್ರೆಗೆ ಮುದ್ದೇಬಿಹಾಳ ಮತಕ್ಷೇತ್ರದಿಂದ 10 ಸಾವಿರ ಕಾರ್ಯಕರ್ತರು**

ಎ.ಎಸ್ ಪಾಟೀಲ್ ನಡಹಳ್ಳಿ ಹೇಳಿದರು. ಶನಿವಾರ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು ಈ ಯಾತ್ರೆ ಯಾವ ರಾಜಕೀಯ ದುರುದ್ದೇಶದಿಂದ ಮಾಡುತ್ತಿಲ್ಲ ಕಾಂಗ್ರೇಸ್ ಸರಕಾರ ಸುಳ್ಳು ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದು ಬೆಲೆ ಏರಿಕೆ ಮಾಡಿ ಜನರ ಬದುಕು ದುಸ್ತರಮಾಡಿದ್ದಕ್ಕಾಗಿ ಈ ಜನಾಕ್ರೋಶ ಯಾತ್ರೆ ಮಾಡಲಾಗುತ್ತಿದೆ.

ಬಿವೈ ವಿಜಯೇಂದ್ರ ನೇತೃತ್ವದಲ್ಲಿ ಜನಾಕ್ರೋಶ ಯಾತ್ರೆ ಯಶಸ್ವಿಯಾಗಲಿದೆ ಈ ಜನಾಕ್ರೋಶ ಯಾತ್ರೆ ಮುಗಿಯುವದರೊಳಗೆ ರಾಜ್ಯ ಕಾಂಗ್ರೇಸ್ ಸರಕಾರ ಪತನವಾಗಲಿದೆ ಕಾಂಗ್ರೇಸ್ ಅಧಿಕಾರದ ಕುರ್ಚಿ ಅಲುಗಾಡಲಿದೆ ಎಂದರು. ಬಿಜೆಪಿ ಪಕ್ಷ ಅತ್ಯಂತ ಬಲಿಷ್ಠ



ಉದಯವಾಹಿನಿ ಚಿತ್ರ

> ಈ ಹಿಂದೆ ಬಿಜೆಪಿ ಸರಕಾರದ ವಿರುದ್ಧ ಕಾಂಗ್ರೇಸ್ 40% ಸರಕಾರದ ಆರೋಪ ಕುರಿತು ತನಿಖೆಯಲ್ಲಿ ಈ ಆರೋಪದಲ್ಲಿ ಹುರುಳಿಲ್ಲವೆಂಬ ಸತ್ಯ ಬಹಿರಂಗಗೊಂಡಿದೆ ರಾಜ್ಯ ಕಾಂಗ್ರೇಸ್ ಸರಕಾರ ವಿರುದ್ಧ ಕಾಂಗ್ರೇಸ್ ಪಕ್ಷದ ಶಾಸಕರೇ ಧ್ವನಿ ಎತ್ತುತ್ತಿದ್ದಾರೆ ರಾಜು ಕಾಗೆ ಅನುದಾನ ನೀಡದೆ ಇದ್ದರೆ ವಿಧಾನ ಸಭೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಹೇಳಿಕೆ ನೀಡಿದರು ಮುದ್ದೇಬಿಹಾಳ ಶಾಸಕ ನಾಡಗೌಡರು ಅಭಿವೃದ್ಧಿಗೆ ಅನುದಾನ ನೀಡದೆ ಇದ್ದರೆ ರಾಜಕೀಯದಿಂದ ದೂರವಾಗುವ ಹೇಳಿಕೆ ನೀಡಿದರು ಅದರಂತೆ ಬಿ ಆರ್ ಪಾಟೀಲ್ ಹೇಳಿಕೆ ನೀಡಿದರು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ರಾಜ್ಯ ಸರಕಾರದಲ್ಲಿ ಭ್ರಷ್ಟಾಚಾರ ನಂ1 ರಲ್ಲಿ ಇದೆ ಎಂದು ಹೇಳಿಕೆ ನೀಡಿದ್ದಾರೆ –ಎ.ಎಸ್ ಪಾಟೀಲ್ ನಡಹಳ್ಳಿ

ಪಕ್ಷವಾಗಿದೆ ಜಿಲ್ಲೆಯ ಪ್ರತಿ ಭೂತಮಟ್ಟದ ಒಟ್ಟು ಪದಾಧಿಕಾರಿಗಳು 20 ಸಾವಿರ ಜನರಿದ್ದಾರೆ ಈ 20 ಸಾವಿರ ಪದಾಧಿಕಾರಿಗಳು ಪ್ರತಿಯೊಬ್ಬರು 5 ಜನರನ್ನು ಓರ್ವ ಮಹಿಳೆ, ದಲಿತ ಹಿಂದುಳಿದ, ರೈತ ಹಾಗೂ ಓರ್ವ ಯುವಕನನ್ನು ಕರೆತರಬೇಕು ಇದು ಪಕ್ಷದ ಆದೇಶವಾಗಿದೆ ಎಂದು ಬಿಜೆಪಿ ಕಾರ್ಯಕರ್ತರಿಗೆ ಕರೆ ನೀಡಿದರು. ರಾಜ್ಯ ಕಾಂಗ್ರೇಸ್ ಸರಕಾರ ಪೊಳ್ಳು ಭರವಸೆ ನೀಡಿದೆ ಅಂಗನವಾಡಿ, ಆಶಾ ಕಾರ್ಯಕರ್ತರಿಗೆ ನೀಡಿದ ಭರವಸೆ ಈಡೇರಿಸಿಲ್ಲಾ ನೀರಾವರಿ, ಬಿತ್ತನೆ ಬೀಜ ದುಬಾರಿ, ಕಿಸಾನ್ ಸನ್ಮಾನ ರಾಜ್ಯ, ಯೋಜನೆ ರದ್ದು, ವಿದ್ಯುತ್ ದರ ಏರಿಕೆ, ಜನನ ಮರಣ ಪತ್ರ, ಡಿಸೆಲ್ ಪೆಟ್ರೋಲ್, ಹಾಲು, ಸರಾಯಿ, ರೇಷನ್ ಕಾರ್ಡ್ ರದ್ದತಿ ಸೇರಿದಂತೆ ಕಾಂಗ್ರೇಸ್ ಸರಕಾರ ಎಲ್ಲದರ ಮೇಲೆ ಬೆಲೆ ಏರಿಕೆ ಮಾಡಿ ಜನಸಾಮಾನ್ಯರ ಬದುಕ ನಾಶಮಾಡಿದೆ ಟ್ಯಾಕ್ಸ್ ವಿಧಿಸುವುದನ್ನು ಕೈ ಬಿಟ್ಟಿಲ್ಲವೆಂದು ರಾಜ್ಯ ಸರಕಾರದ ವಿರುದ್ಧ ಬೆಲೆ ಏರಿಕೆ ವಿರುದ್ಧ ವಾಗ್ದಾಳಿ ನಡೆಸಿದರು.

# ಸಂತೃಪ್ತ ಜೀವನಕ್ಕೆ ಸದ್ಗುಣಗಳು ಅತ್ಯವಶ್ಯ : ಹಾವಗಿಲಿಂಗೇಶ್ವರ ಶಿವಾಚಾರ್ಯರು

• ಉದಯವಾಹಿನಿ ಭಾಲ್ಕಿ

ಮಾನವರು ಸಂತೃಪ್ತ ಜೀವನ ನಡೆಸಲು ಸದ್ಗುಣಗಳನ್ನು ಅತ್ಯವಶ್ಯವಾಗಿ ಬೆಳೆಸಿಕೊಳ್ಳಬೇಕು ಎಂದು ರಾಚೋಟೇಶ್ವರ ಮಠದ ಪೀಠಾಧಿಪತಿ ಹಾವಗಿಲಿಂಗೇಶ್ವರ ಶಿವಾಚಾರ್ಯರು ಹೇಳಿದರು. ತಾಲ್ಲೂಕಿನ ತೇಗಂಪೂರ ಗ್ರಾಮದಲ್ಲಿ ಮಹಾದೇವ ಜಾತ್ರೆ ನಿಮಿತ್ತ ಹಮ್ಮಿಕೊಂಡಿದ್ದ ಪ್ರವಚನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಧಾರ್ಮಿಕ ನಂಬಿಕೆಗಳು ಮತ್ತು ದೇವರಲ್ಲಿ ಭಕ್ತಿ, ಮನುಷ್ಯರಲ್ಲಿ ಆತ್ಮವಿಶ್ವಾಸ ಹೆಚ್ಚಿಸುತ್ತವೆ. ಅನಿಶ್ಚಿತವಾದ ಬದುಕಿನಲ್ಲಿ ನಿಶ್ಚಿಂತೆಯಿಂದ ಬದುಕಲು ಪ್ರತಿಯೊಬ್ಬರು ದೈವಿಕ ಗುಣಗಳನ್ನು ಬೆಳೆಸಿಕೊಂಡು ಉತ್ತಮ ಬದುಕನ್ನು ನಡೆಸಬೇಕು ಎಂದರು.

### ಬಸನಗೌಡ ಪಾಟೀಲ್ ಯತ್ನಾಳ ಹೇಳಿಕೆ ಮುಸ್ಲಿಂ ಧಾರ್ಮಿಕ ಭಾವನಗೆ ಆಘಾತ ನೀಡಿದೆ

# ಯತ್ನಾಳ ವಿರುದ್ಧ ಶೀಘ್ರದಲ್ಲೇ ಬೃಹತ್ ಹೋರಾಟ

• ಉದಯವಾಹಿನಿ ಮುದ್ದೇಬಿಹಾಳ

ಬಾಳಾ ಸಾಬ್ ಠಾಕ್ರೆ ಮನೆಯಲ್ಲಿ ಮಹಮ್ಮದ್ ಪೈಗಂಬರ್ ಹುಟ್ಟಿದ್ದಾನೆ' ಎಂಬ ಹೇಳಿಕೆಯನ್ನು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ನೀಡಿದ್ದು, ಇದು ಮುಸ್ಲಿಂ ಸಮುದಾಯದ ಧಾರ್ಮಿಕ ಭಾವನೆಗಳಿಗೆ ತೀವ್ರ ಆಘಾತ ಉಂಟು ಮಾಡಿದೆ ಅವರ ಹೇಳಿಕೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ ಎಂದು ಎನ್ ಎಂ ಮೋಕೋಶಿ ವಕೀಲರು , ಮಾಜಿ ಪುರಸಭೆ ಸದಸ್ಯ ಹುಸೇನಭಾಷಾ ಸಾಲಿಮನಿ ( ಪಿಂಟು ) ಹೇಳಿದರು ಅವರು ಶನಿವಾರ ಹೊರಪೇಟ ಗಲ್ಲಿಯ ಅಂಜುಮನ್ ಇಸ್ಲಾಂ ಕಮಿಟಿ ಕಚೇರಿಯಲ್ಲಿ ಮುದ್ದೇಬಿಹಾಳ ಮುಸ್ಲಿಂ ಪೂರಂ ನಿಂದ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು. ಬಸನಗೌಡರು ಮಾತಾಡಿದರೆ ಮುಸ್ಲಿಂ ಪಾಕಿಸ್ತಾನ ಎನ್ನುತ್ತಾರೆ ಈ ಹಿಂದೆ ಬಸವಣ್ಣನವರ ಕುರಿತು ಹಗುರವಾಗಿ ಮಾತನಾಡಿದ್ದರು.

ಮುಸ್ಲಿಮ್ ಸಮುದಾಯದ ಬಗ್ಗೆ ಟೋಪಿ ಹಾಕಿಕೊಂಡವರು ಗಡ್ಡಬಿಟ್ಟವರು ಬರಬೇಡಿ


ಉದಯವಾಹಿನಿ ಚಿತ್ರ

> ಭಾರತ ವಿವಿಧತೆಯಲ್ಲಿ ಏಕತೆ ಸಾರುವ ದೇಶವಾಗಿದೆ ಬಸನಗೌಡರು ಸದಾ ಮುಸ್ಲಿಂ ಸಮುದಾಯವನ್ನು ಹಿಯ್ಯಾಳಿಸುತ್ತಾ ಬರುತ್ತಿದ್ದಾರೆ ಈಗ ನಮ್ಮ ಪ್ರವಾದಿಗಳ ವಿರುದ್ಧ ಮಾತನಾಡಿದ್ದು ವಿಶ್ವದ ಮುಸ್ಲಿಂ ಸಮುದಾಯ ಸಹಿಸುವುದಿಲ್ಲ, ಯತ್ನಾಳ ಪ್ರವಾದಿಗಳ ವಿರುದ್ಧ ಹೇಳಿಕೆ ನೀಡುವಾಗ ಅಲ್ಲೆ ಇದ್ದ ಪೊಲೀಸ್ ರು ಸುಮೋಟ ಕೇಸ್ ಯಾಕೆ ದಾಖಲು ಮಾಡಲಿಲ್ಲ ಸರಕಾರ ಉತ್ತರಿಸಬೇಕು –ಪಿಂಟು ಸಾಲಿಮನಿ

ಎನ್ನುವ ಸಂವಿಧಾನದ ವಿರೋಧಿ ನಿಲುವು ಹೇಳಿಕೆಯಾಗಿವೆ ,ಪ್ರವಾದಿಗಳು ನಮ್ಮ ಆತ್ಮ ನಮ್ಮ ಹೃದಯ ಅವರ ವಿರುದ್ಧ ಹೇಳಿಕೆ ಸಹಿಸಲು ಆಗುವುದಿಲ್ಲ ಈ ಕುರಿತು ಶೀಘ್ರದಲ್ಲೇ ಮುದ್ದೇಬಿಹಾಳ ಮುಸ್ಲಿಂ ಪೂರಂನಿಂದ ಬೃಹತ್ ಹೋರಾಟ ಮಾಡಲಾಗುತ್ತದೆ.

ಬಸನಗೌಡರ ಹೊಲಸು ನಾಲಿಗೆಯಲ್ಲಿ ನಮ್ಮ ಪ್ರವಾದಿಗಳ ಹೆಸರು ಬಂತಲ್ಲಾ ಎಂದು ಖೇದವಿದೆ ಎಂದರು. ಮುದ್ದೇಬಿಹಾಳ ಮುಸ್ಲಿಂ ಪೂರಂ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಮೌಲಾನಾ ಹುಸೇನ್ ಉಮರಿ ಬಸನಗೌಡ ಪಾಟೀಲ್ ಯತ್ನಾಳ ಹೇಳಿಕೆ ಖಂಡಿಸಿದರು ,ಯತ್ನಾಳ ಹೇಳಿಕೆ ವಿರುದ್ಧ ವಿಜಯಪುರ ದಲ್ಲಿ ಅವರ ಹತ್ಯೆ ಕುರಿತು ಆಡಿಯೋ ವೈರಲ್ ಕುರಿತ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಎನ್ ಎಂ ಮೋಕೋಶಿ ಇದು ಸುಳ್ಳು ಸಭೆಯಲ್ಲಿ ಇಂತಹ ಯಾವ ಹೇಳಿಕೆ ನೀಡಿಲ್ಲ ಹೋರಾಟದ ಬಗ್ಗೆ ಚರ್ಚೆಯಾಗಿದೆ ಇದು ಪೇಕ್ ಅಶಾಂತಿ ಸೃಷ್ಟಿಸಲು ಕ್ರಿಯೆಟ್ ಮಾಡಿದ್ದಾರೆ ಎಂದು ಉತ್ತರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಇರ್ಫಾನ್ ಕೂಡಗಿ, ಅಲ್ಲಾಭಕ್ಷ ನಾಯ್ಕೋಡಿ, ಫಾರುಕ್ ಚೌಧರಿ, ಹುಸೇನ್ ಮುಲ್ಲಾ, ಮಲಿಕ್ ನಧಾಪ, ನೂರನಬಿ ನಧಾಪ, ಸಿರಾಜ್ ಮೋಮಿನ್ ಸಮೀರ ಹುಣಸಗಿ ಇದ್ದರು.

> ಬಸನಗೌಡ ಪಾಟೀಲ್‌ರು ಸದಾ ಮುಸ್ಲಿಮ್ ವಿರೋಧಿ ಹೇಳಿಕೆ ಜನರ ಚಪ್ಪಾಳೆಗಾಗಿ ನೀಡುತ್ತಾರೆ ಮುಸ್ಲಿಮ್‌ರು ನಮ್ಮ ಕಚೇರಿಗೆ ಮನಗೆ ಬರಬೇಡಿ ಎಂದು ಹೇಳಿಕೆ ನೀಡುವ ಯತ್ನಾಳರು ಜೆಡಿಎಸ್‌ನಲ್ಲಿ ಇದ್ದಾಗ ನನ್ನ ಮನೆಯಲ್ಲಿ ಮಟನ್ ತಿಂದಿದ್ದಾರೆ ನಾನೇ ಮೂರು ಬಾರಿ ಮಟನ್ ಬುತ್ತಿ ಕೊಟ್ಟುಬಂದಿದ್ದೇನೆ
> –ಮಹಿಬೂಬ ಗೊಳಸಂಗಿ

# ಅನಧಿಕೃತ ಕೋಚಿಂಗ್ ಸೆಂಟರ್ ಬಂದ್‌ಗೆ ಒತ್ತಾಯ

• ಉದಯವಾಹಿನಿ ಬೀದರ್

ಜಿಲ್ಲೆಯಾದ್ಯಂತ ರಾಜಾರೋಷವಾಗಿ ಯಾರ ಅಂಜಿಕೆಯಿಲ್ಲದೆ ನಡೆಯುತ್ತಿರುವ ಅನಧಿಕೃತ ಕೋಚಿಂಗ್ ಸೆಂಟರ್‌ಗಳನ್ನು ಸಂಪೂರ್ಣವಾಗಿ ಬಂದ್ ಮಾಡಬೇಕೆಂದು ಕಲ್ಯಾಣ ಕರ್ನಾಟಕ ಅನುದಾನ ರಹಿತ ಖಾಸಗಿ ಶಾಲಾ ಆಡಳಿತ ಮಂಡಳಿ ಸಂಘ ಒತ್ತಾಯಿಸಿದೆ.

ನಗರದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ತೆರಳಿ ಬಿ.ಇ.ಒ ಟಿ.ಆರ್ ದೊಡ್ಡೆ ಅವರಿಗೆ ಲಿಖಿತ ಮನವಿ ಪತ್ರ ಸಲ್ಲಿಸಿ ಅನಧಿಕೃತ ಕೋಚಿಂಗ್ ಸೆಂಟರ್‌ಗಳ ಹಾವಳಿಯಿಂದ ಎಲ್ಲಾ ರೀತಿಯ ಶಾಲೆಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ, ನಮ್ಮಲ್ಲಿ ಓದುವ ಮಕ್ಕಳು ಕೋಚಿಂಗ್ ಆಸೆಗಾಗಿ ಅನಧಿಕೃತ ಸೆಂಟರ್‌ಗಳಲ್ಲಿ ಪ್ರವೇಶ ಪಡೆಯುತ್ತಿರುವುದರಿಂದ ಶಾಲೆಗಳ ಸ್ಥಿತಿ ಚಿಂತಾಜನಕವಾಗುತ್ತಿದೆ. ಈ ಸೆಂಟರ್‌ಗಳು ಹಣದ ಲಾಲಚಿಗಾಗಿ ನಿತ್ಯ ಬೆಳಿಗ್ಗೆ 9 ಗಂಟೆಯಿಂದ ಸಾಯಂಕಾಲ 4 ಗಂಟೆ ಹಾಗೂ ಸಾಯಂಕಾಲ 5 ಗಂಟೆಯಿಂದ ರಾತ್ರಿ 9 ಗಂಟೆ ವರೆಗೆ ಕೋಚಿಂಗ್ ನಡೆಸುತ್ತಿರುವುದರಿಂದ ಪಾಲಕರು ಏನು ಅರಿಯದೆ ತಮ್ಮ ಮಕ್ಕಳು ಹೆಚ್ಚೆಚ್ಚು ಓದಬೇಕೆಂಬ ಬಯಿಕೆಯಿಂದ ಅಂತಹ ಅನಧಿಕೃತ ಸೆಂಟರ್‌ಗಳತ್ತ ಮುಖ ಮಾಡುತ್ತಿರುವರು. ಇದು ನೇರಾನೇರ ಖಾಸಗಿ ಶಾಲೆಗಳ ಮೇಲೆ ವ್ಯಾಪಕ ಪರಿಣಾಮ ಬೀರುತ್ತಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಈ ಹಿಂದೆ ಸಹ ಈ ಕುರಿತು 05/07/2024 ಹಾಗೂ 21/08/2024 ಎರಡು ಬಾರಿ ಈ ಅನಧಿಕೃತ ಕೋಚಿಂಗ್ ಸೆಂಟರ್‌ಗಳು ಬ್ಯಾನ್ ಮಾಡಬೇಕೆಂದು ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಜರುಗಿಸಿರುವುದು ನಮ್ಮ ಗಮನಕ್ಕೆ ಬಂದಿರುವುದಿಲ್ಲ ಹಾಗೇ ಯಾವುದೇ


ಉದಯವಾಹಿನಿ ಚಿತ್ರ

ಕೋಚಿಂಗ್ ಸೆಂಟರ್ಗಳು ಇಲ್ಲಿ ವರೆಗೆ ಬಂದ್ ಆಗಲಿಲ್ಲ ಬದಲಿಗೆ ಹೆಚ್ಚಿಗೆ ಆಗಿರುತ್ತವೆ. ಈಗ ಮತ್ತೊಮ್ಮೆ ತಮಗೆ ಮನವಿ ಸಲ್ಲಿಸಿದ್ದು, ಈಗಲಾದರೂ ವಿದ್ಯಾರ್ಥಿಗಳ ಹಾಗೂ ಶಾಲೆಗಳ ಹಿತದೃಷ್ಟಿಯಿಂದ ಕೂಡಲೇ ಬೀದರ್ ಜಿಲ್ಲೆಯಲ್ಲಿ ಅನಧಿಕೃತ ಕೋಚಿಂಗ್ ಸೆಂಟರ್‌ಗಳು ಸಂಪೂರ್ಣವಾಗಿ ಬ್ಯಾನ್ ಮಾಡಬೇಕೆಂದು ಆಗ್ರಹಿಸಿದರು.

ಒಂದು ವಾರದ ಹಿಂದಷ್ಟೆ ಈ ವಿಚಾರವಾಗಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿರುವುದಾಗಿ ತಿಳಿಸಿದ ಕ. ಕರ್ನಾಟಕ ಅನುದಾನ ರಹಿತ ಖಾಸಗಿ ಶಾಲಾ ಆಡಳಿತ ಮಂಡಳಿ ಸಂಘವು ಮುಂದಿನ ವಾರ ಈ ಕುರಿತು ಜಿಲ್ಲಾಧಿಕಾರಿಗಳಿಗೆ ಸಹ ಮನವಿ ಸಲ್ಲಿಸುವುದಾಗಿ ಎಚ್ಚರಿಸಿದರು.

ರೇವಣಸಿದ್ದಪ್ಪ ಜಲಾದೆ, ಅಧ್ಯಕ್ಷರಾದ ರಾಜೇಂದ್ರಕುಮಾರ ಮಣಗೀರೆ, ಕಾರ್ಯದರ್ಶಿ ಗುರುನಾಥರೆಡ್ಡಿ ಚಿಂತಾಕಿ, ಬೀದರ್ ತಾಲ್ಲೂಕಾಧ್ಯಕ್ಷ ಸಂದೀಪ ಶಟಕಾರ,ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


## ಭೀಕರ ಅಗ್ನಿ ಅವಘಡ: ಮಕ್ಕಳ ರಕ್ಷಣೆಗೆ ತಾಯಿ ಮೊರೆ, ಪವಾಡ ಸದೃಶ ಪಾರು, ರೋಚಕ ಕಾರ್ಯಾಚರಣೆ

**ಅಹ್ಮದಾಬಾದ್:** ಗುಜರಾತ್ ರಾಜಧಾನಿ ಅಹ್ಮದಾಬಾದ್‌ನ ಅಪಾರ್ಟ್‌ಮೆಂಟ್‌ವೊಂದರಲ್ಲಿ ಭೀಕರ ಅಗ್ನಿ ಅವಘಡ ಸಂಭವಿಸಿದ್ದು, ಬೆಂಕಿಯಲ್ಲಿ ಸಿಲುಕಿದ್ದ ಕುಟುಂಬವೊಂದನ್ನು ಸ್ಥಳೀಯರು ರಕ್ಷಣೆ ಮಾಡಿರುವ ವಿಡಿಯೋ ವ್ಯಾಪಕ ವೈರಲ್ ಆಗುತ್ತಿದೆ.

ಅಹ್ಮದಾಬಾದ್‌ನ ಖೋಖರಾ ಪ್ರದೇಶದಲ್ಲಿರುವ ಪರಿಷ್ಕರ್-1 ಜನವಸತಿ ಅಪಾರ್ಟ್‌ಮೆಂಟ್ ಸಂಕೀರ್ಣದ ನಾಲ್ಕನೇ ಮಹಡಿಯಲ್ಲಿ ಸಂಜೆ 4 ಗಂಟೆ ವೇಳೆ ಬೆಂಕಿ ಕಾಣಿಸಿಕೊಂಡಿತ್ತು.

ನೋಡ ನೋಡುತ್ತಲೇ ಬೆಂಕಿ ವ್ಯಾಪಿಸಿದ್ದು ಈ ವೇಳೆ ನಾಲ್ಕನೇ ಅಂತಸ್ತಿನಲ್ಲಿದ್ದ ಒಂದು ಕುಟುಂಬ ಮೆಟ್ಟಿಲುಗಳ ಮೂಲಕ ಹೊರಗೆ ಬರಲು ಯತ್ನಿಸಿದೆ. ಆದರೆ ಮೆಟ್ಟಿಲುಗಳಿಗೂ ಬೆಂಕಿ ವ್ಯಾಪಿಸಿದ್ದರಿಂದ ಅವರು ಓಡಿ ಬರಲು ಸಾಧ್ಯವಾಗಿಲ್ಲ.

ಈ ವೇಳೆ ಇಬ್ಬರು ಮಹಿಳೆಯರು ಮತ್ತು ಇಬ್ಬರು ಮಕ್ಕಳು ಅಪಾಯಕ್ಕೆ ಸಿಲುಕಿದ್ದರು. ಅಪಾಯದಿಂದ ಪಾರಾಗಲು ಅವರು ಯತ್ನಿಸಿದರು. ಅಷ್ಟು ಹೊತ್ತಿಗೆ ಕೆಳಗಿನ ಅಂತಸ್ತಿಗೂ ಬೆಂಕಿ ವ್ಯಾಪಿಸಿದ್ದೂ



ಮೇಲೆ ಹೋಗಲೂ ಆಗದೆ, ಕೆಳಗೆ ಬರಲೂ ಆಗದೇ ಆ ಕುಟುಂಬ ಸಂಕಷ್ಟದಲ್ಲಿ ಸಿಲುಕಿತ್ತು. ಈ ವೇಳೆ ಸ್ಥಳೀಯ ನಿವಾಸಿಗಳು ಆ ಕುಟುಂಬದ ನೆರವಿಗೆ ಧಾವಿಸಿದ್ದು, ಕೂಡಲೇ ಮೂರನೇ ಮಹಡಿಗೆ ಹೋಗಿ ಮಕ್ಕಳನ್ನು ರಕ್ಷಿಸಲು ಯತ್ನಿಸಿದ್ದಾರೆ. ಮೊದಲು ತೆರೆದ ಕಿಟಕಿ ಮೂಲಕ ಇಬ್ಬರು ಮಕ್ಕಳನ್ನು ಮೇಲಿಂದ ಕೆಳಗೆ ಇಳಿಸಿಕೊಂಡು ರಕ್ಷಣೆ ಮಾಡಿದ್ದು ಬಳಿಕ ಮಹಿಳೆಯರನ್ನೂ ರಕ್ಷಿಸಿದ್ದಾರೆ. ಈ ಕುರಿತ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಇದೇ ಹೊತ್ತಲ್ಲೇ ವಿಚಾರ ತಿಳಿದು ಏಳು ಅಗ್ನಿಶಾಮಕ ವಾಹನಗಳು ದೌಡಾಯಿಸಿ ಬೆಂಕಿ ನಂದಿಸುವ ಕಾರ್ಯಾಚರಣೆ ಆರಂಭಿಸಿದರು.

### ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವ್ಯಾಪಾರ ಯುದ್ಧ ಹಲವು ದೇಶಗಳನ್ನು ಕಂಗೆಡಿಸಿದೆ

# ಡೊನಾಲ್ಡ್ ಟ್ರಂಪ್ ನೀತಿಗೆ ಭಾರತ ಸೆಡ್ಡು: ಗೋಯಲ್, ಜೈಶಂಕರ್ ದ್ವಂದ್ವ

**ದೆಹಲಿ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಪರಸ್ಪರ ಸುಂಕ ನೀತಿಯಿಂದ ಇಡೀ ಜಗತ್ತನ್ನು ಬೆದರಿಸೋ ಕೆಲಸವನ್ನು ಮಾಡುತ್ತಿದ್ದಾರೆ. ಇದಕ್ಕೆ ಚೀನಾ ಸೇರಿ ಹಲವು ರಾಷ್ಟ್ರಗಳು ಪ್ರತಿರೋಧ ಒಡ್ಡುತ್ತಿವೆ. ಇದರ ಬೆನ್ನಲ್ಲೇ ಭಾರತ ಕೂಡ ಅಮೆರಿಕಕ್ಕೆ ಸೆಡ್ಡು ಹೊಡೆಯುವ ರೀತಿ ಕಾಣುತ್ತಿದೆ. ಆದರೆ, ಮೋದಿ ಟೀಂನ ಇಬ್ಬರು ಪ್ರಮುಖ ಸಚಿವರು ದ್ವಂದ್ವ ಹೇಳಿಕೆ ನೀಡಿರುವುದು ಅಮೆರಿಕದ ಜೊತೆಗಿನ ಸಂಬಂಧದಲ್ಲಿ ಭಾರತಕ್ಕೆ ಸ್ಪಷ್ಟತೆ ಇಲ್ಲವಾ ಎಂಬ ಪ್ರಶ್ನೆ ಬರುವಂತೆ ಮಾಡಿದೆ. ಗನ್ ಪಾಯಿಂಟ್ ಮೇಲೆ ಯಾವುದೇ ಒಪ್ಪಂದವನ್ನು ಮಾಡಿಕೊಳ್ಳಲ್ಲ ಎಂದು ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಹೇಳಿದ್ದರೆ, ಅರ್ಜೆಂಟ್ ಆಗಿ ಒಪ್ಪಂದ ಮಾಡಿಕೊಳ್ಳಲು ಭಾರತ ಸಿದ್ಧತೆ ನಡೆಸಿದೆ ಎಂದು ವಿದೇಶಾಂಗ ಸಚಿವ ಎಸ್ ಜೈಶಂಕರ್ ಹೇಳಿದ್ದಾರೆ. ಇದರಿಂದ ಅಮೆರಿಕದ ವಿಚಾರದಲ್ಲಿ ಮೋದಿ ಸರ್ಕಾರಕ್ಕೆ ಸ್ಪಷ್ಟತೆ ಇಲ್ಲವಾ ಎಂಬ ಅನುಮಾನಗಳು ಕಾಡುತ್ತಿವೆ.

**ಗನ್ ಪಾಯಿಂಟ್ ಮೇಲೆ ಒಪ್ಪಂದ ಇಲ್ಲ**

ಹೌದು, ಟ್ರಂಪ್ ಬಂದ್ಮೇಲೆ ಜಗತ್ತಲ್ಲಿ ಭಾರೀ ಬದಲಾವಣೆಗಳು ಆಗುತ್ತಿವೆ. ಮೊದಲು ಪರಸ್ಪರ ಸುಂಕ ನೀತಿ ಘೋಷಿಸಿ ಬಳಿಕ 90 ದಿನಗಳ ಬ್ರೇಕ್ ನೀಡಿರುವ ಟ್ರಂಪ್ ವಿವಿಧ ದೇಶಗಳು ತನ್ನ ಜೊತೆ ಟ್ರೇಡ್ ಒಪ್ಪಂದ ಮಾಡಿಕೊಳ್ಳಲು ಒತ್ತಡ ಹಾಕುತ್ತಿದ್ದಾರೆ. ಭಾರತ ಅಮೆರಿಕದ ಜೊತೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಮುಂದಾಗಿದ್ದು, ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಈ ಒಪ್ಪಂದ ಅಂತಿಮವಾಗುತ್ತೇ ಎನ್ನಲಾಗಿತ್ತು. ಆದರೆ, ಈಗ 90 ದಿನಗಳ ಕಾಲ ಪರಸ್ಪರ ಸುಂಕಕ್ಕೆ ಬ್ರೇಕ್ ಹಾಕುವ ಮೂಲಕ ತ್ವರಿತವಾಗಿ ಒಪ್ಪಂದ ಮಾಡಿಕೊಳ್ಳಲು ಡೆಡ್‌ಲೈನ್ ನೀಡಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ವಾಣಿಜ್ಯ ಸಚಿವ ಪಿಯೂಷ್ ಗೋಯಲ್, ಭಾರತ ಎಂದಿಗೂ ಗನ್ ಪಾಯಿಂಟ್ ಮೇಲೆ ಮಾತುಕತೆಯನ್ನು ನಡೆಸಲ್ಲ ಅಥವಾ ತನ್ನ ಜನರ ಹಿತಾಸಕ್ತಿಗೆ ವಿರುದ್ಧವಾಗಿ ಯಾವುದೇ ಒಪ್ಪಂದ ಮಾಡಿಕೊಳ್ಳಲ್ಲ, ಇದಕ್ಕೆ ಆತುರಪಡಲ್ಲ ಎಂದು ಹೇಳಿದ್ದಾರೆ.

ಜಗತ್ತಿನ ಜೊತೆ ಸಂಬಂಧ ಬೆಳೆಸಿಕೊಳ್ಳುವ ತನ್ನ ವಿಧಾನವನ್ನು ಅಮೆರಿಕ ಬದಲಾಯಿಸಿರುವುದರಿಂದ ಪ್ರತಿ ಕ್ಷೇತ್ರದ ಮೇಲೂ ಅದರ ಪರಿಣಾಮ ಆಗುತ್ತಿದೆ. ನಾವು ಎಲ್ಲದನ್ನೂ ಪರಿಶೀಲಿಸುತ್ತಿದ್ದು, ನಮ್ಮ ವ್ಯಾಪಾರ ಒಪ್ಪಂದಗಳು ನಿಜವಾಗಿಯೂ ಸವಾಲಿನಿಂದ ಕೂಡಿವೆ ಎಂದಿದ್ದಾರೆ. ಇದು ಅಮೆರಿಕದ ಜೊತೆಗಿನ ಒಪ್ಪಂದಕ್ಕೆ ಭಾರತ ಸಿದ್ಧವಾಗಿರುವುದನ್ನು ಸೂಚಿಸುತ್ತಿದೆ.

ಈಗಾಗಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವ್ಯಾಪಾರ ಯುದ್ಧ ಹಲವು ದೇಶಗಳನ್ನು ಕಂಗೆಡಿಸಿದೆ. ಅದಕ್ಕೆ ಭಾರತ ಕೂಡ ಹೊರತಾಗಿಲ್ಲ. ಅಮೆರಿಕದ ವಿಚಾರದಲ್ಲಿ ಪ್ರಮುಖ ಇಲಾಖೆಗಳ ಸಚಿವರು ದ್ವಂದ್ವ ಹೇಳಿಕೆ ನೀಡುತ್ತಿರುವುದು ಭಾರತ ನೀತಿ ನಿರೂಪಣೆ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಮೋದಿ ಕಾರಣಕ್ಕೆ ಟ್ರಂಪ್ ಭಾರತದ ವಿಷಯದಲ್ಲಿ ಸ್ವಲ್ಪ ಮೃದುವಾಗಿದ್ದಾರೆ. ಆದರೆ, ಭಾರತ ಜಾಸ್ತಿ ಸುಂಕ ವಿಧಿಸುತ್ತದೆ ಎನ್ನುವ ಮೂಲಕ ಹಲವು ಸಲ ಕಿಡಿಕಾರಿದ್ದರು. ಈಗಾಗಲೇ ಪರಸ್ಪರ ಸುಂಕ ಹೊರತುಪಡಿಸಿ ಹಲವು ಉತ್ಪನ್ನಗಳ ಮೇಲೆ ಟ್ರಂಪ್ ಸುಂಕ ವಿಧಿಸಿರುವುದು ಭಾರತದ ಮೇಲೆ ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆ ಅಮೆರಿಕ ಜೊತೆ ಭಾರತ ವ್ಯಾಪಾರ ಒಪ್ಪಂದಕ್ಕೆ ಮುಂದಾಗಿದ್ದು, ಒಪ್ಪಂದ ಹೇಗಿರಲಿದೆ ಎಂಬುದನ್ನು ಕಾದು ನೋಡಬೇಕಿದೆ.




**ಇನ್ನು, ಪಿಯೂಷ್ ಗೋಯಲ್ ಅಮೆರಿಕದ ಜೊತೆ ಒಪ್ಪಂದ ಮಾಡಿಕೊಳ್ಳಲು ಯಾವುದೇ ಆತುರ ಇಲ್ಲ, ಗನ್ ಪಾಯಿಂಟ್ ಮೇಲೆ ಡೀಲ್ ಮಾಡಿಕೊಳ್ಳಲ್ಲ ಎಂದರೆ, ಅತ್ತ ವಿದೇಶಾಂಗ ಸಚಿವ ಎಸ್ ಜೈಶಂಕರ್ ಇದಕ್ಕೆ ತದ್ವಿರುದ್ಧ ಹೇಳಿಕೆಯನ್ನು ನೀಡಿದ್ದಾರೆ. ಅಮೆರಿಕಕ್ಕೆ ಸಂಬಂಧಿಸಿದಂತೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಭಾರತವೂ ತುರ್ತು ಪರಿಸ್ಥಿತಿಗೆ ಸಜ್ಜಾಗಿದೆ. ನಮಗೆ ಈಗ ಒಂದು ವಿಂಡೋ ಕಾಣುತ್ತಿದ್ದು, ಅದರೊಳಗೆ ಒಪ್ಪಂದ ಮಾಡಿಕೊಳ್ಳಲು ಬಯಸುತ್ತೇವೆ ಎನ್ನುವ ಅರ್ಥದಲ್ಲಿ ಎಸ್ ಜೈಶಂಕರ್ ಮಾತನಾಡಿದ್ದಾರೆ.**

### ಇಂಡಿಯಾ ಫಸ್ಟ್ ಎಂಬ ತತ್ವ ಪಾಲಿಸುತ್ತೇವೆ

**ನಾವು ಕೂಡ ಯಾವಾಗಲೂ ಇಂಡಿಯಾ ಫಸ್ಟ್ ಎಂಬ ತತ್ವ ಪಾಲಿಸುತ್ತೇವೆ. ಆ ಭಾವನೆಯನ್ನು ಗಮನದಲ್ಲಿಟ್ಟುಕೊಂಡು ಅಮೆರಿಕದ ಜೊತೆ ಒಪ್ಪಂದವನ್ನು ಫೈನಲ್ ಮಾಡುತ್ತೇವೆ. ಸಮಯದ ನಿರ್ಬಂಧಗಳು ನಮ್ಮನ್ನು ತ್ವರಿತ ಮಾತುಕತೆಗೆ ನೂಕುತ್ತವೆ. ಆದರೆ, ನಮ್ಮ ದೇಶ ಮತ್ತು ನಮ್ಮ ಜನರ ಹಿತಾಸಕ್ತಿಯನ್ನು ಖಚಿತಪಡಿಸಿಕೊಳ್ಳುವವರೆಗೆ ನಾವು ಯಾವುದೇ ಒಪ್ಪಂದ ಮಾಡಿಕೊಳ್ಳಲು ಆತುರಪಡಲ್ಲ ಎಂದಿದ್ದಾರೆ. ಅದಲ್ಲದೇ ನಮ್ಮ ಎಲ್ಲಾ ವ್ಯಾಪಾರ ಮಾತುಕತೆಗಳು ಭಾರತ ಮೊದಲು ಎಂಬ ತತ್ವವನ್ನು ಹೊಂದಿದ್ದು, ಅವು ಉತ್ತಮ ಪ್ರಗತಿ ಕಾಣುತ್ತಿವೆ. ಅವು 2047ರ ವೇಳೆಗೆ ವಿಕಸಿತ ಭಾರತವನ್ನು ಮಾಡಲಿವೆ ಎಂದು ಪಿಯೂಷ್ ಗೋಯಲ್ ಹೇಳಿದ್ದು, ಎರಡೂ ದೇಶಗಳು ಪರಸ್ಪರ ಅವಶ್ಯಕತೆಗೆ ತಕ್ಕಂತೆ ಮಾತುಕತೆ ನಡೆಸಿ, ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿವೆ ಎಂದರು.**

## ಅಮ್ರೂರ್ ವಲಯದಲ್ಲಿ ಭಯೋತ್ಪಾದಕರ ವಿರುದ್ಧ ಗುಂಡಿನ ಚಕಮಕಿ

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ಅಮ್ರೂರ್ ವಲಯದಲ್ಲಿ ಭಯೋತ್ಪಾದಕ ಒಳನುಸುಳುವಿಕೆ ವಿರುದ್ಧ ಗುಂಡಿನ ಚಕಮಕಿಯಲ್ಲಿ ಭಾರತೀಯ ಸೇನೆಯ ಜೂನಿಯರ್ ಕಮಿಷನ್ಡ್ ಶ್ರೇಣಿಯ ಅಧಿಕಾರಿ (ಜೆಸಿಒ) ಹುತಾತ್ಮರಾಗಿದ್ದು, ಸೇನೆ ನಡೆಸಿದ ಕಾರ್ಯಾಚಾರಣೆಯಲ್ಲಿ ಮೂವರು ಉಗ್ರರನ್ನು ಸದೆಬಡಿಯಲಾಗಿದೆ.

ಹುತಾತ್ಮ ಸೇನಾಧಿಕಾರಿಯನ್ನು ಕುಲದೀಪ್ ಚಂದ್ ಎಂದು ಗುರ್ತಿಸಲಾಗಿದೆ. ಇನ್ನು ಹತರಾದ ಉಗ್ರರ ಪೈಕಿ ಓರ್ವ ಜೈಶ್-ಎ-ಮೊಹಮ್ಮದ್ ನ ಕಮಾಂಡರ್ ಸೈಫುಲ್ಲಾ ಎಂದು ಗುರುತಿಸಲಾಗಿದೆ.

ಈತ ತಿಂಗಳುಗಳಿಂದ ಈ ಪ್ರದೇಶದಲ್ಲಿ ಸಕ್ರಿಯನಾಗಿದ್ದನು. ಸೈಫುಲ್ಲಾ ಜೈಶ್-ಎ-ಮೊಹಮ್ಮದ್ ಕಮಾಂಡರ್ ಆಗಿದ್ದು, ಕಿಶ್ ವಾರ್ ಪ್ರದೇಶದಲ್ಲಿ ಈತ ಉಗ್ರ ಸಂಘಟನೆಯನ್ನು ಮುನ್ನಡೆಸುತ್ತಿದ್ದ, ಈತನ ಇರುವಿಕೆಯ ಬಗ್ಗೆ ಖಚಿತ ಮಾಹಿತಿ ತಿಳಿದು ಕಾರ್ಯಾಚರಣೆ ಮಾಡಲಾಗಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಭದ್ರತಾ ಸಿಬ್ಬಂದಿಗಳು ತನಿಖೆಯನ್ನು ತೀವ್ರಗೊಳಿಸಿದ್ದಾರೆ.



ಕಾರ್ಯಾಚರಣೆಯ ಸ್ಥಳದಿಂದ ಶಸ್ತ್ರಾಸ್ತ್ರಗಳು, ಗುಂಡಿನ ಸಾಮಗ್ರಿಗಳು ಮತ್ತು ಇತರ ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರತಿಕೂಲ ಭೂಪ್ರದೇಶ ಮತ್ತು ಪ್ರತಿಕೂಲ ಹವಾಮಾನದ ಹೊರತಾಗಿಯೂ. ನಮ್ಮ ಕೆಚ್ಚೆದೆಯ ಸೈನಿಕರು ನಿರಂತರ ಕಾರ್ಯಾಚರಣೆಗಳನ್ನು ಮುಂದುವರೆಸಿದ್ದಾರೆ ಎಂದು ಅದು ಹೇಳಿದೆ. ಹೆಚ್ಚಿನ ಹಿಮಪಾತವಿರುವ ಪ್ರದೇಶಗಳಲ್ಲಿ ಮತ್ತು ಕಠಿಣ ಭೂಪ್ರದೇಶದಲ್ಲಿ ಭಯೋತ್ಪಾದಕರನ್ನು ಪತ್ತೆಹಚ್ಚಲು ವಿಶೇಷ ಪಡೆಗಳು ಕಾರ್ಯಾಚರಣೆ ನಡೆಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದೋಡಾ ಜಿಲ್ಲೆಯ ಭದೇವಾರ್ ಪ್ರದೇಶಕ್ಕೂ ಶೋಧ ಕಾರ್ಯಾಚರಣೆ ವಿಸ್ತರಿಸಲಾಗಿದೆ.

ಜಮ್ಮು ಪ್ರದೇಶದ ವಿವಿಧ ಗುಡ್ಡಗಾಡು ಪ್ರದೇಶಗಳ ನಡುವಿನ ಭಯೋತ್ಪಾದಕರ ಚಲನ ವಲನಗಳ ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಗುಪ್ತಚರ ಮಾಹಿತಿ

**ಗುಪ್ತಚರ ಮಾಹಿತಿಯ ಆಧಾರದ ಮೇಲೆ ಕಿಶ್ವಾರ್ ಜಿಲ್ಲೆಯ ಚತ್ರು ಅರಣ್ಯ ಪ್ರದೇಶದಲ್ಲಿ ಸೇನೆ ಮತ್ತು ಜಮ್ಮು ಮತ್ತು ಕಾಶ್ಮೀರ ಪೊಲೀಸರ ಜಂಟಿ ಕಾರ್ಯಾಚರಣೆ ಪ್ರಾರಂಭಿಸಿತು. ಈ ಕಾರ್ಯಾಚರಣೆಯಲ್ಲಿ ಯಾವುದೇ ಯೋಧರಿಗೆ ಗಾಯವಾಗಿಲ್ಲ ಎಂದು ಸೇನಾ ಮೂಲಗಳು ತಿಳಿಸಿವೆ. ಕೆಲ ದಿನಗಳಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರನ್ನು ಬೇಟೆಯಾಡುವ ಕಾರ್ಯ ನಡೆಯುತ್ತಿದೆ.**

## ಸಿಸಿಟಿವಿ ಕಣ್ಗಾವಲಿನಲ್ಲಿ ರಾಣಾ ವಿಚಾರಣೆ

**ನವದೆಹಲಿ:** ಮುಂಬೈ ದಾಳಿಯ ಪ್ರಮುಖ ಮಾಸ್ಟರ್ ಮೈಂಡ್ ಉಗ್ರ ಶಹಪೂರ್ ಹುಸೇನ್ ರಾಣಾ ವಿಚಾರಣೆ ವೇಳೆ ಪ್ರತಿ ಇಂಚಿನಲ್ಲೂ ಸಿಸಿಟಿವಿ ಕ್ಯಾಮೆರಾಗಳನ್ನು ಮೇಲ್ವಿಚಾರಣೆ ಮಾಡಲಾಗುತ್ತದೆ ಮತ್ತು 12 ಎನ್‌ಐಎ ಅಧಿಕಾರಿಗಳಿಗೆ ಮಾತ್ರ ಈ ಕೊಠಡಿ ಪ್ರವೇಶಕ್ಕೆ ಅನುಮತಿ ನೀಡಲಾಗಿದೆ.

ವಿಶೇಷ ನ್ಯಾಯಾಲಯ 18 ದಿನಗಳ ಕಾಲ ಕಸ್ಟಡಿಗೆ ನೀಡಿದ ಬಳಿಕ ಮುಂಬೈ ದಾಳಿ ಪ್ರಕರಣ ಆರೋಪಿಗೆ ನೆಲದ ಮೇಲೆ ಹಾಸಿಗೆ ಹಾಸಲಾಗಿದೆ. ಸೆಲ್ ಒಳಗಡೆಯೇ ಸ್ನಾನ ಗೃಹ ಮತ್ತು ಶೌಚಾಲಯವಿದೆ. ಊಟ, ಕುಡಿಯುವ ನೀರು, ವೈದ್ಯಕೀಯ ಸರಬರಾಜು ಎಲ್ಲವನ್ನೂ ಒಳಗಡೆಗೆ ತಲುಪಿಸಲಾಗುತ್ತದೆ. ಡ್ಯುಯಲ್ ಕ್ಯಾಮೆರಾ ಕಣ್ಣಾವಲಿನಲ್ಲಿ ಬಂಧಿಯಾಗಿರುವ ಕೊಠಡಿಯಲ್ಲೇ ವಿಚಾರಣೆ ನಡೆಯಲಿದೆ. ಎಂಟು ಕೇಂದ್ರ, ತನಿಖಾ ಮತ್ತು ಗುಪ್ತಚರ ಸಂಸ್ಥೆಗಳು ರಾಣಾನನ್ನು ವಿಚಾರಣೆಗೆ ಒಳಪಡಿಸಲು ಅವಕಾಶ ಕೋರಿವೆ.

ಅಮೆರಿಕದಿಂದ ವಿಶೇಷ ವಿಮಾನದಲ್ಲಿ ದೆಹಲಿಗೆ ಕರೆ ತಂದ ನಂತರ ರಾಣಾನನ್ನು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು. ಕೋರ್ಟ್




18 ದಿನಗಳ ಕಾಲ ಎನ್‌ಐಎ ಕಸ್ಟಡಿಗೆ ನೀಡಿದ ಬಳಿಕ ರಾಣಾನನ್ನು ಈ ವಿಶೇಷ ಸೆಲ್ನಲ್ಲಿ ಬಂಧಿಸಿ ಇಡಲಾಗಿದೆ.

ಎನ್‌ಐಎ ಕಟ್ಟಡದ ನೆಲ ಮಹಡಿಯಲ್ಲಿರುವ 14/114 ಅಡಿ ಅಳತೆಯ ಕೋಣೆಗೆ ಸಿಸಿಟಿವಿ ಹಾಕ ಲಾಗಿದ್ದು ಪ್ರತಿಯೊಂದು ಚಲನವಲನಗಳನ್ನು ಗಮನಿಸಲಾಗುತ್ತದೆ. ಈ ಕೊಠಡಿಯಲ್ಲೇ ಎಲ್ಲಾ ತನಿಖಾ ಸಂಸ್ಥೆಗಳು ರಾಣಾನನ್ನು ವಿಚಾರಣೆಗೆ ಒಳಪಡಿಸಲಿವೆ.

ರಾಣಾ ಆಗಮನದ ನಂತರ ಎನ್‌ಐಎ ಪ್ರಧಾನ ಕಚೇರಿ ಕೋಟೆಯಾಗಿ ಬದಲಾಗಿದೆ. ಹೆಚ್ಚುವರಿ ದೆಹಲಿ ಪೊಲೀಸರು ಮತ್ತು ಅರೆಸೈನಿಕ ಸಿಬ್ಬಂದಿಯನ್ನು ಹೊರಗಡೆ ಭದ್ರತೆಗೆ ನಿಯೋಜಿಸಲಾಗಿದೆ. ದೆಹಲಿಯಲ್ಲಿರುವ ರಾಷ್ಟ್ರೀಯ ತನಿಖಾ ದಳದ ಪ್ರಧಾನ ಕಚೇರಿಯಲ್ಲಿ ಬಂಧಿಸಿ ಇಡಲಾಗಿದೆ.

## ಮಿನಿ ನ್ಯೂಸ್

### ಡ್ರಗ್ಸ್ ಕಳ್ಳಸಾಗಣೆ: ಕಠ್ಮಂಡು ವಿಮಾನ ನಿಲ್ದಾಣದಲ್ಲಿ ಭಾರತೀಯರ ಬಂಧನ

**ಕಠ್ಮಂಡು:** ಡ್ರಗ್ಸ್ ಕಳ್ಳಸಾಗಣೆ ಆರೋಪದ ಮೇಲೆ ಕಠ್ಮಂಡುವಿನ ತ್ರಿಭುವನ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮೂವರು ಭಾರತೀಯ ಪ್ರಜೆಗಳನ್ನು ಬಂಧಿಸಲಾಗಿದೆ ಎಂದು ನೇಪಾಳ ಪೊಲೀಸರು ತಿಳಿಸಿದ್ದಾರೆ. ನೇಪಾಳ ಪೊಲೀಸ್ ಸುದ್ದಿ ಬುಲೆಟಿನ್ ಪ್ರಕಾರ, ಗುರುವಾರ ರಾತ್ರಿ ಕಠ್ಮಂಡು ವಿಮಾನ ನಿಲ್ದಾಣದಿಂದ 10 ಕೆಜಿಗೂ ಹೆಚ್ಚು ಡ್ರಗ್ಸ್ ಸಾಗಿಸುತ್ತಿದ್ದ ಭಾರತೀಯ ಪ್ರಜೆ ಇರ್ಫಾನ್ ಅಹ್ಮದ್ ಕಸಲಿಪರಂಬಿಲ್ ಬಶೀರ್(25)ನನ್ನು ಪೊಲೀಸರು ಬಂಧಿಸಿದ್ದಾರೆ.

ಭದ್ರತಾ ಸಿಬ್ಬಂದಿ ಬ್ಯಾಗ್‌ಗಳನ್ನು ಪರಿಶೀಲಿಸಿದಾಗ ಮಾದಕ ದ್ರವ್ಯಗಳು ಪತ್ತೆಯಾಗಿದ್ದು, ಇರ್ಫಾನ್ ನನ್ನು ಬಂಧಿಸಲಾಗಿದೆ.

ಮತ್ತೊಂದು ಘಟನೆಯಲ್ಲಿ,ಮಧ್ಯಾಹ್ನ ವಿಮಾನ ನಿಲ್ದಾಣದಿಂದ 26 ಕೆಜಿಗೂ ಹೆಚ್ಚು ಡ್ರಗ್ಸ್ ಸಾಗಿಸುತ್ತಿದ್ದ ಭಾರತೀಯ ಪ್ರಜೆಗಳಾದ ರಾಮ್ ಕುಮಾರ್(31) ಮತ್ತು ಪದಿನ್ದೆರ್ ಚಂಡಿಪುರಯ್ ಜೆಎಲ್ (35) ನನ್ನು ಪೊಲೀಸರು ಬಂಧಿಸಿದ್ದಾರೆ. ಈ ಇಬ್ಬರು ಬ್ಯಾಂಕಾಕ್‌ನಿಂದ ಕಠ್ಮಂಡುವಿಗೆ ಆಗಮಿಸಿದ್ದರು. ರಾಮ್ ಕುಮಾರ್ 11 ಕೆಜಿಗೂ ಹೆಚ್ಚು ಡ್ರಗ್ಸ್ ಸಾಗಿಸುತ್ತಿದ್ದರೆ, ಪದಿನ್ದೆರ್ 14 ಕೆಜಿಗೂ ಹೆಚ್ಚು ಡ್ರಗ್ಸ್ ಸಾಗಿಸುತ್ತಿದ್ದರು.

### ಪಾಕಿಸ್ತಾನದಲ್ಲಿ 5.3 ತೀವ್ರತೆಯ ಭೂಕಂಪ

**ಇಸ್ಲಾಮಾಬಾದ್:** ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ಬಳಿ 5.3 ತೀವ್ರತೆಯ ಭೂಕಂಪ ಸಂಭವಿಸಿದೆ ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ ವರದಿಮಾಡಿದೆ. ಶನಿವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ಭೂಕಂಪ ಸಂಭವಿಸಿದೆ, ಇದರ ಪರಿಣಾಮ ಜಮ್ಮು ಮತ್ತು ಕಾಶ್ಮೀರದಲ್ಲೂ ಭೂಮಿ ಕಂಪಿಸಿದ ಅನುಭವವಾಗಿದೆ. ಎನ್‌ಸಿಎಸ್ ಪ್ರಕಾರ, ಭೂಕಂಪನದ ಕೇಂದ್ರಬಿಂದು ಭೂಮಿಯಿಂದ 10 ಕಿಮೀ ಆಳದಲ್ಲಿ ಪತ್ತೆಯಾಗಿದೆ. ಸ್ಥಳೀಯ ಮಾಧ್ಯಮಗಳ ವರದಿ ಪ್ರಕಾರ, ಭೂಕಂಪ ಸಂಭವಿಸಿದ ಬಳಿಕ ಇಸ್ಲಾಮಾಬಾದ್‌ನಲ್ಲಿ ಯಾವುದೇ ಹಾನಿಯಾಗಲಿ, ಸಾವು-ನೋವುಗಳಾಗಲಿ ಸಂಭವಿಸಿಲ್ಲ. ಈ ಕುರಿತು ಹೆಚ್ಚಿನ ಪರಿಶೀಲನೆ ನಡೆಸಲಾಗುತ್ತಿದೆ. ಕೆಲ ದಿನಗಳ ಹಿಂದೆಯಷ್ಟೇ ಮ್ಯಾನ್ಮಾರ್ ಮತ್ತು ಥಾಯ್ಲೆಂಡ್‌ನಲ್ಲಿ ಸಂಭವಿಸಿದ್ದ ಭೂಕಂಪ ಸಾವಿರಾರು ಜನರನ್ನು ಬಲಿ ಪಡೆದಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

### ತಾಲಿಬಾನ್ ನಾಡಲ್ಲಿ ಕೂದಲು ಕತ್ತರಿಸಿದ್ರೂ ಶಿಕ್ಷೆ

• ಉದಯವಾಹಿನಿ ಕಾಬೂಲ್

ಆಫ್ಘಾನಿಸ್ತಾನದಲ್ಲಿ ಅರಾಜಕತೆಯ ಪರ್ವ ಮುಂದುವರೆದಿದೆ. ರಂಜಾನ್ ಮಾಸದಲ್ಲಿ ಮಸೀದಿಗಳಿಗೆ ಸರಿಯಾಗಿ ಹೋಗದ, ಸರಿಯಾಗಿ ಹೇರ್ ಕಟ್ ಮಾಡಿಸಿಕೊಳ್ಳದವರನ್ನು ತಾಲಿಬಾನ್ ನೈತಿಕ ವಿಭಾಗದ ಪೊಲೀಸರು ಅರೆಸ್ಟ್ ಮಾಡುತ್ತಿದ್ದಾರೆ. ತಾಲಿಬಾನ್ ನಿಯಮಗಳ ಅನುಸಾರ ಹೇರ್ ಕಟ್ ಮಾಡದ ಕ್ಷೌರಿಕರನ್ನು ಸಹ ಕಂಬಿ ಹಿಂದೆ ಕಳಿಸುತ್ತಿದ್ದಾರೆ. ಇಂತಹ ಬಂಧನಗಳಿಗೆ ಯಾವುದೇ ರೀತಿಯ ಕಾನೂನಾತ್ಮಕ ಪ್ರಕ್ರಿಯೆಗಳನ್ನು ಅನುಸರಿಸುತ್ತಿಲ್ಲ.ಎಲ್ಲಾ ಏಕಪಕ್ಷೀಯವಾಗಿ ನಡೆಯುತ್ತಿದೆ.

ಇಂತಹ ಕ್ರಮಗಳಿಂದ ಸಣ್ಣ ವ್ಯಾಪಾರಿಗಳು, ಶಿಕ್ಷಣ ಸಂಸ್ಥೆಗಳು, ಸಲೂನ್‌ಗಳು, ಟೈಲರ್‌ಗಳು, ರೆಸ್ಟೋರೆಂಟ್, ಮದುವೆ ಬಾಣಸಿಗರಿಗೆ ಕೆಲಸ ಸಿಕ್ಕದಂತಾಗಿದೆ. ಆರ್ಥಿಕ ಸಮಸ್ಯೆಗಳು ಜನರನ್ನು ಹೈರಾಣು ಮಾಡುತ್ತಿವೆ ಎಂದು ವಿಶ್ವಸಂಸ್ಥೆ ವರದಿ ತಿಳಿಸಿದೆ.

### 27ನೇ ವಯಸ್ಸಿಗೆ ಬದುಕು ಮುಗಿಸಿದ ಆಸ್ಟ್ರೇಲಿಯಾದ ಟಾಪ್ ಮಾಡೆಲ್

**ಕ್ಯಾನ್‌ಬೆರಾ:** 2015 ರಲ್ಲಿ 'ಆಸ್ಟ್ರೇಲಿಯಾದ ನೆಕ್ಸ್ಟ್ ಟಾಪ್ ಮಾಡೆಲ್'ನಲ್ಲಿ ರನ್ನರ್ ಅಪ್ ಆಗಿ ಖ್ಯಾತಿ ಗಳಿಸಿದ್ದ ಲೂಸಿ ಮಾರ್ಕೊವಿಕ್ ತನ್ನ 27ನೇ ವಯಸ್ಸಿಗೆ ನಿಧನರಾಗಿದ್ದಾರೆ.

ಲೂಸಿ ಯಶಸ್ವಿ ಮಾಡೆಲಿಂಗ್ ವೃತ್ತಿಜೀವನದಲ್ಲಿ ಹೆಸರಾಗಿದ್ದರು. ವರ್ಸೇಸ್ ಮತ್ತು ವಿಕ್ಟೋರಿಯಾ ಬೆಕ್‌ಹ್ಯಾಮ್‌ನಂತಹ ಬ್ರಾಂಡ್‌ಗಳ ಅಭಿಯಾನಗಳಲ್ಲಿ ಕಾಣಿಸಿಕೊಂಡಿದ್ದರು. ಮೇರಿ ಕ್ಲೇರ್ ಮತ್ತು ವಿವಿಧ ಅಂತರರಾಷ್ಟ್ರೀಯ ಆವೃತ್ತಿಗಳ ವೋಗ್ ಸೇರಿದಂತೆ ಉನ್ನತ ಮಟ್ಟದ ನಿಯತಕಾಲಿಕೆಗಳಲ್ಲಿ ಇವರ ಸಾಧನೆ ಬಗ್ಗೆ ವರದಿಗಳು ಪ್ರಕಟವಾಗಿದ್ದವು. ಮೂರು ವಾರಗಳ ಹಿಂದೆ ಮಾರ್ಕೊವಿಕ್ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್‌ವೊಂದನ್ನು ಹಾಕಿದ್ದರು. ತಾನು ಮೆದುಳಿನ ಅಪಧಮನಿಯ ವಿರೂಪಕ್ಕೆ ಶಸ್ತ್ರಚಿಕಿತ್ಸೆಗೆ ಒಳಗಾಗುವುದಾಗಿ ತಿಳಿಸಿದ್ದರು. ಕಾಯಿಲೆಯು ರಕ್ತನಾಳಗಳಲ್ಲಿ ಸಮಸ್ಯೆ, ಮೆದುಳಿನ ಹಾನಿ ಮತ್ತು ಪಾರ್ಶ್ವವಾಯುವಿಗೆ ಕಾರಣವಾಗಬಹುದು ಎನ್ನಲಾಗಿತ್ತು. ಲೂಸಿ ಸತತ 4 ವರ್ಷಗಳ ಕಾಲ ಈ ಕಾಯಿಲೆ ವಿರುದ್ಧ ಹೋರಾಡಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಫೋಟೊ ಕೂಡ ಹಂಚಿಕೊಂಡಿದ್ದರು. ಜೊತೆಗೆ ಮೆದುಳಿನ ಸ್ಕ್ಯಾನ್‌ನ ಚಿತ್ರವನ್ನು ಪೋಸ್ಟ್ ಮಾಡಿದ್ದರು. ಜೀವನವು ಒಂದು ಪ್ರಯಾಣ. ನಾನು ಮುಂದಿನ ಅಧ್ಯಾಯಕ್ಕೆ ಸಿದ್ಧಳಿದ್ದೇನೆಂದು ಬರೆದುಕೊಂಡಿದ್ದರು.

## ಶಿರೋಮಣಿ ಅಕಾಲಿ ದಳ ಅಧ್ಯಕ್ಷರಾಗಿ ಸುಖಬೀರ್

**ಅಮೃತಸರ:** ಶಿರೋಮಣಿ ಅಕಾಲಿ ದಳ ತನ್ನ ಹಿರಿಯ ನಾಯಕ ಸುಖಬೀರ್ ಸಿಂಗ್ ಬಾದಲ್ ಅವರನ್ನು ಮತ್ತೊಮ್ಮೆ ಪಕ್ಷದ ಅಧ್ಯಕ್ಷರಾಗಿ ಆಯ್ಕೆ ಮಾಡಿದೆ. ಇಂದು ಅಮೃತಸರದಲ್ಲಿ ನಡೆದ ಸಾಂಗಠನಿಕ ಚುನಾವಣೆಯಲ್ಲಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಳೆದ ವರ್ಷ ನವೆಂಬರ್‌ನಲ್ಲಿ ಧಾರ್ಮಿಕ ದುರಾಚಾರ (ತನ್ಖೈಯಾ) ಆರೋಪದಿಂದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.



ಕಳೆದ ವರ್ಷ ಆಗಸ್ಟ್ 30ರಂದು, ಸಿಖ್ ಧರ್ಮದ ಸರ್ವೋಚ್ಚ ಆಧ್ಯಾತ್ಮಿಕ ಸಂಸ್ಥೆಯಾದ ಅಕಾಲ್ ತಖ್ತ್, ಸುಖಬೀರ್ ಸಿಂಗ್ ಬಾದಲ್ ಅವರನ್ನು 2007ರಿಂದ 2017ರವರೆಗೆ ಎಸ್‌ಎಡಿ ಸರ್ಕಾರದ ಅವಧಿಯಲ್ಲಿ ಮಾಡಿದ ತಪ್ಪುಗಳಿಗಾಗಿ ಧಾರ್ಮಿಕ ದುರಾಚಾರಕ್ಕೆ ಒಳಗಾದವರು ಎಂದು ಘೋಷಿಸಿತ್ತು. ಈ ಆರೋಪಗಳು, 2015ರಲ್ಲಿ ಗುರು ಗ್ರಂಥ ಸಾಹಿಬ್‌ನ ಅಪವಿತ್ರತೆಗೆ ಸಂಬಂಧಿಸಿದ ಘಟನೆಗಳು ಮತ್ತು ಡೇರಾ ಸಚ್ಚಾ ಸೌದಾದ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಮ್ ಸಿಂಗ್‌ಗೆ ಕ್ಷಮಾದಾನ ನೀಡಿದ್ದಕ್ಕೆ ಸಂಬಂಧಿಸಿದ್ದವು. ಈ ಘಟನೆಯ ನಂತರ, ಬಾದಲ್ ತಮ್ಮ ರಾಜೀನಾಮೆಯನ್ನು ಪಕ್ಷದ ಕಾರ್ಯಕಾರಿ ಸಮಿತಿಗೆ ಸಲ್ಲಿಸಿದ್ದರು. ಇದನ್ನು ಈ ವರ್ಷ ಜನವರಿಯಲ್ಲಿ ಸ್ವೀಕರಿಸಲಾಯಿತು.

ಬಳಿಕ ಅಕಾಲ್ ತಖ್ತ್‌ನ ಆದೇಶದಂತೆ, ಬಾದಲ್ ಅವರು ತಮ್ಮ ಶಿಕ್ಷೆಯ ಭಾಗವಾಗಿ ಡಿಸೆಂಬರ್ 2024ರಲ್ಲಿ ಅಮೃತಸರದ ಸ್ವರ್ಣಮಂದಿರದಲ್ಲಿ ಸೇವೆ ಸಲ್ಲಿಸಿದರು. ಇದರಲ್ಲಿ ಒಂದು ದಿನ, ಗೋಲ್ಡನ್ ಟೆಂಪಲ್‌ನ ಪ್ರವೇಶದ್ವಾರದಲ್ಲಿ ಭದ್ರತಾ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುವಾಗ ಮಾಜಿ ಖಲಿಸ್ತಾನಿ ಉಗ್ರಗಾಮಿ ನಾರಾಯಣ್ ಸಿಂಗ್ ಚೌರಾ ಎಂಬಾತನಿಂದ ಗುಂಡಿನ ದಾಳಿಗೆ ಗುರಿಯಾಗಿದ್ದರು. ಆದರೆ, ಈ ದಾಳಿಯಲ್ಲಿ ಬಾದಲ್ ಗಾಯಗೊಳ್ಳದೇ ತಪ್ಪಿಸಿಕೊಂಡಿದ್ದರು.

ಪಕ್ಷದ ಮೂಲಗಳ ಪ್ರಕಾರ, ಚಂಡೀಗಢದಲ್ಲಿ ನಡೆದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಸುಖಬೀರ್ ಬಾದಲ್ ಅವರ ಹೆಸರನ್ನು ಅಧ್ಯಕ್ಷ ಸ್ಥಾನಕ್ಕೆ ಅಂತಿಮಗೊಳಿಸಲಾಯಿತು.

ಇಂದು ಅಮೃತಸರದಲ್ಲಿ ನಡೆದ ಸಾಮಾನ್ಯ ಪ್ರತಿನಿಧಿಗಳ ಸಭೆಯಲ್ಲಿ ಪಂಜಾಬ್‌ನ 117 ವಿಧಾನಸಭಾ ಕ್ಷೇತ್ರಗಳಿಂದ ಆಯ್ಕೆಯಾದ 567 ಪ್ರತಿನಿಧಿಗಳು ತಮ್ಮ ಮತವನ್ನು ಬಾದಲ್ ಪರವಾಗಿ ಚಲಾಯಿಸಿದರು. ಸುಖಬೀರ್ ಬಾದಲ್ ಅವರಿಗೆ ಹಿಂದೂಗಳು ಮತ್ತು ದಲಿತರಲ್ಲಿ ಸ್ವೀಕಾರಾರ್ಹತೆ ಇದೆ ಎಂದು ಪ್ರತಿನಿಧಿಗಳು ಹೇಳಿದ್ದಾರೆ.

## ಕೋಲ್ಕತ್ತಾದಲ್ಲಿ ವಕ್ಫ್ ಮಸೂದೆ ವಿರೋಧಿಸಿ ಪ್ರತಿಭಟನೆ

### ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಬಂಗಾಳ ಪೊಲೀಸರಿಂದ 110ಕ್ಕೂ ಹೆಚ್ಚು ಜನರ ಬಂಧನ

**ಕೋಲ್ಕತ್ತಾ:** ವಕ್ಫ್ (ತಿದ್ದುಪಡಿ) ಕಾಯ್ದೆಯ ವಿರುದ್ಧ ನಡೆದ ಪ್ರತಿಭಟನೆಯರ ವೇಳೆ ಮುಸ್ಲಿಂ ಪ್ರಾಬಲ್ಯದ ಮುರ್ಷಿದಾಬಾದ್ ಜಿಲ್ಲೆಯಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಪೊಲೀಸರು 110ಕ್ಕೂ ಹೆಚ್ಚು ಜನರನ್ನು ಬಂಧಿಸಿದ್ದಾರೆ.

ಮುರ್ಷಿದಾಬಾದ್ ಜಿಲ್ಲೆಯಲ್ಲಿ ವಕ್ಫ್ (ತಿದ್ದುಪಡಿ) ಕಾಯಿದೆ ವಿರೋಧಿಸಿ ನಡೆಸುತ್ತಿರುವ ಪ್ರತಿಭಟನೆ ಕೂಡ ಮುಂದುವರೆದಿದೆ. ಪ್ರತಿಭಟನಾಕಾರರು ಪೊಲೀಸ್ ವಾಹನಗಳು ಮತ್ತು ಬಳಿಗೆ ಬೆಂಕಿ ಹಚ್ಚಿದ್ದಾರೆ. ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಸುಟಿ ಮತ್ತು ಸಂಸರ್ಗಂಜನ್ನಲ್ಲಿ ಹೆದ್ದಾರಿತಡೆದು ವಾಹನ ಸಂಚಾರಕ್ಕೆ ಅಡ್ಡಿಪಡಿಸಿದ್ದಾರೆ.

ಅಷ್ಟೇ ಅಲ್ಲದೆ ರೈಲ್ವೆ ಹಳಿಗಳನ್ನು ತಡೆದು ರೈಲುಗಳನ್ನು ಗುರಿಯಾಗಿಸಿಕೊಂಡು ಕಲ್ಲು ತೂರಾಟ ನಡೆಸಿದ್ದಾರೆ. ಇದರೆ ಬೆನ್ನಲ್ಲೇ ಭಾರತೀಯ ರೈಲ್ವೆ ಎರಡು ರೈಲು ಸಂಚಾರವನ್ನು ರದ್ದುಗೊಳಿಸಿದೆ ಎಂದು ವರದಿಯಾಗಿದೆ. ಪ್ರತಿಭಟನಾಕಾರರು ತೃಣಮೂಲ ಕಾಂಗ್ರೆಸ್ ಸ್ಥಳೀಯ ಕಚೇರಿಯನ್ನು ಧ್ವಂಸಗೊಳಿಸಿದ್ದಾರೆ. ಇದರಿಂದಾಗಿ ಪರಿಸ್ಥಿತಿಯನ್ನು



ನಿಯಂತ್ರಿಸಲು ಪೊಲೀಸರು ಪ್ರತಿಭಟನಾಕಾರರ ಮೇಲೆ ಅಶ್ರುವಾಯು ಸಿಡಿಸಿ ಲಾಠಿ ಪ್ರಹಾರ ನಡೆಸಿದ್ದಾರೆ. ಜಂಗಿಪುರದ ಸುತಿ ಮತ್ತು ಸಂಸರ್ಗಂಜ್ ಪ್ರದೇಶಗಳಲ್ಲಿ ಪರಿಸ್ಥಿತಿ ಈಗ ನಿಯಂತ್ರಣದಲ್ಲಿದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಟ್ರಾಫಿಕ್ ಸಹಜ ಸ್ಥಿತಿಗೆ ಮರಳಿದೆ. ಸ್ಥಳದಲ್ಲಿ ಹೆಚ್ಚುವರಿಅರೆಸೇನಾ ಪಡೆಗಳನ್ನು ನಿಯೋಜಿಸಲಾಗಿದೆ ಎಂದು ಪಶ್ಚಿಮ ಬಂಗಾಳ ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರತಿಭಟನೆಯ ಕಾವು ಮಾಲ್ಡಾ, ಮುರ್ಷಿದಾಬಾದ್, ದಕ್ಷಿಣ 24 ಪರಗಣಗಳು ಮತ್ತು ಹೂಗ್ಲಿ ಜಿಲ್ಲೆಗಳಲ್ಲಿ ವ್ಯಾಪಿಸಿತ್ತು. ಈ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯಾಚರಣೆ ಕೈಗೊಂಡಿದ್ದು, ಮುರ್ಷಿದಾಬಾದ್ ಒಂದರಲ್ಲೇ 110 ಮಂದಿಯನ್ನು ಬಂಧಿಸಲಾಗಿದೆ. ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಸುಮಾರು 70 ಜನರನ್ನು ಸುಟಿಯಿಂದ ಮತ್ತು 41 ಜನರನ್ನು ಸಂಸರ್ ಗಂಜ್ನಿಂದ ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸುತಿ ಮತ್ತು ಸಮ್ಸೆರ್ಗಂಜ್ ಪ್ರದೇಶಗಳಲ್ಲಿ ಪೊಲೀಸರ ಗಸ್ತು ಹಾಕಲಾಗಿದೆ.

ಯಾರಿಗೂ ಎಲ್ಲಿಯೂ ಮತ್ತೆ ಗುಂಪುಗೂಡಲು ಅವಕಾಶವಿಲ್ಲ, ಕಾನೂನು ಮತ್ತು ಸುವ್ಯವಸ್ಥೆಯನ್ನು ಅಡ್ಡಿಪಡಿಸುವ ಯಾವುದೇ ಪ್ರಯತ್ನವನ್ನು ನಾವು ಅನುಮತಿಸುವುದಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲಿನ ವದಂತಿಗಳಿಗೆ ಗಮನ ಕೊಡಬೇಡಿ ಎಂದು ಜನರಿಗೆ ಮನವಿ ಮಾಡಿದ್ದಾರೆ.

**ಹಿಂಸಾಚಾರ ಪೀಡಿತ ಪ್ರದೇಶಗಳಲ್ಲಿ ಇಂದು ಕೂಡ ಪರಿಸ್ಥಿತಿ ಉದ್ವಿಗ್ನವಾಗಿತ್ತು. ಹಿಂಸಾಚಾರ ನಡೆದ ಅತ್ಯಂತ ಹೆಚ್ಚು ಹಾನಿಗೊಳಗಾದ ಮುರ್ಷಿದಾಬಾದ್ ಜಿಲ್ಲೆಯಲ್ಲಿ ನಿಷೇಧಾಜ್ಞೆಗಳನ್ನು ವಿಧಿಸಲಾಗಿದೆ ಮತ್ತು ಇಂಟರ್‌ನೆಟ್ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ.**


## ಅಯೋಧ್ಯೆಯ ಗೆಸ್ಟ್‌ಹೌಸ್‌ನಲ್ಲಿ ಮಹಿಳೆ ಸ್ನಾನ ಮಾಡುವ ವಿಡಿಯೋ ಸೆರೆ ಹಿಡಿದವ ಅರೆಸ್ಟ್

**ಅಯೋಧ್ಯೆ:** ಶ್ರೀ ರಾಮಮಂದಿರ ಸ್ಥಾಪಿತವಾಗಿರುವ ಅಯೋಧ್ಯೆಯಲ್ಲಿ ಪಾಪದ ಕೆಲಸ ನಡೆದಿದೆ. ಹೌದು ಶ್ರೀರಾಮಮಂದಿರದ ಬಳಿಯ ಅತಿಥಿ ಗೃಹದಲ್ಲಿ ಮಹಿಳೆಯೊಬ್ಬರು ಸ್ನಾನ ಮಾಡುತ್ತಿದ್ದಾಗ ಮೊಬೈಲ್‌ನಲ್ಲಿ ವಿಡಿಯೋ ಮಾಡುತ್ತಿದ್ದ ಹೋಟೆಲ್ ಉದ್ಯೋಗಿಯೊಬ್ಬ ರೆಡ್ ಹ್ಯಾಂಡಾಗಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

ರಾಮ ಮಂದಿರದ ಗೇಟ್ ಸಂಖ್ಯೆ 3 ರಿಂದ ಕೇವಲ 50 ಮೀಟರ್ ದೂರದಲ್ಲಿರುವ ರಾಜಾ ಗೆಸ್ಟ್ ಹೌಸ್‌ನಲ್ಲಿ ಶುಕ್ರವಾರ ಬೆಳಗ್ಗೆ 6 ಗಂಟೆ ಸುಮಾರಿಗೆ ಘಟನೆ ನಡೆದಿದೆ. ಬಹ್ರೈಚ್ ಜಿಲ್ಲೆಯ ನಿವಾಸಿ ಸೌರಭ್ ತಿವಾರಿ (25) ಬಂಧಿತ ಆರೋಪಿ. ಆತನ ಮೊಬೈಲ್ ಪರಿಶೀಲಿಸಿದಾಗ ಅದೇ ರೀತಿ ಇನ್ನಷ್ಟು ಮಹಿಳೆಯರ ವಿಡಿಯೋಗಳು ಪತ್ತೆಯಾಗಿರುವುದನ್ನು ಕಂಡು ಪೊಲೀಸರೇ ಶಾಕ್ ಆಗಿದ್ದಾರೆ.

ಗೆಸ್ಟ್‌ಹೌಸ್‌ನಲ್ಲಿದ್ದ ಅತಿಥಿಗಳ ಪೈಕಿ ಮಹಿಳೆಯೊಬ್ಬರು ಸ್ನಾನಕ್ಕೆ ತೆರಳಿದ್ದರು, ಈ ವೇಳೆ ವ್ಯಕ್ತಿಯೊಬ್ಬರ ನೆರಳನ್ನು ಗಮನಿಸಿದ್ದಾರೆ, ಬಳಿಕ ಟಿನ್ ಶೆಡ್ ಛಾವಣಿಯಿಂದ ಯಾರೋ ವಿಡಿಯೋ ಮಾಡುತ್ತಿರುವುದು ಕಂಡುಬಂದಿದೆ. ಬಳಿಕ ಆಕೆ ಸಹಾಯಕ್ಕಾಗಿ ಚೀರಿದ್ದಾಳೆ, ಕೂಡಲೇ ಹೋಟೆಲ್‌ನಲ್ಲಿದ್ದ ಪುರುಷರು ಸ್ಥಳಕ್ಕೆ ಧಾವಿಸಿ, ವಿಡಿಯೋ ಮಾಡುತ್ತಿದ್ದವನನ್ನ ಹಿಡಿದು ರಾಮಜನ್ಮಭೂಮಿ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

ಪೊಲೀಸರು ಆರೋಪಿಯ ಫೋನ್ ಪರಿಶೀಲಿಸಿದಾಗ ಇದೇ ರೀತಿ ಹಲವು ಮಹಿಳೆಯರ ವಿಡಿಯೋಗಳು ಪತ್ತೆಯಾಗಿದೆ. ಸದ್ಯ ಆರೋಪಿಯುನ್ನ ಬಂಧಿಸಿರುವ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ಮುಂದುವರಿಸಿದ್ದಾರೆ.



### ಗೆಸ್ಟ್ ಹೌಸ್‌ಗೆ ಸೀಲ್

**ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರ ಅತಿಥಿ ಗೃಹಕ್ಕೆ ಸೀಲ್ ಹಾಕಿದೆ. ಇನ್ನೂ ಈ ಕುರಿತು ಮಾತನಾಡಿರುವ ಎಡಿಎ ಕಾರ್ಯದರ್ಶಿ ಸತ್ಯೇಂದ್ರ ಸಿಂಗ್ ಮಾತನಾಡಿ, ರಾಜಾ ಅತಿಥಿ ಗೃಹವನ್ನು ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ನಿರ್ಮಿಸಲಾಗಿದೆ. ಆದ್ದರಿಂದ ಸೀಲ್ ಮಾಡಲಾಗಿದೆ. ಅದೇ ಸಂಸ್ಥೆಯಲ್ಲಿ ಇಂತಹ ಇನ್ನಷ್ಟು ಘಟನೆಗಳು ನಡೆದಿವೆಯೇ ಮತ್ತು ವೀಡಿಯೊಗಳನ್ನು ಹಂಚಿಕೊಳ್ಳಲಾಗಿದೆಯೇ ಎನ್ನುವ ಆಯಾಮದಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆಂದು ತಿಳಿಸಿದ್ದಾರೆ.**

### ವಲಸೆ ನಿಯಮ ಪಾಲಿಸದಿದ್ದರೆ ಕಠಿಣ ಕ್ರಮದ ಎಚ್ಚರಿಕೆ ನೀಡಿದ ಡಿಹೆಚ್‌ಎಸ್

# ವಲಸಿಗರ ನೋಂದಣಿ ನಿಯಮಕ್ಕೆ ಯುಎಸ್ ನ್ಯಾಯಾಲಯ ಒಪ್ಪಿಗೆ

**ವಾಷಿಂಗ್ಟನ್ ಡಿಸಿ:** ಅಮೆರಿಕದಲ್ಲಿ ವಾಸಿಸುವ ಪ್ರತಿಯೊಬ್ಬ ವಲಸಿಗರೂ, ತಮ್ಮ ದಾಖಲೆಗಳನ್ನು ಸದಾ ತಮ್ಮ ಜೊತೆ ಇಟ್ಟುಕೊಳ್ಳಬೇಕು ಎಂಬ ಅಮೆರಿಕದ ಹೋಮ್‌ಲ್ಯಾಂಡ್ ಸೆಕ್ಯೂರಿಟಿ ಇಲಾಖೆ(ಡಿಹೆಚ್‌ಎಸ್) ನಿಯಮಕ್ಕೆ, ಅಮೆರಿಕದ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರು ಒಪ್ಪಿಗೆ ಸೂಚಿಸಿದ್ದಾರೆ. ಇದರ ಬೆನ್ನಲ್ಲೇ ಡಿಹೆಚ್‌ಎಸ್ ವಲಸೆ ನಿಯಮ ಪಾಲಿಸದವರ ವಲಸಿಗರ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆಯನ್ನು ಜಾರಿಗೊಳಿಸಿದೆ.

ವಲಸೆ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ನಿರ್ಧರಿಸಿರುವ ಡಿಹೆಚ್‌ಎಸ್, ಏಪ್ರಿಲ್ 11ರಿಂದಲೇ ಈ ನಿಯಮಗಳನ್ನು ಜಾರಿಗೊಳಿಸುವ ತೀರ್ಮಾನ ಮಾಡಿದೆ. ಅಮೆರಿಕದಲ್ಲಿ ಕಾನೂನುಬದ್ಧವಾಗಿ ಕೆಲಸ ಮಾಡುವ ಅಥವಾ ವಿದ್ಯಾರ್ಥಿ ವೀಸಾದಡಿ ಶಿಕ್ಷಣ ಪಡೆಯುತ್ತಿರುವವರೂ ಕೂಡ ಈ ನಿಯಮವನ್ನು ಪಾಲಿಸಬೇಕು ಎಂದು ಡಿಹೆಚ್‌ಎಸ್ ಸ್ಪಷ್ಟಪಡಿಸಿದೆ.

ಒಂದು ವೇಳೆ ವಲಸಿಗರು ದಾಖಲೆಗಳನ್ನು ತೋರಿಸಲು ಸಾಧ್ಯವಾಗದಿದ್ದರೆ, ಅವರ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಡಿಹೆಚ್‌ಎಸ್ ಎಚ್ಚರಿಸಿದೆ. ಟ್ರಂಪ್ ಆಡಳಿತದ ಈ ಹೊಸ ನಿಯಮವು ಅಮೆರಿಕದಲ್ಲಿ ವಾಸಿಸುವ ಲಕ್ಷಾಂತರ ವಲಸಿಗರ ಮೇಲೆ ಪರಿಣಾಮ ಬೀರಲಿದೆ.

ವೀಸಾ, ಗ್ರೀನ್‌ಕಾರ್ಡ್, ಉದ್ಯೋಗದ ಅಧಿಕೃತ ದಾಖಲೆ,ಮತ್ತು ಐ-94 ದಾಖಲೆ ಹೊಂದಿರುವವರು, ಈಗಾಗಲೇ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ಆದರೆ,ಎಚ್-1ಬಿ ವೀಸಾ ಹೊಂದಿರುವವರು ಮತ್ತು ವಿದ್ಯಾರ್ಥಿ ವೀಸಾದಡಿ ಅಮೆರಿಕದಲ್ಲಿ ನೆಲೆಸಿರುವ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳು, ಕಡ್ಡಾಯವಾಗಿ ತಮ್ಮ ದಾಖಲೆಗಳನ್ನು ಯಾವಾಗಲೂ ತಮ್ಮ ಜೊತೆಯಲ್ಲಿ ಇಟ್ಟುಕೊಂಡಿರಬೇಕು ಎಂದು ಡಿಹೆಚ್‌ಎಸ್ ಸೂಚನೆ ನೀಡಿದೆ. 14 ವರ್ಷ ಮೇಲ್ಪಟ್ಟ ವಲಸಿಗ ಮಕ್ಕಳೂ ಕೂಡ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಹಾಗೆಯೇ ವಲಸಿಗರ ವಿಳಾಸ ಬದಲಾದರೆ, ಈ ಕುರಿತ ಮಾಹಿತಿಯನ್ನು 10 ದಿನಗಳ ಒಳಗೆ ಡಿಹೆಚ್‌ಎಸ್‌ಗೆ ಸಲ್ಲಿಸಬೇಕು.

ಇದಕ್ಕೆ ತಪ್ಪಿದರೆ 5,000 ಡಾಲರ್ ದಂಡ ಅಥವಾ 30 ದಿನಗಳ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ. ಇದು ಅಮೆರಿಕದಲ್ಲಿ ವಾಸಿಸುವ ಮತ್ತು ಮರಳಿ ಬರುವ ನಿಮ್ಮ ಅವಕಾಶವನ್ನು ಕಸಿದುಕೊಳ್ಳಬಹುದು.

ಈ ಕುರಿತು ಮಾತನಾಡಿರುವ ಡಿಹೆಚ್‌ಎಸ್ ಕಾರ್ಯದರ್ಶಿ ಕ್ರಿಸ್ಟಿ ನೋಮ್, ಅಮೆರಿಕಾದಲ್ಲಿ 30 ದಿನಗಳಿಗಿಂತ ಹೆಚ್ಚು ಕಾಲ ವಾಸಿಸುವ ಎಲ್ಲಾ ವಿದೇಶಿಯರು ತಮ್ಮ ಹೆಸರನ್ನು ಸರ್ಕಾರದಲ್ಲಿ ನೋಂದಾಯಿಸಿಕೊಳ್ಳಬೇಕು. ತಪ್ಪಿದರೆ ದಂಡ ಅಥವಾ ಜೈಲು ಶಿಕ್ಷೆ ವಿಧಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಡೊನಾಲ್ಡ್ ಟ್ರಂಪ್ ಆಡಳಿತವು ತನ್ನೆಲ್ಲಾ ಕಠಿಣ ವಲಸೆ ಕಾನೂನುಗಳನ್ನು ಜಾರಿಗೊಳಿಸುವ ಸ್ಪಷ್ಟ ಸಂದೇಶ ನೀಡಿದೆ. ನಮ್ಮ ದೇಶದ ಸುರಕ್ಷತೆಗಾಗಿ ಮತ್ತು ಎಲ್ಲಾ ಅಮೆರಿಕನ್ನರ ರಕ್ಷಣೆಗಾಗಿ ನಾವು ಈ ಕಠಿಣ ವಲಸೆ ನಿಯಮಗಳನ್ನು ಜಾರಿಗೆ ತರುತ್ತೇವೆ.

ಇದು ನಮ್ಮ ಕರ್ತವ್ಯ ಎಂದು ಕ್ರಿಸ್ಟಿ ನೋಮ್ ಸ್ಪಷ್ಟಪಡಿಸಿದ್ದಾರೆ.




### ಪಾಲನೆಗೆ ಕಾನೂನು ತೊಡಕು

**ಅಮೆರಿಕದಲ್ಲಿ ಅಕ್ರಮವಾಗಿ ವಾಸಿಸುವ ಭಾರತೀಯರ ಸಂಖ್ಯೆ ಸುಮಾರು 2.20 ಲಕ್ಷದಷ್ಟಿದೆ ಎಂದು ಡಿಹೆಚ್‌ಎಸ್ ಈಗಾಗಲೇ ಮಾಹಿತಿ ನೀಡಿದೆ. ಆದರೆ, ಪ್ಯೂ ರಿಸರ್ಚ್ ಸೆಂಟರ್ ಪ್ರಕಾರ ಈ ಸಂಖ್ಯೆ 7 ಲಕ್ಷಕ್ಕಿಂತ ಹೆಚ್ಚಿಲ್ಲ. ಅದೇ ರೀತಿ ವಲಸೆ ನೀತಿ ಸಂಸ್ಥೆಯ ಪ್ರಕಾರ 3.75 ಲಕ್ಷ ಭಾರತೀಯರು ಅಕ್ರಮವಾಗಿ ಅಮೆರಿಕದಲ್ಲಿ ವಾಸಿಸುತ್ತಿದ್ದಾರೆ. ಈ ಹೊಸ ನಿಯಮವು ಇಂತಹ ಅಕ್ರಮ ವಲಸಿಗರ ಮೇಲೆ ಹೆಚ್ಚು ಪರಿಣಾಮ ಬೀರಲಿದೆ.**

- **ಅಮೆರಕದಲ್ಲಿ ಅಧಿಕೃತವಾಗಿ ಜಾರಿಗೆ ಬಂತು ಕಠಿಣ ವಲಸೆ ನೀತಿ**
- **ಅಮೆರಿಕದಲ್ಲಿ ಇನ್ನು ಮುಂದೆ ವಲಸಿಗರ ನೋಂದಣಿ ಕಡ್ಡಾಯ**
- **ವಲಸೆ ನಿಯಮ ಪಾಲಿಸದಿದ್ದರೆ ಕಠಿಣ ಕ್ರಮದ ಎಚ್ಚರಿಕೆ ನೀಡಿದ ಡಿಹೆಚ್‌ಎಸ್**
- **ವಲಸಿಗರ ಮೇಲೆ ಕಠಿಣ ನಿಯಮಗಳನ್ನು ಜಾರಿಗೊಳಿಸಿದ ಟ್ರಂಪ್ ಆಡಳಿತ**


# ವಿಧ್ವಂಸ ಸೃಷ್ಟಿಸಿದ ಅಭಿಷೇಕ್ ಶರ್ಮಾ!

## 246 ರನ್‌ಗಳ ಬೃಹತ್ ಗುರಿಯನ್ನ ಚೇಸ್ ಮಾಡಿ ದಾಖಲೆ ಬರೆದ ಎಸ್‌ಆರ್‌ಎಚ್

ಅಭಿಷೇಕ್ ಶರ್ಮಾ ಫಾರ್ಮ್‌ಗೆ ಮರಳಿ, ಪಂಜಾಬ್ ನೀಡಿದ್ದ 246 ರನ್‌ಗಳ ಗುರಿಯನ್ನು 18.3 ಓವರ್‌ಗಳಲ್ಲಿ ಹೈದರಾಬಾದ್ ತಂಡ ಚೇಸ್ ಮಾಡಿ ಗೆಲ್ಲಲು ನೆರವಾದರು.

ಟೀಮ್ ಇಂಡಿಯಾ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಫಾರ್ಮ್‌ಗೆ ಮರಳಿದ್ದಾರೆ. 2025ರ ಆವೃತ್ತಿಯಲ್ಲಿ ಸಂಪೂರ್ಣ ವಿಫಲರಾಗಿದ್ದ ಎಡಗೈ ಆಟಗಾರ ಸರಿಯಾದ ಪಂದ್ಯದಲ್ಲಿ ಫಾರ್ಮ್‌ಗೆ ಮರಳಿ ಪಂಜಾಬ್ ನೀಡಿದ್ದ 246 ರನ್‌ಗಳ ಬೃಹತ್ ಗುರಿಯನ್ನ ಇನ್ನು ಎಸೆತಗಳಿರುವಂತೆಯೇ ಚೇಸ್ ಮಾಡಿ ಗೆಲ್ಲಲು ನೆರವಾದರು. ಪಂಜಾಬ್ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 245 ರನ್‌ಗಳಿಸಿತ್ತು. ಈ ಮೊತ್ತವನ್ನ ಹೈದರಾಬಾದ್ ತಂಡ 18.3 ಓವರ್‌ನಲ್ಲಿ ಗುರಿ ತಲುಪಿತು. ಅಭಿಷೇಕ್ ಶರ್ಮಾ 55 ಎಸೆತಗಳಲ್ಲಿ 14 ಬೌಂಡರಿ, 10 ಸಿಕ್ಸರ್‌ಗಳ ನೆರವಿನಿಂದ 141 ರನ್‌ಗಳಿಸಿ ಹೈದರಾಬಾದ್ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ಹೈದ್ರಾಬಾದ್‌ನ ರಾಜೀವ್ ಗಾಂಧಿ ಅಂತರ ರಾಷ್ಟ್ರೀಯ ಸ್ಟೇಡಿಯಂನಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಆರಂಭಿಕ ವಿಸ್ಫೋಟಕ ಬ್ಯಾಟ್ಸ್‌ಮನ್ ಅಭಿಷೇಕ್ ಶರ್ಮಾ ಭರ್ಜರಿ ಶತಕ ಸಿಡಿಸಿದ್ದಾರೆ. ಸತತ 5 ಪಂದ್ಯಗಳಿಂದ ಭಾರೀ ಮುಖಭಂಗಕ್ಕೆ ಒಳಗಾಗಿದ್ದ ಅಭಿಷೇಕ್ ಶರ್ಮಾ ಪಂಜಾಬ್ ಕಿಂಗ್ಸ್ ತಂಡದ ವಿರುದ್ಧ ಸಿಡಿದು ನಿಂತಿದ್ದಾರೆ.



**55 ಎಸೆತ 14 ಬೌಂಡರಿ, 10 ಸಿಕ್ಸರ್ 141 ರನ್**

ಪಂಜಾಬ್ ಕಿಂಗ್ಸ್ ತಂಡದ ಬೌಲರ್‌ಗಳನ್ನು ಮನಬಂದಂತೆ ಬೆಂಡೆತ್ತಿ ಅಭಿಷೇಕ್ ಶರ್ಮಾ ತವರಿನ ನೆಲದಲ್ಲಿ ಸೆಂಚುರಿ ಬಾರಿಸಿಯೇ ಬಿಟ್ಟರು. ಕೇವಲ 40 ಬಾಲ್‌ಗಳನ್ನು ಎದುರಿಸಿದ ಅಭಿಷೇಕ್ ಶರ್ಮಾ, 11 ಬೌಂಡರಿ ಹಾಗೂ 6 ಬಿಗ್ ಸಿಕ್ಸರ್‌ಗಳಿಂದ ಶತಕ ಸಿಡಿಸಿದರು. ಟೂರ್ನಿ ಆರಂಭದಿಂದಲೂ ಕಳಪೆ ಬ್ಯಾಟಿಂಗ್ ಮಾಡಿದ್ದ ಅಭಿಷೇಕ್ ಈಗ ಟ್ರ್ಯಾಕ್‌ಗೆ ಮರಳಿದ್ದಾರೆ. ಈ ಟೂರ್ನಿಯಲ್ಲಿ ಇಶನ್ ಕಿಶನ್, ಪ್ರಿಯಾಂಶ್ ಆರ್ಯ ಅವರ ಸೆಂಚುರಿ ಬಳಿಕ ಅಭಿಷೇಕ್ ಶರ್ಮಾರ 3ನೇ ಸೆಂಚುರಿ ಆಗಿದೆ.

ಈ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಒಟ್ಟು 55 ಎಸೆತಗಳನ್ನು ಎದುರಿಸಿದ್ದು 14 ಬೌಂಡರಿ ಹಾಗೂ 10 ಆಕಾಶದೆತ್ತರದ ಸಿಕ್ಸರ್‌ಗಳಿಂದ 141 ರನ್‌ಗಳಿಸಿ ಔಟ್ ಆದರು.

# ಗುಜರಾತ್ ಗೆಲುವಿಗೆ ಬಿಗ್ ಬ್ರೇಕ್..

## ಮಾರ್ಕ್ರಾಮ್, ಪೂರನ್ ಬ್ಯಾಟಿಂಗ್ ಅಬ್ಬರಕ್ಕೆ ತಲೆ ಬಾಗಿದ ಗಿಲ್ ಸೇನೆ

ಕಳೆದ 4 ಪಂದ್ಯಗಳಿಂದ ಸತತ ಗೆಲುವಿನ ಓಟ ಆರಂಭಿಸಿದ್ದ ಗುಜರಾತ್ ಟೈಟನ್ಸ್ ತಂಡಕ್ಕೆ ಲಕ್ನೋ ಸೂಪರ್ ಜೈಂಟ್ಸ್ ಬ್ರೇಕ್ ಹಾಕಿದೆ. ತವರಿನಲ್ಲಿ ನಡೆದ ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಲಕ್ನೋ ಟೀಮ್ ಅಮೋಘವಾದ ಗೆಲುವು ಪಡೆದಿದೆ.

ಭಾರತ ರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಲಕ್ನೋ ಕ್ಯಾಪ್ಟನ್ ರಿಷಭ್ ಪಂತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಎದುರಾಳಿ ಗುಜರಾತ್ ತಂಡದವರನ್ನು ಬ್ಯಾಟಿಂಗ್‌ಗೆ ಆಹ್ವಾನ ಮಾಡಿದರು. ಅದರಂತೆ ಬ್ಯಾಟಿಂಗ್‌ಗೆ ಆಗಮಿಸಿದ ಗುಜರಾತ್ ಪರ ನಾಯಕ ಶುಭ್‌ಮನ್ ಗಿಲ್ ಹಾಗೂ ಸಾಯಿ ಸುದರ್ಶನ್ ಅತ್ಯದ್ಭುತ ಇನ್ನಿಂಗ್ಸ್ ಕಟ್ಟಿದರು.

**ಮಾರ್ಕ್ರಾಮ್ ಅಬ್ಬರದ ಬ್ಯಾಟಿಂಗ್**

ಇದರಿಂದ ತಂಡದ ಮೊತ್ತ 120 ಆಗಿದ್ದಾಗ ಗಿಲ್ ಹಾಫ್ ಸೆಂಚುರಿ ಸಿಡಿಸಿದ ಬಳಿಕ ಪೂರನ್‌ಗೆ ಕ್ಯಾಚ್ ಕೊಟ್ಟರು. ನಾಯಕನ ಬೆನ್ನಲ್ಲೇ ಸುದರ್ಶನ್ ಕೂಡ 60 ರನ್ ಗಳಿಸಿ ಆಡುವಾಗ ಆವೇಶ್‌ಖಾನ್ ಬೌಲಿಂಗ್‌ನಲ್ಲಿ ಔಟ್ ಆಗಿ ನಡೆದರು. ಜೋಶ್ ಬಟ್ಲರ್ 16, ಸುಂದರ್ 2 ಬೇಗನೇ ಕ್ರೀಸ್ ಖಾಲಿ ಮಾಡಿದರು. ಶೆರ್ಫೇನ್ ರುದರ್ಫೋರ್ಡ್ 22 ಹಾಗೂ ಶಾರುಖ್ ಖಾನ್ ಅವರ 11 ರನ್‌ಗಳಿಂದ ಗುಜರಾತ್ ತಂಡ 181 ರನ್‌ಗಳ ಗುರಿಯನ್ನ ಲಕ್ನೋಗೆ ನೀಡಿತ್ತು. ತವರಲ್ಲಿ ಈ ಟಾರ್ಗೆಟ್ ಚೇಸ್ ಮಾಡಲು ಶುರು ಮಾಡಿದ ಲಕ್ನೋ



ಆರಂಭದಲ್ಲೇ ಬಲಿಷ್ಠ ಬ್ಯಾಟಿಂಗ್ ಮಾಡಿತು. ತಂಡದ ಮೊತ್ತ 65 ಆಗಿದ್ದಾಗ ಕ್ಯಾಪ್ಟನ್ ಪಂತ್, ಸುಂದರ್‌ಗೆ ಕ್ಯಾಚ್ ಕೊಟ್ಟು ಹೊರ ನಡೆದರು. ಮಿಚೆಲ್ ಮಾರ್ಷ್ ಅನುಪಸ್ಥಿತಿಯಲ್ಲಿ ಪಂತ್ ಆರಂಭಿಕರಾಗಿ ಕಣಕ್ಕೆ ಇಳಿದು ಬ್ಯಾಟಿಂಗ್‌ನಲ್ಲಿ ಕೊಂಚ ಸುಧಾರಣೆ ಕಂಡರು.

ಪಂತ್ ಬಳಿಕ ಕ್ರೀಸ್‌ಗೆ ನಿಕೋಲಸ್ ಪೂರನ್ ಆಗಮಿಸಿದರು. ಆದರೆ ಪಂತ್ ಜೊತೆ ಓಪನರ್ ಆಗಿ ಬಂದಿದ್ದ ಮಾರ್ಕ್ರಾಮ್ ಅಬ್ಬರದ ಬ್ಯಾಟಿಂಗ್ ಮುಂದುವರೆಸಿದ್ದರು. ಹೀಗಾಗಿಯೇ 31 ಎಸೆತದಲ್ಲಿ ಮಾರ್ಕ್ರಾಮ್ 9 ಬೌಂಡರಿ, 1 ಸಿಕ್ಸರ್‌ನಿಂದ ಭರ್ಜರಿ ಅರ್ಧಶತಕ ಸಿಡಿಸಿ ಬ್ಯಾಟ್ ಮೇಲೆತ್ತಿದರು. 58 ರನ್‌ಗಳಿಸಿ ಆಡುವಾಗ ಗಿಲ್‌ಗೆ ಕ್ಯಾಚ್ ಕೊಟ್ಟು ನಡೆದರು. ಒಬ್ಬರು ಹೋದರು ಎನ್ನುವಷ್ಟರಲ್ಲಿ ಹೊಡಿಬಡಿ ಬ್ಯಾಟಿಂಗ್ ಅನ್ನು ಪೂರನ್ ಆಗಲೇ ಆರಂಭಿಸಿದ್ದರು. ಈ ಟೂರ್ನಿಯಲ್ಲಿ ಅಮೋಘ ಬ್ಯಾಟಿಂಗ್ ಮಾಡುತ್ತಿರುವ ನಿಕೋಲಸ್ ಪೂರನ್ ಕೇವಲ 24 ಎಸೆತಗಳಲ್ಲಿ 1 ಫೋರ್ 6 ಸಿಕ್ಸರ್ ಸಮೇತ ಅದ್ಭುತವಾದ ಅರ್ಧಶತಕ ಸಿಡಿಸಿದರು. ಈ ಟೂರ್ನಿಯಲ್ಲಿ ಇದು ಪೂರನ್ ಅವರ 4ನೇ ಅರ್ಧಶತಕವಾಗಿದೆ.

61 ರನ್ ಗಳಿಸಿರುವಾಗ ರಶೀದ್ ಖಾನ್ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿ ಬೇಸರದಲ್ಲೇ ಹೆಜ್ಜೆ ಹಾಕಿದರು. ಬಳಿಕ ಬ್ಯಾಟಿಂಗ್‌ಗೆ ಬಂದ ಆಯುಷ್ ಬದೋನಿ ತಂಡ ಗೆಲ್ಲುವವರೆಗೆ ತಾಳ್ಮೆಯ ಆಟ ಆಡಿದರು. ಆಯುಷ್ ಬದೋನಿ 20 ಎಸೆತಕ್ಕೆ 28 ರನ್‌ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು.

# ಆಟಗಾರನ ಬ್ಯಾನ್ ಮಾಡಿದ ಪಾಕಿಸ್ತಾನ್



ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-18 ರಲ್ಲಿ ಮುಂಬೈ ಇಂಡಿಯನ್ಸ್ ತಂಡದ ಭಾಗವಾಗಿರುವ ಕಾರ್ಬಿನ್ ಬಾಷ್ ಅವರನ್ನು ಪಾಕಿಸ್ತಾನ್ ಸೂಪರ್ ಲೀಗ್‌ನಿಂದ ಒಂದು ವರ್ಷ ಬ್ಯಾನ್ ಮಾಡಲಾಗಿದೆ. ಇದಕ್ಕೆ ಮುಖ್ಯ ಕಾರಣ ಬಾಷ್ ಪಿಸಿಎಲ್ 2025 ಕ್ಕೆ ಕೈ ಕೊಟ್ಟಿರುವುದು.

ಈ ಬಾರಿಯ ಐಪಿಎಲ್ ಮೆಗಾ ಹರಾಜಿನಲ್ಲಿ 75 ಲಕ್ಷ ರೂ. ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡಿದ್ದ ಬಾಷ್ ಅವರನ್ನು ಯಾವುದೇ ಫ್ರಾಂಚೈಸಿ ಖರೀದಿಸಿರಲಿಲ್ಲ. ಹೀಗಾಗಿ ಬಾಷ್ ಪಾಕಿಸ್ತಾನ್ ಸೂಪರ್ ಲೀಗ್‌ಗೆ ಹೆಸರು ನೀಡಿದ್ದರು. ಅದರಂತೆ ಪಿಎಸ್‌ಎಲ್‌ನ ಪೇಶಾವರ್ ಝುಲ್ಮಿ ಫ್ರಾಂಚೈಸಿಯು ಬಾಷ್ ಅವರನ್ನು ಮುಂಬರುವ ಟೂರ್ನಿಗೆ ಆಯ್ಕೆ ಮಾಡಿಕೊಂಡಿದ್ದರು.

ಇದರ ನಡುವೆ ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದ ಸೌತ್ ಆಫ್ರಿಕಾ ವೇಗಿ ಲಿಝಾಡ್ ವಿಲಿಯಮ್ಸ್ ಮೊಣಕಾಲಿನ ಗಾಯದ ಕಾರಣ ಈ ಬಾರಿಯ ಐಪಿಎಲ್‌ನಿಂದ ಹಿಂದೆ ಸರಿದಿದ್ದರು. ಹೀಗಾಗಿ ಅವರ ಬದಲಿಯಾಗಿ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಕಾರ್ಬಿನ್ ಬಾಷ್ ಅವರನ್ನು ಆಯ್ಕೆ ಮಾಡಿಕೊಂಡಿತು.

ಇತ್ತ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಚಾನ್ಸ್ ಸಿಕ್ಕಿದ್ದೇ ತಡ, ಕಾರ್ಬಿನ್ ಬಾಷ್ ಪಾಕಿಸ್ತಾನ್ ಸೂಪರ್ ಲೀಗ್‌ನಿಂದ ಹಿಂದೆ ಸರಿದಿದ್ದಾರೆ. ಹೀಗೆ ಪಿಎಸ್‌ಎಲ್ ಒಪ್ಪಂದ ನಿಯಮವನ್ನು ಉಲ್ಲಂಘಿಸಿದಕ್ಕಾಗಿ ಇದೀಗ ಕಾರ್ಬಿನ್ ಬಾಷ್ ವಿರುದ್ಧ ಒಂದು ವರ್ಷದ ಅವಧಿಗೆ ನಿಷೇಧ ಹೇರಲಾಗಿದೆ ಎಂದು ಪಾಕಿಸ್ತಾನ್ ಕ್ರಿಕೆಟ್ ಮಂಡಳಿ ತಿಳಿಸಿದೆ.

# ಸಹ ಆಟಗಾರನನ್ನು ವಂಚಕ ಎಂದ ಧೋನಿ

ಇಂಡಿಯನ್ ಪ್ರೀಮಿಯರ್ ಲೀಗ್‌ನ 25ನೇ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಕೊಲ್ಕತ್ತಾ ನೈಟ್ ರೈಡರ್ಸ್ ತಂಡವು 8 ವಿಕೆಟ್‌ಗಳ ಜಯ ಸಾಧಿಸಿದೆ. ಚೆನ್ನೈನ ಚೆಪಾಕ್ ಮೈದಾನದಲ್ಲಿ ನಡೆದ ಈ ಪಂದ್ಯಕ್ಕೂ ಮುನ್ನ ಮಹೇಂದ್ರ ಸಿಂಗ್ ಧೋನಿ ಹಾಗೂ ಕೊಲ್ಕತ್ತಾ ನೈಟ್ ರೈಡರ್ಸ್ ತಂಡದ ಮೆಂಟರ್ ಡೆವೊನ್ ಬ್ರಾವೊ ಭೇಟಿಯಾಗಿದ್ದರು.


ನೆಟ್ಸ್‌ನಲ್ಲಿ ಅಭ್ಯಾಸ ನಡೆಸುತ್ತಿದ್ದ ಧೋನಿಯನ್ನು ಭೇಟಿಯಾಗಲು ಬಂದ ಬ್ರಾವೊನನ್ನು ಧೋನಿ ವಂಚಕ ಬಂದಿದ್ದಾನೆ ಎಂದು ಕಾಲೆಳೆದರು. ಇದಕ್ಕೆ ಮುಖ್ಯ ಕಾರಣ ಈ ಹಿಂದೆ ಬ್ರಾವೊ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬೌಲಿಂಗ್ ಕೋಚ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಆದರೆ ಈ ಬಾರಿಯ ಐಪಿಎಲ್ ಮೂಲಕ ಡೆವೊನ್ ಬ್ರಾವೊ ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಯ ಭಾಗವಾಗಿದ್ದಾರೆ. ಇತ್ತ ಸಿಎಸ್‌ಕೆಯನ್ನು ತೊರೆದು ಕೆಕೆಆರ್ ಜೊತೆಗೂಡಿರುವ ಬ್ರಾವೊ ಇದೇ ಮೊದಲ ಬಾರಿಗೆ ಧೋನಿಯನ್ನು ಭೇಟಿಯಾಗಿದ್ದಾರೆ. ಈ ವೇಳೆ ತನ್ನ ಮಾಜಿ ಸಹ ಆಟಗಾರನನ್ನು ವಂಚಕ ಎಂದು ಕರೆಯುವ ಮೂಲಕ ಧೋನಿ, ಬ್ರಾವೊ ಅವರ ಕಾಲೆಳೆದಿದ್ದಾರೆ. ಇದೀಗ ಈ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.



**ಬ್ರಾವೊ ಸಿಎಸ್‌ಕೆ ನಂಟು**

ಡೆವೊನ್ ಬ್ರಾವೊ ಚೆನ್ನೈ ಸೂಪರ್ ಕಿಂಗ್ಸ್ ಪರ 130 ಪಂದ್ಯಗಳನ್ನಾಡಿದ್ದಾರೆ. ಈ ವೇಳೆ 127 ಇನಿಂಗ್ಸ್‌ಗಳಲ್ಲಿ ಬೌಲಿಂಗ್ ಮಾಡಿರುವ ಬ್ರಾವೊ 2516 ಎಸೆತಗಳನ್ನು ಎಸೆದು 154 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಇನ್ನು 2022 ರಲ್ಲಿ ಐಪಿಎಲ್‌ಗೆ ವಿದಾಯ ಹೇಳಿದ ಬ್ರಾವೊ ಆ ಬಳಿಕ ಸಿಎಸ್‌ಕೆ ತಂಡದ ಬೌಲಿಂಗ್ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದರು.

ಆದರೀಗ ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿ ಬ್ರಾವೊ ಅವರನ್ನು 4 ತಂಡಗಳ ಮೆಂಟರ್ ಆಗಿ ನೇಮಿಸಿದೆ. ಅದರಂತೆ ಐಪಿಎಲ್‌ನಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್, ಇಂಟರ್‌ನ್ಯಾಷನಲ್ ಟಿ20 ಲೀಗ್ (ಯುಎಇ) ನಲ್ಲಿ ಅಬುಧಾಬಿ ನೈಟ್ ರೈಡರ್ಸ್, ಅಮೆರಿಕದ ಮೇಜರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಲಾಸ್ ಏಂಜಲೀಸ್ ನೈಟ್ ರೈಡರ್ಸ್, ವೆಸ್ಟ್ ಇಂಡೀಸ್‌ನ ಕೆರಿಬಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಟ್ರಿನ್‌ಬಾಗೊ ನೈಟ್ ರೈಡರ್ಸ್ ತಂಡದ ಮೆಂಟರ್ ಆಗಿ ಬ್ರಾವೊ ಕಾಣಿಸಿಕೊಳ್ಳಲಿದ್ದಾರೆ.



# ಚಿತ್ರರಂಗಕ್ಕೆ ಎಂಟ್ರಿ ಕೊಡೋಕೆ ಮೋಕ್ಷಧಾ ರೆಡಿ

ರವಿತೇಜ ಮಕ್ಕಳಾದ ಮಹಾದನ್ ಮತ್ತು ಮೋಕ್ಷಧಾ ಚಿತ್ರರಂಗದಲ್ಲಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದ್ದಾರೆ. ಮಹಾದನ್ ನಿರ್ದೇಶಕರಾಗುವ ಗುರಿ ಹೊಂದಿದ್ದರೆ, ಮೋಕ್ಷಧಾ ಅವರು ಆನಂದ್ ದೇವರಕೊಂಡ ನಟನೆಯ ಚಿತ್ರದಲ್ಲಿ ಕಾರ್ಯನಿರ್ವಾಹಕ ನಿರ್ಮಾಪಕಿಯಾಗಿ ಕೆಲಸ ಮಾಡುತ್ತಿದ್ದಾರೆ. ರವಿತೇಜ ತಮ್ಮ ಮಕ್ಕಳಿಗೆ ಚಿತ್ರರಂಗದಲ್ಲಿ ಉತ್ತಮ ಬುನಾದಿ ಹಾಕಿಕೊಡುವ ಪ್ರಯತ್ನದಲ್ಲಿದ್ದಾರೆ. ಮಾಸ್ ಮಹರಾಜ ರವಿತೇಜ ಅವರು ಚಿತ್ರರಂಗದಲ್ಲಿ ಸಕ್ರಿಯರಾಗಿದ್ದಾರೆ. ಅವರ ಕೆಲವು ಸಿನಿಮಾಗಳು ಹಿಟ್ ಆದರೆ ಇನ್ನೂ ಕೆಲವು ಫ್ಲಾಪ್ ಎನಿಸಿಕೊಂಡಿವೆ. ಈಗ ಅವರು ತಮ್ಮ ಮಕ್ಕಳಿಗೆ ಚಿತ್ರರಂಗದಲ್ಲಿ ಭದ್ರ ಬುನಾದಿ ಹಾಕುವ ಕೆಲಸ ಮಾಡುತ್ತಿದ್ದಾರೆ. ಅವರ ಮಗ ಮಹಾಧನ್ ಈಗಾಗಲೇ ಬಾಲ ಕಲಾವಿದನಾಗಿ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಈಗ ರವಿತೇಜ ಮಗಳು ಮೋಕ್ಷಧಾ ಭೂಪತಿರಾಜು ಅವರು ಸಿನಿಮಾ ರಂಗದಲ್ಲಿ ತೊಡಗಿಕೊಳ್ಳಲಿದ್ದಾರೆ ಎನ್ನಲಾಗಿದೆ. ರವಿತೇಜ ಅವರಿಗೆ ಚಿತ್ರರಂಗದಲ್ಲಿ ಎಲ್ಲಾರ ಪರಿಚಯ ಇದೆ. ಈ ಸಂದರ್ಭದಲ್ಲಿ ಮಕ್ಕಳನ್ನು ಸಿನಿಮಾ ಇಂಡಸ್ಟ್ರಿಗೆ ಪರಿಚಯಿಸಿದರೆ ಅವರಿಗೂ ಒಂದು ನೆಲೆ ಸಿಗುತ್ತದೆ ಎಂಬುದು ಇವರ ಆಲೋಚನೆ. ರವಿತೇಜ ಮಗ ಮಹಾಧನ್ ಅವರು ಶೀಘ್ರವೇ ನಿರ್ದೇಶಕರಾಗುವ ಕನಸು ಕಾಣುತ್ತಿದ್ದಾರೆ. ಈಗ ಅವರ ಮಗಳು ನಿರ್ಮಾಪಕಿ ಆಗುವ ನಿರ್ಧಾರಕ್ಕೆ ಬಂದಿದ್ದಾರೆ. ಸಿನಿಮಾ ಒಂದರಲ್ಲಿ ಕಾರ್ಯಕಾರಿ ನಿರ್ಮಾಪಕಿ ಆಗಿ ಅವರು ಕೆಲಸ ಮಾಡಲಿದ್ದಾರೆ. ಮೋಕ್ಷಧಾ ಅವರಿಗೆ ನಿರ್ಮಾಪಕಿ ಆಗುವ ಕನಸು ಇದೆ. ಆನಂದ್ ದೇವರಕೊಂಡ ನಟನೆಯ, ವಿನೋದ್ ಅನಂತೋಜು ನಿರ್ದೇಶನದ ಚಿತ್ರದ ಮೇಲುಸ್ತುವಾರಿಯನ್ನು ಮೋಕ್ಷಧಾ ನೋಡಿಕೊಳ್ಳಲಿದ್ದಾರೆ. ವಿನೋದ್ ಹಾಗೂ ಆನಂದ್ ಈ ಮೊದಲು 'ಮಿಡಲ್ ಕ್ಲಾಸ್ ಮೆಲೋಡಿ' ಹೆಸರಿನ ಸಿನಿಮಾ ಮಾಡಿದ್ದರು. ಈ ಚಿತ್ರವನ್ನು ಸಿತಾರಾ ಎಂಟರ್‌ಟೇನ್‌ಮೆಂಟ್ಸ್ ನಿರ್ಮಾಣ ಮಾಡುತ್ತಿದೆ. ಮೋಕ್ಷಧಾ ಅವರು ಕಾರ್ಯಕಾರಿ ನಿರ್ಮಾಪಕರಾಗಿ ಆಯ್ಕೆ ಆಗಿದ್ದಾರೆ. ಸಿನಿಮಾ ನಿರ್ಮಾಣ ಯಾವ ರೀತಿಯಲ್ಲಿ ಆಗುತ್ತದೆ, ಅಲ್ಲಿ ಕಾರ್ಯವೈಖರಿ ಹೇಗೆ ಎಂಬುದನ್ನು ಮಗಳಿಗೆ ತಿಳಿಸಿಕೊಡುವ ಆಲೋಚನೆ ಇವರದ್ದು. ರವಿತೇಜ ತಮ್ಮದೇ ನಿರ್ಮಾಣ ಸಂಸ್ಥೆ ಹೊಂದಿದ್ದಾರೆ. ಮೋಕ್ಷಧಾ ಅವರ ತರಬೇತಿ ಪೂರ್ಣಗೊಂಡ ನಂತರದಲ್ಲಿ ಅವರು ತಂದೆಯ ನಿರ್ಮಾಣ ಸಂಸ್ಥೆಯನ್ನು ನೋಡಿಕೊಳ್ಳಲಿದ್ದಾರೆ. ಈ ಬಗ್ಗೆ ಯಾವುದೇ ಅಧಿಕೃತ ಘೋಷಣೆ ಇಲ್ಲ.

**ಮಗಳು ನಿರ್ಮಾಪಕಿ ಆಗುವ ನಿರ್ಧಾರ**



# ಪಿಎಂಗೆ ಥ್ಯಾಂಕ್ಯೂ ಎಂದ ನಟಿ ನುಶ್ರತ್ ಭರೂಚಾ

ಬಾಲಿವುಡ್ ಬೆಡಗಿ ನುಶ್ರತ್ ಭರೂಚಾ ಕಾರ್ಯಕ್ರಮವೊಂದರಲ್ಲಿ ಪಿಎಂ ನರೇಂದ್ರ ಮೋದಿ ಅವರನ್ನು ಭೇಟಿಯಾಗಿದ್ದಾರೆ. 2023ರಲ್ಲಿ ಹಮಾಸ್ ಭಯೋತ್ಪಾದಕರ ದಾಳಿ ನಿಮಿತ್ತ ಇಸ್ರೇಲ್‌ನಲ್ಲಿ ನುಶ್ರತ್ ಸಿಕ್ಕಿಬಿದ್ದಿದ್ದರು.

**ಇಸ್ರೇಲ್‌ನಿಂದ ರಕ್ಷಿಸಿದ್ದಕ್ಕೆ ಧನ್ಯವಾದ**

ಈ ಸಂದಭದಲ್ಲಿ ಇಸ್ರೇಲ್‌ನಿಂದ ರಕ್ಷಿಸಿದ್ದಕ್ಕೆ ಪ್ರಧಾನಿ ಮೋದಿ ಅವರಿಗೆ ನಟಿ ಧನ್ಯವಾದ ತಿಳಿಸಿದ್ದಾರೆ. ಈ ಕುರಿತು ಪೋಸ್ಟ್ ಹಂಚಿಕೊಂಡಿದ್ದಾರೆ. ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲು ಅವಕಾಶ ಸಿಕ್ಕಿದ್ದಕ್ಕೆ ನುಶ್ರತ್ ಸಂತಸ ವ್ಯಕ್ತಪಡಿಸಿದ್ದಾರೆ. ಇಸ್ರೇಲ್‌ನಲ್ಲಿ ಸಿಲುಕಿಕೊಂಡಿದ್ದ ಸಂದರ್ಭದಲ್ಲಿ ನನ್ನನ್ನು ಸೇರಿ ಇನ್ನುಳಿದ ಭಾರತೀಯರನ್ನು ಕರೆತರಲು ನಿಮ್ಮ ತಂಡ ಮತ್ತು ಸರ್ಕಾರ ಕೈಗೊಂಡ ಕ್ರಮಕ್ಕಾಗಿ ಧನ್ಯವಾದಗಳು. ಮೋದಿಜೀ ಅವರೇ ನಿಮಗೆ ವೈಯಕ್ತಿಕವಾಗಿ ಧನ್ಯವಾದ ಹೇಳಲು ನನಗೆ ಅದ್ಭುತ ಸೌಭಾಗ್ಯ ಸಿಕ್ಕಿದೆ. ನಿಮ್ಮನ್ನು ಭೇಟಿಯಾಗಿ ಧನ್ಯಳಾಗಿದ್ದೇನೆ. ಇದನ್ನೂ ಜೀವನ ಪೂರ್ತಿ ಸ್ಮರಿಸುತ್ತೇನೆ ಎಂದು ನಟಿ ಬರೆದುಕೊಂಡಿದ್ದಾರೆ. 2023ರಲ್ಲಿ ಕಾರ್ಯಕ್ರಮವೊಂದಕ್ಕಾಗಿ ನಟಿ ನುಶ್ರತ್ ಇಸ್ರೇಲ್‌ಗೆ ತೆರಳಿದ್ದರು. ಈ ಸಂದರ್ಭದಲ್ಲಿ ಹಮಾಸ್ ಉಗ್ರರು ಇಸ್ರೇಲ್ ಅನ್ನು ಟಾರ್ಗೆಟ್ ಮಾಡಿದ್ದರು. ಇಸ್ರೇಲ್ ಮತ್ತು ಉಗ್ರರ ಯುದ್ಧದ ಕಾರಣದಿಂದ ಅಲ್ಲಿನ ಜನ ಜೀವನ ಅಸ್ತವ್ಯಸ್ತವಾಗಿತ್ತು. ಆಗ ನಟಿ ಕೂಡ ಇಸ್ರೇಲ್‌ನಲ್ಲಿ ಸಿಲುಕಿಕೊಂಡಿದ್ದರು. ಭಾರತದ ಶ್ರಮದ ಫಲವಾಗಿ ಸುರಕ್ಷಿತವಾಗಿ ಅವರು ತಾಯ್ನಾಡು ಭಾರತಕ್ಕೆ ಮರಳಿದ್ದರು.



# ಕಾಂತಾರ 1 ರಿಲೀಸ್ ಬಳಿಕ ಕಾಂತಾರ 2 ಸೆಟ್ಟೇರುತ್ತಾ

ಸ್ಯಾಂಡಲ್‌ವುಡ್‌ನ ರಿಷಬ್ ಶೆಟ್ರ ಕಾಂತಾರ ಚಾಪ್ಟರ್-1 ಚಿತ್ರದ ಕುತೂಹಲ ಇದ್ದೇ ಇದೆ. ಇದರ ನಡುವೆ ಇದೀಗ ಕಾಂತಾರ ಚಾಪ್ಟರ್-2 ಚಿತ್ರದ ಸುದ್ದಿ ಹೆಚ್ಚು ಕೇಳಿ ಬರ್ತಿದೆ. ಇದು ಎಷ್ಟು ನಿಜ ಅನ್ನೋ ಒಂದು ಸ್ಟೋರಿ ಇಲ್ಲಿದೆ ಓದಿ.

ರಿಷಬ್ ಶೆಟ್ರ ಕಾಂತಾರ ಚಾಪ್ಟರ್-1 ಚಿತ್ರ ಬಹುತೇಕ ಪೂರ್ಣಗೊಂಡಿದೆ. ಇನ್ನೇನು ರಿಲೀಸ್ ತಯಾರಿ ಅನ್ನೋ ಸುದ್ದಿನೂ ಇದೆ. ಆದರೆ, ಇದರ ಮಧ್ಯೆ ಈಗೊಂದು ಹೊಸ ಸುದ್ದಿ ಕೇಳಿ ಬರ್ತಿದೆ. ಕೆಜಿಎಫ್ ಚಿತ್ರದ ರೀತಿನೇ ಕಾಂತಾರ ಸರಣಿ ಸಿನಿಮಾ ಆಗುತ್ತದೆ ಅನ್ನುವ ಸುದ್ದಿ ಅದಾಗಿದೆ. ಬ್ಯಾಕ್ ಟು ಬ್ಯಾಕ್ ಅನ್ನುವ ಹಾಗೆ ಕಾಂತಾರ ಚಾಪ್ಟರ್-1 ಆದ್ಮೇಲೆ ಕಾಂತಾರ-2 ಕೂಡ ಬರುತ್ತದೆ. ಅದಕ್ಕೇನೆ ಕಾಂತಾರ ಚಾಪ್ಟರ್ 1 ಅಲ್ಲಿ ಅದರ ಲಿಂಕ್ ಇರುತ್ತದೆ ಅನ್ನೋ ನ್ಯೂಸ್ ಕೂಡ ಇದೆ. ಆದರೆ, ಅಧಿಕೃತವಾಗಿ ಈ ವಿಚಾರವನ್ನ ಯಾರೂ ಹೇಳಿಕೊಂಡಿಲ್ಲ. ಬದಲಾಗಿ ಈ ಸುದ್ದಿ ಎಲ್ಲಾರಿಗೂ ಕುತೂಹಲ ಮೂಡಿಸಿದೆ. ಅಷ್ಟೆ ವೈರಲ್ ಕೂಡ ಆಗುತ್ತಿದೆ. ಕಾಂತಾರ ಚಿತ್ರವನ್ನ ನೋಡಿದವ್ರು ಇನ್ನು ಅದೇ ಹ್ಯಾಂಗೋವರ್ ಅಲ್ಲಿಯೇ ಇದ್ದಾರೆ. ಕಾಂತಾರ ಚಾಪ್ಟರ್-1 ಸೆಟ್ಟೇರಿದಾಗ ಈ ಚಿತ್ರದ ಬಗ್ಗೇನೂ ಇನ್ನಿಲ್ಲದಂತಹ ಕುತೂಹಲ ಕ್ರಿಯೇಟ್ ಆಗಿದೆ. ಕಾಂತಾರ ಚಿತ್ರದ ಶಿವನ ಪ್ರೀಕ್ವೆಲ್ ಕಥೆಯನ್ನೆ ಈ ಚಿತ್ರದಲ್ಲಿ ಹೇಳ್ತೀವಿ ರಿಷಬ್ ಶೆಟ್ರು ಹೇಳಿಕೊಂಡಿದ್ದಾರೆ.



# ಪುಟ್ಟಗೌರಿಯ ಪ್ರೇಮಪುರಾಣ!

**ಲವ್-ಹಾರ್ಟ್ ಬ್ರೇಕ್ ಬಗ್ಗೆ ಬಾಯ್ಬಿಟ್ಟ ಸಾನ್ಯಾ**

ಇದೀಗ ಸಂದರ್ಶನವೊಂದರಲ್ಲಿ ನಟಿ ವೈಯಕ್ತಿಕ ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಅಲ್ಲದೇ ತನಗೂ ಲವ್ ಆಗಿತ್ತು, ಹಾರ್ಟ್ ಬ್ರೇಕ್ ಕೂಡ ಆಗಿತ್ತು ಎಂದು ಮಾಹಿತಿಯನ್ನು ರಿವೀಲ್ ಮಾಡಿದ್ದಾರೆ.

ಸಾನ್ಯ ಅಯ್ಯರ್ ಮಾತನಾಡಿ, ಬಿಟ್ಟುಕೊಡುವುದರಲ್ಲಿ ಪ್ರೀತಿ ಇದೆ. ನನಗೆ ಲವ್ ಆಗಿತ್ತು. ಹಾರ್ಟ್ ಬ್ರೇಕ್ ಕೂಡ ಆಗಿತ್ತು, ಸ್ಕೂಲ್‌ನಲ್ಲಿ ಕ್ರಶ್ ಆಗುತ್ತೆ. ಒಂದು ಯಶಸ್ವಿ ಲವ್ ಸ್ಟೋರಿ ಒಂದೂ ನಾನು ನನ್ನ ಜೀವನದಲ್ಲಿ ನೋಡೇ ಇರಲಿಲ್ಲ. ಬೆಳೆಯುತ್ತ ಹೇಗೆ ಆಯ್ತು ಅಂದರೆ, ನಾನು ಅವರ ಜೊತೆ ಇರಬೇಕು ಅನ್ನಲು ಶುರುವಾಯ್ತು. ನಾವು ಯಾವಾಗ ಅದರ್ ಹಾಫ್ ಅಂತ ಅನ್ಕೋತ್ತಿವೋ ಅಲ್ಲಿ ಎಡವುತ್ತಿವೆ. ಪರಿಸ್ಥಿತಿಗಳು , ಯೋಚನೆ ಮಾಡುವ ರೀತಿ ಸೇಟ್ ಆಗಿಲ್ಲ. ನನ್ನ ಪ್ರಕಾರ ಲವ್ ವರ್ಕ್ ಆಗದೇ ಇರಲು ಕಾರಣ ಇದೆ. ನಂಗೆ ಆ ಕ್ಷಣಕ್ಕೆ ತುಂಬಾ ಬೇಸರ ಕೂಡ ಆಗಿತ್ತು, ಏನಕ್ಕೆ ನನಗೆ ಯಾಕೆ ಹೀಗೆ ಆಗಬೇಕು ಅ ರೀತಿ ಯೋಚನೆ ಮಾಡಿತ್ತಿರುತ್ತಿದ್ದೆ. ಟೀನೇಜ್‌ನಲ್ಲಿ ಆದ ಲವ್ ಇದು ಎಂದರು.

ನಾನು ಏನು ಅಂದುಕೊಂಡಿದ್ದೆ ಅಂದರೆ ಏನು ಸಿಗುತ್ತೋ ಅದೇ ಪ್ರೀತಿ ಅಂದುಕೊಂಡಿದ್ದೆ, ಅನುಸರಿಸಿಕೊಂಡು ಹೋಗೋದೆ ಪ್ರೀತಿ ಅಂತ ಅಂದುಕೊಂಡಿದ್ದೆ. ನನಗೆ ಪ್ರೀತಿ ಸಿಗೋದು ಕಡಿಮೆ ಆಗಿತ್ತು. ಆದರೆ ನಾನು ಅದನ್ನ ಬ್ಲೇಮ್ ಮಾಡಕ್ಕಾಗಲ್ಲ. ಆದರೆ ಆ ಕಡೆಯಿಂದ ಸರಿಯಾದ ರೆಸ್ಪಾನ್ಸ್ ಬಂದಿಲ್ಲ ಅಂದರೆ ನಾನು ಬಿಟ್ಟು ಬಿಡಬೇಕು ಅಂತ ಅನ್ನಿಸಿತ್ತು. ಮನಸ್ಸು ಧೃಢ ಮಾಡಿಕೊಂಡು ಮುಂದೆ ಹೋದೆ. ಬದುಕಿನಲ್ಲಿ ಬೆಳಕು ಕಾಣುತ್ತ ಹೋದೆ ಎಂದಿದ್ದಾರೆ ಸಾನ್ಯ ಅಯ್ಯರ್. ರೇಖಿ ಹೀಲಿಂಗ್ ಇಂದ ನಾನು ಅದರಿಂದ ಹೊರಗೆ ಬಂದೆ.

# ಪಡ್ಡೆಹುಡುಗರ ನಶೆ ಏರಿಸಿದ ತಮನ್ನಾ



**ತಮನ್ನಾ ಭರ್ಜರಿ ಡ್ಯಾನ್ಸ್**

ಸೌತ್ ಸುಂದರಿ ತಮನ್ನಾ ಭಾಟಿಯಾಗೆ ಐಟಂ ಹಾಡೇನು ಹೊಸದಲ್ಲ. ಇದೀಗ ಮತ್ತೊಂದು ಐಟಂ ಹಾಡಿನಲ್ಲಿ ಸೆಕ್ಸಿಯಾಗಿ ಹೆಜ್ಜೆ ಹಾಕುವ ಮೂಲಕ ಪಡ್ಡೆಹುಡುಗರ ನಶೆ ಏರಿಸಿದ್ದಾರೆ. 'ರೇಡ್ 2' ಸಿನಿಮಾದಲ್ಲಿ ಅವರು ಸೊಂಟ ಬಳುಕಿಸಿದ್ದಾರೆ.

'ರೇಡ್ 2' ಸಿನಿಮಾದಲ್ಲಿ ನಶಾ ಸಾಂಗ್‌ಗೆ ಮಿಲ್ಕಿ ಬ್ಯೂಟಿ ತಮನ್ನಾ ಭರ್ಜರಿಯಾಗಿ ಡ್ಯಾನ್ಸ್ ಮಾಡಿದ್ದಾರೆ. ರಾಜ್‌ಕುಮಾರ್ ಗುಪ್ತಾ ನಿರ್ದೇಶನದ ಈ ಚಿತ್ರದಲ್ಲಿ ಅಜಯ್ ದೇವಗನ್, ರಿತೇಶ್ ದೇಶ್‌ಮುಖ್ ಹಾಗೂ ವಾಣಿ ಕಪೂರ್ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ಸದ್ಯ ನಟಿಯ ಹಾಡು ರಿಲೀಸ್ ಆಗಿದ್ದು, ಪಡ್ಡೆಹುಡುಗರ ಹಾರ್ಟ್ ಬೀಟ್ ಹೆಚ್ಚಿಸಿದೆ. ಅಜಯ್ ದೇವಗನ್ ನಟನೆಯ 'ರೇಡ್ 2' ಸಿನಿಮಾ ಇದೇ ಮೇ 1ರಂದು ಚಿತ್ರಮಂದಿರಗಳಲ್ಲಿ ರಿಲೀಸ್ ಆಗಲಿದೆ. 2018ರಲ್ಲಿ 'ರೇಡ್' ಸಿನಿಮಾ ರಿಲೀಸ್ ಆಗಿತ್ತು. ಅದರ ಸೀಕ್ವೆಲ್ ಚಿತ್ರ ಇದಾಗಿದೆ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**